

# ಕಮಲ ಪಥ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 04 | ಜುಲೈ 2024 | ಬೆಂಗಳೂರು | ₹ 10/-



ರಾಜ್ಯ ಕಾರ್ಯಕಾರಿಣಿ ವಿಶೇಷ ಸಭೆ



ರಾಜ್ಯ ಪದಾಧಿಕಾರಿಗಳ ಸಭೆ



ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಂಪಿಕ್ 2024ನಲ್ಲಿ ಭಾಗವಹಿಸಲಿರುವ ಭಾರತೀಯ ಕ್ರೀಡಾಪಟುಗಳೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ಸಂವಾದ




ಟಿ-20 ವಿಶ್ವಕಪ್ ವಿಜೇತ ಭಾರತೀಯ ತಂಡದೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ



ಮಾಸ್ಕೋದಲ್ಲಿ ಆಯೋಜಿಸಿದ್ದ ಆ್ಯಟಂ ಪೆವಿಲಿಯನ್ ಪ್ರದರ್ಶಿನಿಯಲ್ಲಿ ರಷ್ಯಾದ ಅಧ್ಯಕ್ಷ ಶ್ರೀ ವ್ಲಾಡಿಮಿರ್ ಪುಟಿನ್ ರೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ



ಆಸ್ಟ್ರಿಯಾದ ವಿಯೆನ್ನಾದಲ್ಲಿ ಆಯೋಜಿಸಿದ್ದ ದ್ವಿಪಕ್ಷೀಯ ಮಾತುಕತೆಯಲ್ಲಿ ಆಸ್ಟ್ರೀಯ ಚಾನ್ಸಲರ್ ಕಾರ್ಲ್ ನೆಹಮಾರ್ ರೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ




ಭ್ರಷ್ಟ ಕಾಂಗ್ರೆಸ್ ಸರ್ಕಾರದ ಬಹುಕೋಟಿ ಮೂಡಾ ಹಗರಣ ಖಂಡಿಸಿ ಬಿಜೆಪಿ ವತಿಯಿಂದ ಬೃಹತ್ ಪ್ರತಿಭಟನೆ

# ಹಗರಣ, ಸಿದ್ದರಾಮಯ್ಯನವರೇ ಕಾರಣ

ಕಾಂಗ್ರೆಸ್ ಸರ್ಕಾರದ ಹಗರಣಗಳೂ, ಭ್ರಷ್ಟಾಚಾರ ಪ್ರಕರಣಗಳೂ ನಿರಂತರವಾಗಿ ಹೊರಬರುತ್ತಿವೆ. ಅಧಿಕಾರಕ್ಕೆ ಬಂದ ಕೂಡಲೇ ಹಗರಣಗಳನ್ನು ನಡೆಸುವುದು ಕಾಂಗ್ರೆಸ್‌ನ ಹಳೇ ಚಾಳಿ. ಇಂದು ರಾಜ್ಯದಲ್ಲಿ ನಡೆದಿರುವುದು ಇದೇ ರೀತಿಯ ಕಾಂಗ್ರೆಸ್ ಆಡಳಿತದ ಪುನರಾವರ್ತನೆಯಷ್ಟೆ. ಮನಮೋಹನ್‌ಸಿಂಗ್ ಪ್ರಧಾನಿಯಾದಾಗ ಭೂಮಿ, ಆಕಾಶ, ಪಾತಾಳಗಳೆಲ್ಲದರಲ್ಲೂ ಭ್ರಷ್ಟಾಚಾರ ನಡೆಸಿದ ಇತಿಹಾಸ ಕಣ್ಮುಂದೆ ಇದೆ. ರಾಜ್ಯದಲ್ಲಿ ಗ್ಯಾರಂಟಿಗಳ ಆಮಿಷ ತೋರಿಸಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಇದೇ ಪರಂಪರೆಯನ್ನು ಮುಂದುವರೆಸಿದೆ.

ಆದರೆ ಪ್ರಸ್ತುತ ಬೆಳಕಿಗೆ ಬಂದಿರುವ ಕಾಂಗ್ರೆಸ್ ಸರ್ಕಾರ ನಡೆಸಿರುವ ಹಗರಣಗಳ ಸ್ವರೂಪ ತುಂಬಾ ಗಂಭೀರ ಸ್ವರೂಪದ್ದು. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಿಯಮಾವಳಿಗಳನ್ನು ಮೀರಿ ಕೋಟ್ಯಾಂತರ ಹಣವನ್ನು ಖಾಸಗಿ ಖಾತೆಗಳಿಗೆ ವರ್ಗಾವಣೆ ಮಾಡಿರುವುದು ಆತಂಕದ ವಿಷಯ. ಸಾಮಾನ್ಯ ಜನರು ಸರಕಾರದ ಸಣ್ಣದೊಂದು ಬಿಲ್‌ನ್ನು ಪಡೆಯಲು ಕಚೇರಿಗಳಿಗೆ ಅಲೆಯ ಬೇಕಾದ ದಿನಗಳಲ್ಲಿ, ಕೋಟ್ಯಾಂತರ ಹಣ ಯಾವುದೇ ನಿಯಮಗಳನ್ನು ಪಾಲಿಸದೆ ವರ್ಗಾವಣೆಯಾಗಿದೆ ಎಂದರೆ ಇದರಲ್ಲಿ ಪ್ರಭಾವಿಗಳ ಕೈವಾಡವಿರಲೇ ಬೇಕು. ಒಂದು ವೇಳೆ ನಿಗಮದ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆಯಾಗದಿದ್ದಲ್ಲಿ ಇಡೀ ಹಗರಣವನ್ನು ಕಾಂಗ್ರೆಸ್ ಸರ್ಕಾರ ಮುಚ್ಚಿ ಹಾಕುತ್ತಿತ್ತು ಎಂಬ ಅನುಮಾನಗಳಲ್ಲಿ ಹುರುಳಿದೆ.

ಇನ್ನು ಮೂಡಾದಲ್ಲಿ ನಿವೇಶನಗಳ ಹಂಚಿಕೆಯಲ್ಲಿ ಆಗಿರುವ ಹಗರಣವಂತೂ ಕಾಂಗ್ರೆಸ್ ಸರ್ಕಾರದ ದುರಾಡಳಿತಕ್ಕೆ ಒಂದು ಸ್ಪಷ್ಟ ಉದಾಹರಣೆ. ಇಲ್ಲಿಯೂ ನಿವೇಶನ ಹಂಚಿಕೆಯಲ್ಲಿ ನಿಯಮಗಳನ್ನು ಗಾಳಿಗೆ ತೂರಲಾಗಿದೆ. ಪರಿಶಿಷ್ಟ ಜಾತಿಯವನಿಗೆ ಅಲ್ಪ ಪರಿಹಾರ ನೀಡಿ ಜಮೀನನ್ನು ವಶಪಡಿಸಿಕೊಂಡ ಮೂಡಾ ಅದನ್ನು ಅಭಿವೃದ್ಧಿ ಪಡಿಸಿದ ನಂತರ, ನಿವೇಶನ ಹಂಚಿಕೆಯಾದ ನಂತರ ಡಿನೋಟಿಫೈ ಮಾಡಿದೆ. ಅದನ್ನು ಸಿದ್ದರಾಮಯ್ಯನವರ ಮೈದನ ಖರೀದಿಸಿ, ತಮ್ಮ ಸಹೋದರಿಗೆ ನೀಡಿದ್ದಾರೆ. ಇದಕ್ಕೆ ಪರಿಹಾರವಾಗಿ ಜಮೀನಿನ ಮೂಲ ಸ್ಥಳವನ್ನು ಬಿಟ್ಟು ಹೆಚ್ಚು ಬೆಲೆ ಬಾಳುವ ವಿಜಯನಗರ ಬಡಾವಣೆಯಲ್ಲಿ ನಿವೇಶನಗಳನ್ನು ಪಡೆದಿದ್ದಾರೆ. ಇದರಲ್ಲಿ ಫಲಾನುಭವಿಗಳಾಗಿರುವವರು ಸ್ವತಃ ಸಿದ್ದರಾಮಯ್ಯನವರ ಪತ್ನಿಯವರೇ.

## ಸಂಪಾದಕೀಯ

ಈ ಎರಡೂ ಪ್ರಕರಣಗಳಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಿದ್ದರಾಮಯ್ಯನವರ ಪ್ರಭಾವವಿರುವುದನ್ನು ಅಲ್ಲಗೆಳೆಯಲು ಸಾಧ್ಯವೇ ಇಲ್ಲ. ವಾಲ್ಮೀಕಿ ನಿಗಮದ ಹಗರಣದಲ್ಲಿ ಆರ್ಥಿಕ ಇಲಾಖೆಯ ಹೊಣೆ ಹೊತ್ತಿರುವವರು ಸಿದ್ದರಾಮಯ್ಯನವರೇ. ಅದೇ ರೀತಿ ಮೂಡ ಹಗರಣದಲ್ಲಿ ಫಲಾನುಭವಿಯಾಗಿರುವವರು ಸಿದ್ದರಾಮಯ್ಯನವರ ಪತ್ನಿಯವರೇ. ಆದರೆ ಎರಡೂ ಪ್ರಕರಣಗಳಲ್ಲಿ ಸಿದ್ದರಾಮಯ್ಯನವರು ಹೊಣೆಗಾರಿಕೆಯಿಂದ ನುಣುಚಿಕೊಳ್ಳುತ್ತಿರುವುದು ಅವರ ಭಂಡತನಕ್ಕೆ ಸಾಕ್ಷಿ. ಆದರೆ ಈ ಎರಡೂ ಪ್ರಕರಣಗಳಲ್ಲಿಯೂ ತಮ್ಮ ಹಾಗೂ ತಮ್ಮ ಅತ್ಯಾಪ್ತರ ರಕ್ಷಣೆಗೆ ಟೊಂಕಕಟ್ಟಿ ನಿಂತಿರುವ ಸಿದ್ದರಾಮಯ್ಯ ಎಸ್‌ಐಟಿ ಮೂಲಕ ಎರಡೂ ಹಗರಣಗಳನ್ನು ವ್ಯವಸ್ಥಿತವಾಗಿ ಮುಚ್ಚಿಹಾಕುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ಎರಡರಲ್ಲೂ ಮುಖ್ಯಮಂತ್ರಿಯವರೇ ಮುಖ್ಯ ಆರೋಪಿಯಾಗಿರುವುದರಿಂದ, ರಾಜ್ಯ ಸರಕಾರದ ಅಡಿಯಲ್ಲಿ ಬರುವ ಎಸ್‌ಐಟಿಯಿಂದ ಸಮರ್ಪಕ ತನಿಖೆ ನಡೆಯಲು ಸಾಧ್ಯವೇ ಇಲ್ಲ. ಆದ್ದರಿಂದ ತನ್ನ ಸಾಚಾತನದ ಋಜುವಾತಿಗೆ ಸಿದ್ದರಾಮಯ್ಯ ಎರಡೂ ಪ್ರಕರಣಗಳನ್ನು ಸಿಬಿಐಗೆ ಒಪ್ಪಿಸಲೇ ಬೇಕು.

ಕಾಂಗ್ರೆಸ್ ಸರ್ಕಾರದ ಹಗರಣಗಳನ್ನು ಹಿಡಿದು ಬಿಜೆಪಿ ನಿರಂತರವಾಗಿ ಹೋರಾಟ ಮಾಡುತ್ತಿದೆ. ರಾಜ್ಯ ಕಾರ್ಯಕಾರಿಣಿಯಲ್ಲಿ ಈ ಬಗ್ಗೆ ಖಂಡನಾ ನಿರ್ಣಯವನ್ನು ಅಂಗೀಕರಿಸಿರುವ ಬಿಜೆಪಿ ಎಲ್ಲಾ ಸ್ತರದಲ್ಲೂ ಹೋರಾಟವನ್ನು ತೀವ್ರಗೊಳಿಸುತ್ತಿದೆ. ಇದಲ್ಲದೆ ಬರಲಿರುವ ವಿಧಾನಸಭಾ ಅಧಿವೇಶದಲ್ಲಿಯೂ ಬಿಜೆಪಿ ಕಾಂಗ್ರೆಸ್ ಹಗರಣಗಳ ಬಗ್ಗೆ ಪ್ರಸ್ತಾಪಿಸುವ ಬಗ್ಗೆ ನಿರ್ಧರಿಸಿದೆ. ಸಂಘಟನಾತ್ಮಕವಾಗಿಯೂ ಕಾಂಗ್ರೆಸ್ ವಿರುದ್ಧ ಹೋರಾಟವನ್ನು ಮಂಡಲ ಮಟ್ಟಕ್ಕೆ ತೆಗೆದುಕೊಂಡು ಹೋಗಲು ರಾಜ್ಯ ಬಿಜೆಪಿ ತೀರ್ಮಾನ ಕೈಗೊಂಡಿದೆ.

ಬರಲಿರುವ ದಿನಗಳು ಬಿಜೆಪಿಗೆ ಹೋರಾಟದ ದಿನಗಳಾಗಿವೆ. ದಿನನಿತ್ಯ ಒಂದೊಂದು ಕಾಂಗ್ರೆಸ್ ಸರ್ಕಾರದ ಹಗರಣಗಳು ಬೆಳಕಿಗೆ ಬರುತ್ತಿರುವ ಈ ದಿನಗಳಲ್ಲಿ ಕಾಂಗ್ರೆಸ್‌ನ ದುರಾಡಳಿತವನ್ನು ನಿಯಂತ್ರಿಸಲು ಹಾಗೂ ಕೊನೆಗಾಣಿಸಲು ಪ್ರತೀ ಬಿಜೆಪಿ ಕಾರ್ಯಕರ್ತನೂ ತನ್ನೆಲ್ಲಾ ಸಮಯವನ್ನು ಹೋರಾಟಕ್ಕೆ ಮೀಸಲಿಡ ಬೇಕಾಗಿದೆ. ಕಾಂಗ್ರೆಸ್ ದುರಾಡಳಿತದಿಂದ ಜನರನ್ನು ಪಾರು ಮಾಡಬೇಕಾಗಿರುವುದು ವಿರೋಧಪಕ್ಷವಾದ ನಮ್ಮ ಜವಾಬ್ದಾರಿ. ಜನವಿರೋಧಿ ಶಕ್ತಿಗಳ ವಿರುದ್ಧದ ಹೋರಾಟ ಬಿಜೆಪಿಗೆ ಹೊಸದೇನಲ್ಲ. ಹೆಚ್ಚು ಕ್ರಿಯಾಶೀಲರಾಗೋಣ. ದುರಾಡಳಿತದಿಂದ ರಾಜ್ಯವನ್ನು ರಕ್ಷಿಸೋಣ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253


**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961


## ಸುಭಾಷಿತ



**ನಮ್ಮ ರಾಷ್ಟ್ರ ಒಂದು ವಿಶಾಲ ವೃಕ್ಷ**
**ಸ್ವರಾಜ್ಯ ಅದರ ಕಾಂಡ;**
**ಸ್ವದೇಶಿ ಮತ್ತು ಬಹಿಷ್ಕಾರ**
**ಅದರ ರೆಂಬೆಯಿದ್ದಂತೆ.**

**- ಬಾಲ ಗಂಗಾಧರ ತಿಲಕ್**




**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞ ನಗರ, ಕಾಕ್ಸ್ ಟೌನ್,
ಬೆಂಗಳೂರು 560 005


## ಈ ಸಂಚಿಕೆಯಲ್ಲಿ




**06 ರಾಜ್ಯ ಕಾರ್ಯಕಾರಿಣಿ ವಿಶೇಷ ಸಭೆ**





**10 ರಾಜ್ಯ ಪದಾಧಿಕಾರಿಗಳ ಸಭೆ**





**13 ಯೋಗ ಜಾಗತಿಕ ಕ್ಷೇಮದ ರಾಯಭಾರಿ: ಮೋದಿ**

- **ದೀವಟಿಗೆ :** ಡಾ. ಶ್ಯಾಮ ಪ್ರಸಾದ್ ಮುಖರ್ಜಿ ................................ 05
- ರಾಹುಲ್ ಅಪ್ರಬುದ್ಧ ಮಾತು... ಮೋದಿ ಪ್ರಬುದ್ಧ ಉತ್ತರ..!! ..................14
- ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಸ್ಮರಣೆ ನಿಮಿತ್ತ ವಿಶೇಷ ಕಾರ್ಯಕ್ರಮಗಳು ....16
- ನೂತನ ಸಂಸದರಿಗೆ ಸನ್ಮಾನ ....................................................19
- ಮುಡಾ ಹಗರಣ -ಸಿಎಂ ಸಿದ್ದರಾಮಯ್ಯನವರೇ ಕಾರಣ ........................20
- ಹಾಲಿನ ಪ್ರೋತ್ಸಾಹ ಧನ ಬಿಡುಗಡೆಯಲ್ಲಿ ವಿಳಂಬ -ರೈತ ಮೋರ್ಚಾ ಪ್ರತಿಭಟನೆ..29
- **ಹಿರಿಯ ಕಾರ್ಯಕರ್ತರ ಪರಿಚಯ ಮಾಲೆ :** ಶ್ರೀ ಬೋಳ ರಘುರಾಮ ಶೆಟ್ಟಿ........30
- **ಮನ್ ಕಿ ಬಾತ್**- ಭಾರತೀಯ ಸಂಸ್ಕೃತಿ ವಿಶ್ವವ್ಯಾಪಿ ................................33

ದೀವಟಿಗೆ

ತನ್ಮಯಿ ಪ್ರೇಮಕುಮಾರ್
ಲೇಖಕಿ



# ಡಾ. ಶ್ಯಾಮ ಪ್ರಸಾದ್ ಮುಖರ್ಜಿ

## (06 ಜುಲೈ 1901 – 23 ಜೂನ್ 1953)

## ರಾಜಕೀಯ ನೇತಾರ, ಸಮರಸತೆಯ ಹರಿಕಾರ

ಅದು 1939ರ ಡಿಸೆಂಬರ್, ಶ್ಯಾಮಾಪ್ರಸಾದ್ ಮುಖರ್ಜಿಯವರು ಆಗಷ್ಟೇ ಬಂಗಾಲದ ಹಿಂದೂ ಮಹಾ ಸಭಾದ ಅಧ್ಯಕ್ಷರಾಗಿದ್ದರು. ಪೂರ್ವ ಬಂಗಾಲ (ಈಗಿನ ಬಾಂಗ್ಲಾ)ದ ಗ್ರಾಮೀಣ ಭಾಗದಲ್ಲಿ ಪ್ರವಾಸ ಮಾಡುತ್ತಿದ್ದರು. ಬಾರಿಸಾಲ್, ಚಾಂದ್ಪುರ್, ಕೋಮಿಲಾ, ಬ್ರಾಮನ್ಬಾರಿಯಾ ಮೈಮೆನ್ಸಿಂಗ್, ಜಾಮಲ್ಪುರ್, ಶೇಪುರರ್, ಪಬ್ನಾ ಹೀಗೆ ಪ್ರತಿ ಜಿಲ್ಲೆಯಲ್ಲೂ ಹಿಂದೂ ಕಾರ್ಯಕರ್ತರ ಜಾಗೃತಿ, ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಭಾಷಣಗಳು, ಮೆರವಣಿಗೆ ಹೀಗೆ ಎಲ್ಲದಕ್ಕೂ ಅದ್ಧೂರಿಯ ಸ್ಪಂದನೆ ದೊರಕಿತ್ತು. ಶ್ಯಾಮಾಪ್ರಸಾದರ ಮಾತುಗಳನ್ನು ಕೇಳಲು ಜನ ಕಿಕ್ಕಿರಿದು ಸೇರುತ್ತಿದ್ದರು.

ಚಂದಪುರದ ಸಭೆಯಲ್ಲಿ ಸಂಜೆ ಚಹಾ ಕುಡಿಯುವಾಗ ಕಾರ್ಯಕರ್ತರಿಂದ ಶ್ಯಾಮಾಪ್ರಸಾದರಿಗೆ ಆ ಹಳ್ಳಿಯಲ್ಲಿ ನಡೆಯುತ್ತಿದ್ದ ಅಸ್ಪೃಶ್ಯತೆಯ ವಿಚಾರ ಗಮನಕ್ಕೆ ಬಂದಿತು. ಆ ಊರಿನ ಗೌರ್ನಿತಾಯಿ ದೇವಸ್ಥಾನದಲ್ಲಿ ಸಹಾ ಸಮುದಾಯದವರನ್ನು ಹೊರತುಪಡಿಸಿ ಅನ್ಯರಿಗೆ ಪ್ರವೇಶವಿರಲಿಲ್ಲ. ಈ ಕುರಿತಂತೆ ಹಲವಾರು ಬಾರಿ ಘರ್ಷಣೆಯೂ ಆಗಿತ್ತು. ಶ್ಯಾಮಾಪ್ರಸಾದರಿಗೆ ಆ ಗ್ರಾಮದಲ್ಲಿನ ಹಿಂದೂಗಳ ಸ್ಥಿತಿ ಹಾಗೂ ಪರಿಸ್ಥಿತಿಯ ಗಂಭೀರತೆಯ ಅರಿವಾಗಿತ್ತು.

ಅಂದು ಮುಂದಿನ ಪ್ರವಾಸ ರದ್ದು ಮಾಡಿ, ರಾತ್ರಿ ಚಂದಪುರದಲ್ಲಿಯೇ ಉಳಿದು, ಅಲ್ಲಿನ ಸ್ಥಳೀಯರೊಂದಿಗೆ, ಸಮುದಾಯದ ಮುಖಂಡರೊಂದಿಗೆ ಮಾತ್ರವಲ್ಲದೆ ಬೇರೆ ಬೇರೆ ಸಮುದಾಯದ ಮುಖಂಡರೊಂದಿಗೆ ಹಲವಾರು ಸುತ್ತಿನ ಮಾತುಕತೆಗಳನ್ನು ಶ್ಯಾಮಪ್ರಸಾದರು ನಡೆಸಿದರು. ಹಲವಾರು ಸುತ್ತಿನ ಮಾತುಕತೆಗಳಾದ ನಂತರ ಸಮುದಾಯದ ಅನೇಕರು ಒಪ್ಪಿದರೂ ಅಲ್ಲಿನ ಮುಖಂಡರು ಮಾತ್ರ ಒಪ್ಪಿರಲಿಲ್ಲ.

ಅಲ್ಲ ಸ್ವಾಮಿ, ನಮ್ಮ ದೇವಸ್ಥಾನಕ್ಕೆ ಇತರೆ ಜನಾನ ಯಾಕೆ ಬಿಡಬೇಕು?, ಅವರಿಗೆ ಬೇರೆ ದೇವಸ್ಥಾನ ಇದೆ, ನಮಗೆ ಬೇರೆ ದೇವಸ್ಥಾನ ಇದೆ, ನಮ್ಮ ಜಾತಿ ನಮಗೆ, ಅವರ ಜಾತಿ ಅವರಿಗೆ, ನಾವು ಅಲ್ಲಿನ ದೇವಸ್ಥಾನಕ್ಕೆ ಹೋಗಲ್ಲ, ಅವರು ಇಲ್ಲಿ ಬರೋದು ಬೇಡ ಎನ್ನುತ್ತಾ ದನಿ ಏರಿಸಿ ನ್ಯಾಯ ಪಂಚಾಯಿತಿ ಆರಂಭಿಸಿದರು.

ಅವರ ಮಾತನ್ನು ಶಾಂತವಾಗಿಯೇ ಆಲಿಸಿದ ಶ್ಯಾಮ ಪ್ರಸಾದರು ಸ್ಥಿತಪ್ರಜ್ಞರಾಗಿ ಸರಿ ಜಾತಿಗೊಂದೊಂದು ದೇವಸ್ಥಾನ ಮಾಡಿದರೆ, ದೇವರು ಬದಲಾಗುತ್ತಾನೇನು? ಅಥವಾ ದೇವರ ಶಕ್ತಿ ಬದಲಾಗುತ್ತೇನು? ಎಂದು ಕೇಳಿದರು. ಊರಿನ ಮುಖಂಡರು ಮಾತಾಡದೆ ತಲೆ ತಗ್ಗಿಸಿದರು.

ಇಲ್ಲ, ಇದು ನಿಮಗೆ ವೈಯಕ್ತಿಕವಾಗಿ ಕೇಳಿದ್ದಲ್ಲ, ನೋಡಿ ಜಾತಿಗೊಂದು ದೇವಸ್ಥಾನ ಕಟ್ಟಿ ಹಿಂದೂಗಳನ್ನು ಮೇಲ್ಜಾತಿ, ಕೀಳ್ಜಾತಿ ಎಂದು ನೂರು ಚೂರು ಮಾಡಿ ಕೊನೆಗೆ ನಮ್ಮ ಬೆನ್ನಿಗೆ ಚೂರಿ ಹಾಕುವ ಸಂಚು ನಡೆಯುತ್ತಿದೆ, ನಮ್ಮ ನಡುವಿನ ಜಗಳದಲ್ಲಿ ಮತ್ತೊಬ್ಬ ಬೇಳೆ ಬೇಯಿಸಿಕೊಳ್ಳುತ್ತಾನೆ, ಅರ್ಥ ಮಾಡಿಕೊಳ್ಳದಿದ್ದರೆ ನಾವು ನಮ್ಮ ದೇಶದಲ್ಲೇ ಭಿಕಾರಿಗಳಾಗಬೇಕಾದೀತು, ಎಚ್ಚರ ಎಂದು ಹೇಳಿದರು. ಊರಿನ ಮುಖಂಡರು ನಮ್ಮ ಜಾತಿಗೆ ಅಂತ ದೇವಸ್ಥಾನ ಮಾಡೋದು ತಪ್ಪು ಅಂತೀರಾ, ನಮ್ಮ ಜಾತಿಯವರೆಲ್ಲಾ ಒಟ್ಟಾಗಬಾರದಾ? ಎಂದು ಕೇಳಿದಾಗ, ಶ್ಯಾಮ ಪ್ರಸಾದರು ಇಲ್ಲ, ಜಾತಿಗಳು ನಮ್ಮನ್ನ ಜೋಡಿಸಬೇಕು, ಸಹಬಾಳ್ವೆಗೆ ದಾರಿ ಮಾಡಿಕೊಡಬೇಕು, ಈ ದೇವಸ್ಥಾನ ನಿಮ್ಮ ಜಾತಿಯದ್ದೇ ಆಗಿರಲಿ, ಆ ಸಮುದಾಯದ ದೈವಭಕ್ತಿಗೆ ನಮ್ಮದೂ ಒಂದು ಗೌರವಪೂರ್ಣ ನಮಸ್ಕಾರ, ಆದರೆ ಅದರ ದ್ವಾರಗಳು ಕೇವಲ ನಿಮ್ಮ ಜಾತಿಯವರಿಗೆ ಮಾತ್ರ ಎಂಬ ಸಂಕುಚಿತತೆ ಯಾಕೆ?, ಹಿಂದೂಗಳಾಗಿ ಯೋಚನೆ ಮಾಡುವುದು ಕಲಿಯದಿದ್ದರೆ ನಾಳೆ ಜಾತಿ, ಜಾತಿಗೊಂದು ದೇವಸ್ಥಾನ ಹಾಗಿರಲಿ, ಹೆಸರಿಗೂ ನಾವ್ಯಾರೂ ಇರುವುದಿಲ್ಲ. ನೆನಪಿರಲಿ ಒಂದಾದರೆ ಮಾತ್ರ ಉಳಿದೇವು ಎನ್ನುತ್ತಾ ಎಲ್ಲರ ಮನವೊಲಿಸಿದರು.

ಮೌನದ ನಂತರ, ಸಮುದಾಯದ ಮುಖಂಡ ಎದ್ದು ನಿಂತು, ಇನ್ನುಮುಂದೆ ನಮ್ಮ ಸಮುದಾಯಕ್ಕೆ ಸೇರಿದ ದೇವಸ್ಥಾನಕ್ಕೆ ಹಿಂದೂಗಳೆಲ್ಲರಿಗೆ ಪ್ರವೇಶವಿದೆ! ಎಂದು ಘೋಷಿಸಿದ. ಶ್ಯಾಮಪ್ರಸಾದರ ನೇತೃತ್ವದಲ್ಲಿ ಎಲ್ಲಾ ಸಮುದಾಯದ ಮುಖಂಡರೂ ಒಟ್ಟಿಗೆ ಆ ದೇವಸ್ಥಾನವನ್ನು ಪ್ರವೇಶ ಮಾಡಿ, ಪೂಜೆ ಸಲ್ಲಿಸಿದರು. ಅಷ್ಟೇ ಅಲ್ಲದೇ ರಾತ್ರಿ ಸಹಪಂಕ್ತಿ ಭೋಜನವನ್ನೂ ಏರ್ಪಡಿಸಿದರು. ಹೀಗೆ ಚಾಂದ್ ಪುರದ ಗೌರ್ನಿತಾಯಿ ದೇವಸ್ಥಾನವನ್ನು, ಶೇರ್ಪುರದ ರಘುನಾಥ್ ಜಿಯು ದೇವಸ್ಥಾನವನ್ನು ಸಾರ್ವಜನಿಕರಿಗೆ ಪ್ರವೇಶ ನೀಡುವಂತೆ ಮನವೊಲಿಸಿ ಎಲ್ಲಾ ವರ್ಗದ ಜನರೂ ಪೂಜೆ ಸಲ್ಲಿಸುವ ವ್ಯವಸ್ಥೆ ಮಾಡಿದರು.

ರಾಜಕೀಯ ನೇತಾರರಾಗಿದ್ದರೂ ಹಿಂದುತ್ವದ ದೃಷ್ಟಿಯಿಂದ, ಸಾಮಾಜಿಕ ಸಮರಸತೆಯ ದೃಷ್ಟಿಯಿಂದ ಶ್ಯಾಮಾಪ್ರಸಾದ್ ಮುಖರ್ಜಿಯವರು ಪ್ರಗತಿಪರ ಚಿಂತನೆಯುಳ್ಳವರಾಗಿದ್ದರು. 1948ರಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಶ್ಯಾಮಾಪ್ರಸಾದ ಮುಖರ್ಜಿಯವರು ಸಂಸತ್ತಿನಲ್ಲಿ ಭೇಟಿಯಾದಾಗ ಈ ಕುರಿತು ಡಾ. ಬಿ.ಆರ್. ಅಂಬೇಡ್ಕರರು ಶ್ಯಾಮಾಪ್ರಸಾದ್ ಮುಖರ್ಜಿ ರವರಿಗೆ ಅಭಿನಂದನೆ ಸಲ್ಲಿಸಿದ್ದರು.

# ರಾಜ್ಯ ಕಾರ್ಯಕಾರಿಣಿ ವಿಶೇಷ ಸಭೆ




## ಸ್ಥಳೀಯ ಚುನಾವಣೆಗಾಗಿ ಯೋಜನೆ ಮತ್ತು ಗೆಲುವಿಗೆ ಅಭಿನಂದನೆ, ಹಗರಣಗಳ ಸರಕಾರದ ಖಂಡನೆ



ಅಜಿತ್ ಶೆಟ್ಟಿ ಹೆರಂಜೆ
ಸಹ ಸಂಚಾಲಕರು
ರಾಜ್ಯ ಪ್ರಕಾಶನ ಪ್ರಕೋಷ್ಠ

**ಮುಂ**ಬರುವ ಸ್ಥಳೀಯ ಸಂಸ್ಥೆಗಳ ಚುನಾವಣಾ ದೃಷ್ಟಿಯಿಂದ ಸಂಘಟನೆಯನ್ನು ಸಜ್ಜುಗೊಳಿಸಲು ರಾಜ್ಯ ವಿಶೇಷ ಕಾರ್ಯಕಾರಿಣಿಯನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಜುಲೈ 4 ರಂದು ಆಯೋಜಿತವಾಗಿತ್ತು. ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ ವಿಜಯೇಂದ್ರರವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿಣಿಯ ಉದ್ಘಾಟನೆಯನ್ನು ರಾಜ್ಯ ಉಸ್ತುವಾರಿಗಳಾದ ಶ್ರೀ ರಾಧಾ ಮೋಹನ್ ದಾಸ್ ಅಗರ್ವಾಲ್ ರವರು ನೆರವೇರಿಸಿದರು. ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿಯವರು ಸಮಾರೋಪ ನುಡಿಗಳನ್ನಾಡಿದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ, ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಕೇಂದ್ರ ಸಚಿವರಾದ ಕು. ಶೋಭಾ ಕರಂದ್ಲಾಜೆ, ಶ್ರೀ ವಿ. ಸೋಮಣ್ಣ, ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಶ್ರೀ ನಳಿನ್‌ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದಗೌಡ, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಉಪ ಮುಖ್ಯಮಂತ್ರಿ ಮತ್ತು ಸಂಸದ ಶ್ರೀ ಗೋವಿಂದ ಕಾರಜೋಳ, ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ್, ಮಾಜಿ ಸಚಿವ ಶ್ರೀ ಬಿ. ಶ್ರೀರಾಮುಲು, ಪುದುಚರಿ ರಾಜ್ಯ ಉಸ್ತುವಾರಿಗಳಾದ ಶ್ರೀ ನಿರ್ಮಲ್ ಕುಮಾರ್ ಸುರಾಣ, ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ.ರವಿ ಮೊದಲಾದವರು ಕಾರ್ಯಕಾರಿಣಿಯಲ್ಲಿ ಭಾಗವಹಿಸಿದ್ದರು.

## ಕಾರ್ಯಕರ್ತರ ಪರಿಶ್ರಮದ ಫಲ



ದೇಶದ ಕಾರ್ಯಕರ್ತರ ಪರಿಶ್ರಮದ ಫಲದಿಂದ ಬಿಜೆಪಿ ಐತಿಹಾಸಿಕ ಗೆಲುವನ್ನು ಸಾಧಿಸಲು ಸಾಧ್ಯವಾಗಿದ್ದು, ಪೊಳ್ಳು ಭರವಸೆ ಮೂಲಕ ಅಧಿಕಾರ ಪಡೆಯಲು ಯತ್ನಿಸಿದ್ದ ಕಾಂಗ್ರೆಸ್ ಕೂಟವನ್ನು ದೇಶದ ಜನತೆ ತಿರಸ್ಕರಿಸಿದ್ದಾರೆ ಎಂದು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರು ತಿಳಿಸಿದರು.

ರಾಜ್ಯ ವಿಶೇಷ ಕಾರ್ಯಕಾರಿಣಿಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಪಾಪದ ಕೊಡ ತುಂಬುತ್ತಿದ್ದು ಅಸ್ಥಿರತೆ ಕಾಡುತ್ತಿದೆ. ಕಾಂಗ್ರೆಸ್ ಒಳಜಗಳ ಮಿತಿ ಮೀರಿದೆ. ಹಾದಿ ಬೀದಿ ಹೊಡೆದಾಟ ಮುಂದುವರೆದಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸ್ಥಾನಕ್ಕಾಗಿ ಕೂಗು, ಅಭಿವೃದ್ಧಿಗಾಗಿ ಹಣ ಕೇಳಿ ಕೂಗು ಕೇಳಿಸುತ್ತಿದೆ ಎಂದು ವಿಶ್ಲೇಷಿಸಿದರು.

18 ರಿಂದ 20 ಸ್ಥಾನ ಗೆಲ್ಲುವ ಭ್ರಮೆಯಲ್ಲಿದ್ದ ಕಾಂಗ್ರೆಸ್ ಸರ್ಕಾರಕ್ಕೆ ನಮ್ಮ ಕಾರ್ಯಕರ್ತರು ಪಾಠ ಕಲಿಸಿದ್ದಾರೆ. ಅವರ ಪರಿಶ್ರಮದಿಂದ, ಕಾಂಗ್ರೆಸ್‌ನ ದಬ್ಬಾಳಿಕೆಯ ನಡುವೆಯೂ ಎನ್‌ಡಿಎನ 19 ಸಂಸದರು ಗೆಲುವು ಸಾಧಿಸಿದ್ದಾರೆ. ಕಾಂಗ್ರೆಸ್‌ನ ಪೊಳ್ಳು ಭರವಸೆ, ಒಡೆದಾಳುವ ನೀತಿ, ತುಷ್ಟೀಕರಣದ ನೀತಿಯನ್ನು ಜನರು ಧಿಕ್ಕರಿಸಿ ನಮಗೆ ಬೆಂಬಲ ನೀಡಿದ್ದಾರೆ ಎಂದು ನುಡಿದರು.

ಬಿಜೆಪಿಯ ಮತ ಗಳಿಕೆಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಬಿಜೆಪಿ–ಜೆಡಿಎಸ್ 142ರಷ್ಟು ವಿಧಾನಸಭಾ ಕ್ಷೇತ್ರಗಳಲ್ಲಿ ಲೀಡ್ ಪಡೆದಿದೆ. ಎಂದು ಹೇಳಿದ ಅವರು ಕಾಂಗ್ರೆಸ್ ಪಕ್ಷದ ಆಡಳಿತವು ಜನರ ನಿರೀಕ್ಷೆಗಳನ್ನು ನುಚ್ಚುನೂರು ಮಾಡಿದೆ. ಗ್ಯಾರಂಟಿಗಳ ಮೂಲಕ ಒಳಿತು ಮಾಡುವುದಾಗಿ ಹೇಳಿದ್ದ ಕಾಂಗ್ರೆಸ್, ಭ್ರಷ್ಟಾಚಾರ ರಹಿತ ಆಡಳಿತದ ಭರವಸೆ ಕೊಟ್ಟಿತ್ತು. ಆದರೆ ಹಿಂದೆಂದೂ ಕಾಣದ ಭ್ರಷ್ಟಾಚಾರದ ಹಗರಣ ಹೊರಬರುತ್ತಿದೆ ಎಂದು ಹೇಳಿದರು.

ಬಿಜೆಪಿ ಕಾರ್ಯಕರ್ತರ ಮೇಲಿನ ದೌರ್ಜನ್ಯ, ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟ, ವಿಧಾನಸೌಧದಲ್ಲೇ ಪಾಕಿಸ್ತಾನ್ ಜಿಂದಾಬಾದ್ ಕೂಗಿದ ಪ್ರಕರಣಗಳನ್ನು ಉಲ್ಲೇಖಿಸಿದ ಅವರು 900ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಕೇಂದ್ರ ಸರಕಾರ ಕೊಟ್ಟ ಪರಿಹಾರ ಹಣವನ್ನು ಸರಿಯಾಗಿ ನೀಡಿಲ್ಲ ಎಂದು ಆಕ್ಷೇಪಿಸಿದರು.

## ಮತದಾರರಿಗೆ ಕೃತಜ್ಞತೆ



ಕೇಂದ್ರೀಯ ಸಂಸದೀಯ ಮಂಡಳಿ ಸದಸ್ಯರು ಮತ್ತು ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪರವರು ಮಾತನಾಡಿ, ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಸತತ 3ನೇ ಬಾರಿ ಪ್ರಧಾನಿಯಾಗಿದ್ದು, ಎನ್‌ಡಿಎ ಅಧಿಕಾರಕ್ಕೆ ಬಂದಿದೆ. ರಾಜ್ಯದಲ್ಲೂ ಬಿಜೆಪಿ– ಜೆಡಿಎಸ್ ಕೂಟ 19 ಸ್ಥಾನಗಳನ್ನು ಗೆದ್ದಿದೆ ಎಂದು ಸಂತಸ ವ್ಯಕ್ತಪಡಿಸಿದರು. 142 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಬಹುಮತ ಪಡೆದಿದೆ. ಈಗ ಚುನಾವಣೆ ನಡೆದರೆ ಬಿಜೆಪಿ ಸರಕಾರ ಮತ್ತೆ ಅಧಿಕಾರಕ್ಕೆ ಬರುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿ ಮತದಾರ ಬಂಧುಗಳಿಗೆ ಕೃತಜ್ಞತೆ ಸಮರ್ಪಿಸಿದರು.

ರಾಜ್ಯ ಕಾಂಗ್ರೆಸ್ ಸರಕಾರ ದಿವಾಳಿಯತ್ತ ನಡೆದಿದೆ. ಅನುಪಯುಕ್ತ ಗ್ಯಾರಂಟಿಗಳ ಕಾರಣಕ್ಕೆ ಬೆಲೆ ಏರಿಕೆ ನಿರಂತರವಾಗಿ ಮುಂದುವರೆದಿದೆ. ಅಭಿವೃದ್ಧಿ ಕಾರ್ಯಗಳು ಸಂಪೂರ್ಣ ಸ್ಥಗಿತವಾಗಿದ್ದು, ಕಾಂಗ್ರೆಸ್ ಪಕ್ಷವು 17 ಸಚಿವರ ಸ್ವಕ್ಷೇತ್ರದಲ್ಲಿ ಹಿನ್ನಡೆ ಅನುಭವಿಸಿದೆ ಎಂದು ಹೇಳಿದರು. ಕಾಂಗ್ರೆಸ್ ಜನಪ್ರಿಯತೆ ಕಳೆದುಕೊಂಡಿದ್ದು, ಅವನತಿಯತ್ತ ಸಾಗುತ್ತಿದೆ; ಜನಹಿತ ಮರೆತಿದ್ದು, ಅಧಿಕಾರದಲ್ಲಿ ಮುಂದುವರೆಯುವ ನೈತಿಕತೆ ಹೊಂದಿಲ್ಲ ಎಂದು ತಿಳಿಸಿದರು.

## ಐತಿಹಾಸಿಕ ಗೆಲುವಿಗೆ ಧನ್ಯವಾದ...

ಕರ್ನಾಟಕ ರಾಜ್ಯ ಉಸ್ತುವಾರಿಗಳಾದ ಶ್ರೀ ರಾಧಾ ಮೋಹನ್‌ದಾಸ್ ಅಗರ್ವಾಲ್ ಅವರು ಮಾತನಾಡಿ, ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದ ಐತಿಹಾಸಿಕ ಗೆಲುವಿಗಾಗಿ ಧನ್ಯವಾದ ಸಮರ್ಪಿಸಿದರು. ಕಾರ್ಯಕರ್ತರ ಪ್ರಯತ್ನ, ಸಮರ್ಪಣಾ



ಮನೋಭಾವದ ಕಾರಣ ಇದು ಸಾಧ್ಯವಾಗಿದೆ ಎಂದು ಮೆಚ್ಚುಗೆ ಸೂಚಿಸಿದರು.

ಕಾಂಗ್ರೆಸ್ 136 ಶಾಸಕರನ್ನು ಹೊಂದಿದ್ದರೂ ದಯನೀಯ ಸೋಲು ಅನುಭವಿಸಿದೆ. ರಾಜ್ಯ ಸರ್ಕಾರದ ವಿರುದ್ಧ ಜನರು ಮತ ನೀಡಿದ್ದಾರೆ. ಕಾಂಗ್ರೆಸ್‌ನ ಐತಿಹಾಸಿಕ ಪರಾಜಯಕ್ಕಾಗಿ ಮುಖ್ಯಮಂತ್ರಿ ರವರು ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು. ಎಲ್ಲ ಕ್ಷೇತ್ರಗಳಲ್ಲೂ ಕರ್ನಾಟಕ ಸರ್ಕಾರ ಸೋತಿದೆ. ಮರು ಚುನಾವಣೆ ನಡೆಯಬೇಕು, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಶಾಸಕರು ಸಂಪೂರ್ಣ ಸೋಲುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಭ್ರಷ್ಟಾಚಾರದ ಕಾರಣಕ್ಕೆ ಕಾಂಗ್ರೆಸ್ ಸಚಿವ ಶ್ರೀ ನಾಗೇಂದ್ರ ಅವರು ರಾಜೀನಾಮೆ ಕೊಟ್ಟಿದ್ದಾರೆ. ಈ ಸಂಬಂಧ ಪ್ರತಿಭಟನೆ ಸಂಘಟಿಸಿದ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ತಂಡಕ್ಕೆ ಅಭಿನಂದನ ತಿಳಿಸಿದ ಅವರು ಮೈಸೂರು ಮೂಡಾದ 4 ಸಾವಿರ ಕೋ.ರೂ. ಹಗರಣವನ್ನೂ ಪ್ರಸ್ತಾಪಿಸಿ, ಹೋರಾಟವನ್ನು ತೀವ್ರಗೊಳಿಸಲು ಕರೆ ನೀಡಿದರು. ಸತತ 3ನೇ ಬಾರಿ ಬಿಜೆಪಿ ತನ್ನ ಮತ ಪ್ರಮಾಣವನ್ನು ಹೆಚ್ಚಿಸಿಕೊಂಡು ಪ್ರಧಾನಿ ಶ್ರೀ ನರೇಂದ್ರ ಮೋದಿ ರವರ ನೇತೃತ್ವದಲ್ಲಿ ಬಿಜೆಪಿ ಅಧಿಕಾರ ಪಡೆದಿದೆ, 14 ರಾಜ್ಯಗಳಲ್ಲಿ ಕಾಂಗ್ರೆಸ್ ಸಂಸದರೇ ಇಲ್ಲ ಎಂದು ವಿವರ ನೀಡಿದರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ಅಶೋಕ, ಕೇಂದ್ರ ಸಚಿವರಾದ ಕು. ಶೋಭಾ ಕರಂದ್ಲಾಜೆ, ಶ್ರೀ ವಿ. ಸೋಮಣ್ಣ, ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಶ್ರೀ ನಳಿನ್‌ಕುಮಾರ್ ಕಟೀಲ್, ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದಗೌಡ, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಬಸವರಾಜ ಬೊಮ್ಮಾಯಿ, ಮಾಜಿ ಉಪ ಮುಖ್ಯಮಂತ್ರಿ ಮತ್ತು ಸಂಸದ ಶ್ರೀ ಗೋವಿಂದ ಕಾರಜೋಳ, ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ್, ಮಾಜಿ ಸಚಿವರಾದ ಶ್ರೀ ಬಿ. ಶ್ರೀರಾಮುಲು, ಪುದುಚೆರಿ ರಾಜ್ಯ ಉಸ್ತುವಾರಿಗಳಾದ ಶ್ರೀ ನಿರ್ಮಲ್‌ಕುಮಾರ್ ಸುರಾಣ, ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿ ಮೊದಲಾದ ಪ್ರಮುಖರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕೋರ್ ಕಮಿಟಿ ಸದಸ್ಯರು, ಪಕ್ಷದ ಪದಾಧಿಕಾರಿಗಳು ಮತ್ತು ಅಪೇಕ್ಷಿತರು ಸಭೆಯಲ್ಲಿ ಉಪಸ್ಥಿತರಿದ್ದರು. ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಎನ್.ಎಸ್. ನಂದೀಶ್ ರೆಡ್ಡಿ ರವರು ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ಅಶ್ವಿನಿ ಶಂಕರ್ ರವರು ವಂದೇಮಾತರಂ ಗೀತೆ ಹಾಡಿದರು. ಡಾ. ಶೈಲೇಂದ್ರ ಬೆಲ್ದಾಳೆ ಸ್ವಾಗತಿಸಿದರು. ತುಳಸಿ ಸಸಿಗೆ ನೀರೆರೆದು ಉದ್ಘಾಟನೆ ನೆರವೇರಿಸಲಾಯಿತು. ಸ್ವಾಮಿ ವಿವೇಕಾನಂದರ ಪುಣ್ಯಸ್ಮೃತಿ ಹಿನ್ನೆಲೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಭಾರತಮಾತೆ, ಬಿಜೆಪಿ ಸ್ಥಾಪಕರಿಗೆ ಗೌರವ ಸಲ್ಲಿಸಲಾಯಿತು.

## ತುರ್ತು ಪರಿಸ್ಥಿತಿ ಹೇರಿದ್ದ ಕಾಂಗ್ರೆಸ್ ಪಕ್ಷ



ಬಿಜೆಪಿ ಸಂವಿಧಾನ ಬದಲಾವಣೆ ಮಾಡಲಿದೆ ಎಂದು ಚುನಾವಣೆ ವೇಳೆ ಸುಳ್ಳು ಪ್ರಚಾರ ಮಾಡಲಾಗಿತ್ತು. ಸ್ವಾರ್ಥಕ್ಕಾಗಿ ಸಂವಿಧಾನವನ್ನು ಬದಲಿಸಿದ, ಸಂವಿಧಾನದ ಹತ್ಯೆ ಮಾಡಿ ತುರ್ತು ಪರಿಸ್ಥಿತಿ ಹೇರಿದ್ದ ಕಾಂಗ್ರೆಸ್ ಪಕ್ಷವು ನಮ್ಮ ವಿರುದ್ಧ ಸುಳ್ಳು ಆರೋಪ ಮಾಡಿತ್ತು ಎಂದು ಕೇಂದ್ರ ಸಚಿವರಾದ ಶ್ರೀ ನಿತಿನ್ ಗಡ್ಕರಿ ತಿಳಿಸಿದರು. ರಾಜ್ಯ ವಿಶೇಷ ಕಾರ್ಯಕಾರಿಣಿಯಲ್ಲಿ ಸಮಾರೋಪ ಭಾಷಣ ಮಾಡಿದ ಅವರು ನಮ್ಮದು ಕುಟುಂಬ ಆಧಾರಿತ ಪಕ್ಷವಲ್ಲ. ನೆಹರೂ ಅವರಿಂದ ಆರಂಭಿಸಿ ರಾಹುಲ್ ಗಾಂಧಿವರೆಗೆ ಕಾಂಗ್ರೆಸ್ ಪಕ್ಷವು ಕುಟುಂಬ ಆಧಾರಿತ ಪಕ್ಷವಾಗಿ ಕೆಲಸ ಮಾಡಿದೆ. ಬಡತನ ನಿರ್ಮೂಲನ (ಗರೀಬಿ ಹಟಾವೋ) ಘೋಷಣೆ ಮಾಡಿದ ಕಾಂಗ್ರೆಸ್, ಪಕ್ಷದ ಮುಖಂಡರು ಮಾತ್ರವಲ್ಲದೆ ಚೇಲಾಗಳ ಬಡತನ ದೂರವಾಗಿದೆ ಎಂದು ಅವರು ವ್ಯಂಗ್ಯವಾಗಿ ನುಡಿದರು.

ಹಿಂದುಸ್ತಾನವನ್ನು ವಿಶ್ವ ಗುರು ಮಾಡುವ ಸಂಕಲ್ಪ ನಮ್ಮದು. ನಿಮ್ಮಂತಹ ದೇವದುರ್ಲಭ ಕಾರ್ಯಕರ್ತರು ನಮ್ಮ

ಜೊತೆಗಿರುವುದು ನಮ್ಮ ಸೌಭಾಗ್ಯ. ಸಂಸದ ಮಾಜಿ ಆಗಬಹುದು. ಆದರೆ, ಕಾರ್ಯಕರ್ತ ಯಾವತ್ತೂ ಮಾಜಿ ಆಗುವುದಿಲ್ಲ ಎಂದು ತಿಳಿಸಿದರು. ಅಧಿಕಾರ ಬರುತ್ತದೆ; ಹೋಗುತ್ತದೆ. ಆ ಕುರಿತು ಚಿಂತೆ ಮಾಡಬೇಡಿ. ಸೂರ್ಯೋದಯ, ಸೂರ್ಯಾಸ್ತಮಾನ ಆಗುತ್ತಿರುತ್ತದೆ. ಭಾರತವನ್ನು ವಿಶ್ವಗುರು ಮಾಡುವ ಸಂಕಲ್ಪದೊಂದಿಗೆ ಮುನ್ನಡೆಯೋಣ ಎಂದು ಕಿವಿಮಾತು ಹೇಳಿದರು.

### ಮುಂದಿನ ದಿನಗಳು ಬಿಜೆಪಿಯ ದಿನಗಳು- ವಿಜಯೇಂದ್ರ

ಸಮಾರೋಪ ಸಮಾರಂಭದ ಅಧ್ಯಕ್ಷೀಯ ನುಡಿಗಳನ್ನಾಡಿದ ಬಿಜೆಪಿಯ ರಾಜ್ಯಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರ, ಬಿಜೆಪಿ ಹಿಂದಿನಂತೆ ನಗರ ಸೀಮಿತ, ಮುಂದುವರೆದ ಜನಾಂಗದ ಪಕ್ಷವಾಗಿ ಉಳಿದಿಲ್ಲ. ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ಸವಾಲು ಸ್ವೀಕರಿಸಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ ಬಿಜೆಪಿ ಮುಖಂಡರು ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷವನ್ನು ಸಂಘಟಿಸಿ ಅಧಿಕಾರಕ್ಕೆ ತಂದಿದ್ದಾರೆ ಎಂದು ನೆನಪಿಸಿದರು. ಕ್ಲಿಷ್ಟಕರ ಸನ್ನಿವೇಶದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ. ಈ ನಿಟ್ಟಿನಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರ ಶ್ರಮ, ಹೋರಾಟ ಅಭಿನಂದನಾರ್ಹ ಎಂದು ತಿಳಿಸಿದರು.

ಮುಂದಿನ ದಿನಗಳು ಹೋರಾಟದ ದಿನಗಳು. ಹೋರಾಟದಲ್ಲಿ, ಚುನಾವಣೆಗಳಲ್ಲಿ ಜನಪ್ರತಿನಿಧಿಗಳು ಕಾರ್ಯಕರ್ತರ ಹೆಗಲಿಗೆ ಹೆಗಲು ಕೊಟ್ಟು ಶ್ರಮಿಸಬೇಕೆಂದು ತಿಳಿಸಿದರು. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆಯು ಕಾರ್ಯಕರ್ತರ ಚುನಾವಣೆ ಎಂದು ತಿಳಿಸಿ ಕಡ್ಡಾಯವಾಗಿ ಪ್ರಧಾನಿಯವರ ‘ಮನ್ ಕೀ ಬಾತ್’ ಕಾರ್ಯಕ್ರಮವನ್ನು ಆಲಿಸಲು ವಿನಂತಿಸಿದರು.

## ಮೂರು ನಿರ್ಣಯಗಳ ಅಂಗೀಕಾರ



ಕಾರ್ಯಕಾರಿಣಿಯಲ್ಲಿ ಮೂರು ನಿರ್ಣಯಗಳನ್ನು ಅಂಗೀಕರಿಸಲಾಯಿತು. **ಸ್ವತಂತ್ರ ಭಾರತದ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ ಸತತವಾಗಿ 3ನೇ ಬಾರಿಗೆ ಕಾಂಗ್ರೆಸ್ಸೇತರ ಪ್ರಧಾನಮಂತ್ರಿಯಾಗಿ ಆಯ್ಕೆಯಾದ ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಅವರನ್ನು ಅಭಿನಂದಿಸುವ ನಿರ್ಣಯ**ವನ್ನು ಸಂಸದರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಂಡಿಸಿದರು. ಮಾಜಿ ಸಚಿವೆ ಶ್ರೀಮತಿ ಶಶಿಕಲಾ ಜೊಲ್ಲೆ ಮತ್ತು ಶಾಸಕ ಶ್ರೀ ದೊಡ್ಡನಗೌಡ ಹೆಚ್. ಪಾಟೀಲ್ ರವರು ಅನುಮೋದಿಸಿದರು.

**ಅಭಿವೃದ್ಧಿ ಶೂನ್ಯ, ಹಗರಣಗಳ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸಲು ಕರೆ** ಕೊಡುವ ಎರಡನೇ ಖಂಡನಾ ನಿರ್ಣಯವನ್ನು ವಿಪಕ್ಷ ನಾಯಕರಾದ ಶ್ರೀ ಆರ್. ಅಶೋಕ್ ಮಂಡಿಸಿದರು, ವಿಧಾನಪರಿಷತ್ ಸದಸ್ಯರಾದ ಛಲವಾದಿ ನಾರಾಯಣಸ್ವಾಮಿ, ಎಸ್.ಟಿ. ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಬಂಗಾರು ಹನುಮಂತು ಅನುಮೋದಿಸಿದರು.

**ಹಿಂದು, ಹಿಂದುತ್ವವಿರೋಧಿ ಹೇಳಿಕೆ ನೀಡಿದ ಕೇಂದ್ರ ಕಾಂಗ್ರೆಸ್‌ನ ವಿಪಕ್ಷನಾಯಕ ಶ್ರೀ ರಾಹುಲ್ ಗಾಂಧಿಯ ಅಪ್ರಬುದ್ಧ ನಡೆ**ಯ ಬಗ್ಗೆ ಖಂಡನಾ ನಿರ್ಣಯವನ್ನು ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿ ರವರು ಮಂಡಿಸಿದರು, ರಾಜ್ಯ ಒಬಿಸಿ ಮೋರ್ಚಾ ನಿಕಟಪೂರ್ವ ರಾಜ್ಯಾಧ್ಯಕ್ಷರಾದ ಶ್ರೀ ನೆ.ಲ. ನರೇಂದ್ರ ಬಾಬು ಹಾಗೂ ರಾಜ್ಯ ಉಪಾದ್ಯಕ್ಷರಾದ ಶ್ರೀ ಎನ್. ಮಹೇಶ್ ರವರು ಅನುಮೋದಿಸಿದರು.




# ರಾಜ್ಯ ಪದಾಧಿಕಾರಿಗಳ ಸಭೆ

## ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಟ ತೀವ್ರಗೊಳಿಸಲು ಯೋಜನೆ

**ಬಿದರೆ ಪ್ರಕಾಶ್**
ರಾಜ್ಯ ಸಂಚಾಲಕರು, ಪ್ರಕಾಶನ ಪ್ರಕೋಷ್ಠ

ಗ್ಯಾರಂಟಿ ಯೋಜನೆಗಳ ಆಮಿಷದ ಮೂಲಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರದ ಬಂಡವಾಳ ಬಯಲಾಗಿದೆ. ಕಾಂಗ್ರೆಸ್ ಸರಕಾರದ ಭ್ರಷ್ಟಾಚಾರಗಳು ಒಂದೊಂದಾಗಿ ಹೊರಗೆ ಬರುತ್ತಿದೆ. ಈ ಎಲ್ಲಾ ಸಂಗತಿಗಳನ್ನು ಇಟ್ಟುಕೊಂಡು ಬಿಜೆಪಿ ಸದನದ ಒಳಗೆ ಮತ್ತು ಸದನದ ಹೊರಗೆ ಕಾಂಗ್ರೆಸ್ ಸರ್ಕಾರದ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಲಾಗುವುದು ಎಂದು ರಾಜ್ಯಾಧ್ಯಕ್ಷ ಶ್ರೀ ಬಿ.ವೈ. ವಿಜಯೇಂದ್ರ ತಿಳಿಸಿದರು.

ರಾಜ್ಯ ಕಾರ್ಯಾಲಯದಲ್ಲಿ ನಡೆದ ರಾಜ್ಯ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮುಂದಿನ ದಿನಗಳಲ್ಲಿ ಕಾರ್ಯಕರ್ತರ ಸಕ್ರಿಯತೆ ಇನ್ನಷ್ಟು ಹೆಚ್ಚಾಗಬೇಕಾಗಿದೆ. ಕಾರ್ಯಕರ್ತರ ಹಾಗೂ ಪದಾಧಿಕಾರಿಗಳ ಪರಿಶ್ರಮದಿಂದಾಗಿ ಕಾಂಗ್ರೆಸ್‌ನವರ ದಬ್ಬಾಳಿಕೆ, ಗ್ಯಾರಂಟಿ ಯೋಜನೆಗಳ ನಡುವೆಯೂ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅತ್ಯುತ್ತಮ ಸಾಧನೆ ಮಾಡಿದೆ. ಆತ್ಮವಿಶ್ವಾಸ ಹೆಚ್ಚಿರುವ ಈ ಸಂದರ್ಭದಲ್ಲಿ ದುರಾಡಳಿತದ ಸರಕಾರದ ವಿರುದ್ಧ ಹೆಚ್ಚು ಕ್ರಿಯಾಶೀಲತೆಯಿಂದ ಹೋರಾಡಬೇಕಿದೆ ಎಂದರು. ಕಳೆದ ವಾರ ನಡೆದ ಕಾರ್ಯಕಾರಿಣಿಯ ಬಗ್ಗೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿರುವುದರ ಬಗ್ಗೆ ಪ್ರಸ್ತಾಪಿಸಿ, ಬರಲಿರುವ ಮೂರು ಉಪಚುನಾವಣೆಗಳ ದೃಷ್ಟಿಯಿಂದ ಹಾಗೂ ಸರಕಾರದ ವಾಲ್ಮೀಕಿ ನಿಗಮದ ಹಗರಣ, ಪರಿಶಿಷ್ಟ ಜಾತಿಗೆ ಮೀಸಲಿರಿಸಿದ್ದ ಅನುದಾನ ವರ್ಗಾವಣೆ ಮಾಡುವ ಮೂಲಕ ರಾಜ್ಯ ಕಾಂಗ್ರೆಸ್ ದಲಿತ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ಪದಾಧಿಕಾರಿಗಳು ಹಾಗೂ ಪ್ರತೀ ಬಿಜೆಪಿ ಕಾರ್ಯಕರ್ತರು ಈ ವಿಷಯಗಳನ್ನು ಪ್ರಸ್ತಾಪಿಸಿ ಕಾಂಗ್ರೆಸ್‌ನ ಬಣ್ಣ ಬಯಲು ಮಾಡುವತ್ತ ಸಂಘಟನೆ ನೀಡುವ ಸೂಚನೆಗಳನ್ನು ಹೆಚ್ಚು ಸಕ್ರಿಯತೆಯಿಂದ ಪಾಲಿಸಬೇಕು ಎಂದು ಕರೆ ನೀಡಿದರು.

ರಾಜ್ಯ ಪದಾಧಿಕಾರಿಗಳ ಸಭೆಯನ್ನು ಉದ್ಘಾಟಿಸಿದ ರಾಜ್ಯ ಸಹ ಉಸ್ತುವಾರಿಗಳಾದ ಡಾ. ಸುಧಾಕರ ರೆಡ್ಡಿ ಮಾತನಾಡಿ ರಾಜ್ಯದಲ್ಲಿ ಶ್ರೀ ವಿಜಯೇಂದ್ರರವರ ನೇತೃತ್ವ ಹಾಗೂ ಕಾರ್ಯಕರ್ತರ ಪರಿಶ್ರಮದಿಂದ ಕಳೆದ ಲೋಕಸಭಾ ಚುನಾವಣೆಯಲ್ಲಿ 19 ಕ್ಷೇತ್ರಗಳಲ್ಲಿ ಬಿಜೆಪಿ ಗೆಲವು ಸಾಧಿಸಿದೆ. 142 ವಿಧಾನಸಭಾ ಕ್ಷೇತ್ರಗಳಲ್ಲಿ ಮುನ್ನಡೆ ಸಾಧಿಸಿರುವುದಕ್ಕೆ ರಾಜ್ಯ ಬಿಜೆಪಿಯ ತಂಡಕ್ಕೆ ಅಭಿನಂದನೆಗಳು ಎಂದರು. ಪ್ರತೀ ಪದಾಧಿಕಾರಿಗಳು ನಿರಂತರ ಪ್ರವಾಸ ಮಾಡಬೇಕು, ಕೇಂದ್ರದ ಕಾರ್ಯಕ್ರಮಗಳ ಜೊತೆ ರಾಜ್ಯ ಬಿಜೆಪಿಯೂ ಸರಕಾರದ ವಿರುದ್ಧ ಹೋರಾಟಗಳನ್ನು ಹಮ್ಮಿಕೊಳ್ಳಬೇಕು ಎಂದರು. ಇನ್ನು ಕೇಂದ್ರದ ನಾಲ್ಕು ಜನ ಸಚಿವರಿಗೆ ರಾಜ್ಯವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿ ಆ ಭಾಗಗಳಿಗೆ ನಿರಂತರ ಭೇಟಿ ನೀಡಬೇಕು ಹಾಗೂ ಭೇಟಿಯ ಸಂದರ್ಭದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಬೇಕು, ಇದಕ್ಕಾಗಿ ಯೋಜನೆಯಾಗಬೇಕು ಎಂದು ಅಭಿಪ್ರಾಯ ಪಟ್ಟರು. ಮುಂದಿನ ಭೇಟಿಯಲ್ಲಿ ಪ್ರತೀ ಪದಾಧಿಕಾರಿಯನ್ನೂ ವೈಯುಕ್ತಿಕವಾಗಿ ಭೇಟಿ ಮಾಡುವುದಾಗಿಯೂ, ಪ್ರತೀ ಪದಾಧಿಕಾರಿಯಿಂದಲೂ ರಿಪೋರ್ಟ್ ಕಾರ್ಡ್ ಪಡೆಯುವುದಾಗಿಯೂ ತಿಳಿಸಿದರು.

ಸಂಘಟನಾತ್ಮಕ ಚಟುವಟಿಕೆಗಳ ಬಗ್ಗೆ ಮಾತನಾಡಿದ ಪ್ರಧಾನ ಕಾರ್ಯದರ್ಶಿ ಶ್ರೀ ವಿ.ಸುನಿಲ್‌ಕುಮಾರ್ ಜುಲೈ 15 ರಿಂದ 20ರವರೆಗೆ ಜಿಲ್ಲಾ ಕಾರ್ಯಕಾರಿಣಿಗಳು ಯೋಜನೆಯಾಗಬೇಕಿದೆ. ಈ ಕಾರ್ಯಕಾರಿಣಿಗಳಿಗೆ ನಿರ್ದಿಷ್ಟ ಜಿಲ್ಲೆಗೆ ನಿರ್ದಿಷ್ಟ ಪದಾಧಿಕಾರಿಯನ್ನು



ನಿಯುಕ್ತಿ ಮಾಡಲಾಗುವುದು. ಅವರು ಆ ಜಿಲ್ಲಾ ಕಾರ್ಯಕಾರಿಣಿಯು ಪರಿಣಾಮಕಾರಿಯಾಗಿ ನಡೆಯುವಂತೆ ಭಾಗಿಯಾಗಬೇಕು. ಉಪಚುನಾವಣೆಗಳು ನಡೆಯುವ ಜಿಲ್ಲೆಗಳಲ್ಲಿ ಚುನಾವಣಾ ದೃಷ್ಟಿಯಿಂದ ಕಾರ್ಯ ಯೋಜನೆಯ ಬಗ್ಗೆಯೂ ಕಾರ್ಯಕಾರಿಣಿಯಲ್ಲಿ ಚರ್ಚೆಯಾಗಬೇಕು, ಕಾರ್ಯಕಾರಿಣಿಯ ಮೊದಲು ಹಾಗೂ ನಂತರ ಕಾರ್ಯಕರ್ತರನ್ನು ಭೇಟಿಯಾಗುವುದಕ್ಕೆ ರಾಜ್ಯ ಪದಾಧಿಕಾರಿಗಳು ತಮ್ಮ ಸಮಯವನ್ನು ಕೊಡಬೇಕು ಎಂದು ತಿಳಿಸಿದರು.

ಆಗಸ್ಟ್ 1 ರಿಂದ 5 ನೇ ತಾರೀಕಿನೊಳಗೆ ಎಲ್ಲಾ ಮೋರ್ಚಾಗಳ ರಾಜ್ಯ ಕಾರ್ಯಕಾರಿಣಿ ಮತ್ತು ಪ್ರಕೋಷ್ಟಗಳ ರಾಜ್ಯ ಸಭೆಗಳು ಆಯೋಜನೆಯಾಗಬೇಕು ಎಂದು ತಿಳಿಸಿದ ಅವರು, ಜುಲೈ 20 ರಿಂದ ಜುಲೈ 30 ರ ಒಳಗೆ ಮಂಡಲ ಕಾರ್ಯಕಾರಿಣಿಗಳು ಪೂರ್ಣಗೊಳ್ಳಬೇಕು. ಜಿಲ್ಲಾ ಕಾರ್ಯಕಾರಿಣಿಗಳಲ್ಲಿ ರಾಜ್ಯ ಪದಾಧಿಕಾರಿಗಳು ಭಾಗವಹಿಸಿದಂತೆ ಜಿಲ್ಲಾ ಪದಾಧಿಕಾರಿಗಳು ಮಂಡಲ ಕಾರ್ಯಕಾರಿಣಿಗಳಲ್ಲಿ ಭಾಗವಹಿಸಬೇಕು. ಬರಲಿರುವ ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಗಳ ದೃಷ್ಟಿಯಿಂದಲೂ ಸಂಘಟನಾತ್ಮಕವಾಗಿ ಯೋಚನೆಗಳು ನಡೆಯಬೇಕು ಎಂದರು.

## ಬೂತ್ ಚಲೋ ಅಭಿಯಾನ

ಆಗಸ್ಟ್ 15 ರಿಂದ ಆಗಸ್ಟ್ 30 ರವರೆಗೆ ಇಡೀ ರಾಜ್ಯದಲ್ಲಿ ಬೂತ್ ಚಲೋ ಅಭಿಯಾನವನ್ನು ಹಮ್ಮಿಕೊಳ್ಳಲಾಗುವುದು. ಈ ಸಂದರ್ಭದಲ್ಲಿ ಪ್ರತೀ ಕಾರ್ಯಕರ್ತನೂ ತಮ್ಮ ಬೂತ್‌ನ ಜೊತೆಗೆ ಸಂಬಂಧಿಸಿದ ಇನ್ನಿತರ ಬೂತ್‌ಗಳ ಪ್ರತೀ ಮನೆಗೂ ಭೇಟಿ ನೀಡಬೇಕು, ಹಾಗೂ ಮನೆ ಯಜಮಾನನ ಮೊಬೈಲ್ ನಂಬರನ್ನು ಸಂಗ್ರಹಿಸುವ ಕೆಲಸವೂ ಆಗಬೇಕು ಮತ್ತು ರಾಜ್ಯ ಸರಕಾರದ ಭ್ರಷ್ಟಾಚಾರಗಳ ಬಗ್ಗೆ ಜಾಗೃತಿಯ ಕೆಲಸವೂ ಆಗಬೇಕು ಎಂದರು.

ಪ್ರಧಾನಕಾರ್ಯದರ್ಶಿ ಶ್ರೀ ಪ್ರೀತಂ ಗೌಡ ಹೋರಾಟಗಳ ಬಗ್ಗೆ ಮಾತನಾಡುತ್ತಾ ಜುಲೈ 12 ರಂದು ಮೂಡಾ ಹಗರಣದ ಬಗ್ಗೆ ಬೆಂಗಳೂರಿನಿಂದ ಮೈಸೂರು ಚಲೋ ಮತ್ತು ಮೈಸೂರಿನಲ್ಲಿ ಮೂಡಾ ಕಚೇರಿ ಮುತ್ತಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ, ಜುಲೈ 15 ರಂದು ಅಧಿವೇಶನ ಪ್ರಾರಂಭವಾಗುವ ದಿನದಂದು ಫ್ರೀಡಂ ಪಾರ್ಕ್ ಬಳಿ ರಾಜ್ಯ ಸರಕಾರದ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗುವುದು, ಈ ಪ್ರತಿಭಟನಾ ಸಭೆಗೆ ಪ್ರತೀ ಜಿಲ್ಲೆಯಿಂದ ಕನಿಷ್ಟ 200 ಜನ ಹಾಗೂ ಬೆಂಗಳೂರಿನ ಸುತ್ತಲಿನ ಜಿಲ್ಲೆಗಳಿಂದ ಹೆಚ್ಚಿನ ಜನರು ಆಗಮಿಸುವಂತೆ ಪದಾಧಿಕಾರಿಗಳು ನಿಗಾ ವಹಿಸಬೇಕು, ಸದನದಲ್ಲಿ ಕಾಂಗ್ರೆಸ್ ಹಗರಣಗಳ ಬಗ್ಗೆ ಹೋರಾಟ ರೂಪಿಸುವ ಬಗ್ಗೆ ಈಗಾಗಲೇ ಪ್ರಮುಖರ ಸಭೆ ನಡೆದಿದ್ದು ಕಾರ್ಯತಂತ್ರವನ್ನು ಮಾಡಲಾಗಿದೆ. ಸದನದ ಹೊರಗೂ ಸಹ ಹೋರಾಟಗಳನ್ನು ಜಿಲ್ಲಾ ಸ್ತರದಲ್ಲಿ ಹಮ್ಮಿಕೊಳ್ಳಲಾಗುವುದು, ಇದಲ್ಲದೆ ಸ್ಥಳೀಯ ವಿಷಯಗಳ ಬಗ್ಗೆ ಹೋರಾಟವನ್ನು ಆಯಾ ಜಿಲ್ಲೆಗಳು ಯೋಜಿಸಲು ರಾಜ್ಯ ಪದಾಧಿಕಾರಿಗಳು ಜಿಲ್ಲಾಧ್ಯಕ್ಷರೊಂದಿಗೆ ಮಾತನಾಡಬೇಕು ಎಂದರು.

ಮತ್ತೋರ್ವ ಪ್ರಧಾನಕಾರ್ಯದರ್ಶಿ ಶ್ರೀ ಕುಡಚಿ ರಾಜೀವ್

ಮಾತನಾಡಿ ಸಂಘಟನೆಯಿಂದ ಆಗಿರುವ ಕಾರ್ಯಕ್ರಮಗಳ ವರದಿ ನೀಡಿ, ರಾಜ್ಯದಿಂದ ಅನೇಕ ಕಾರ್ಯಕ್ರಮಗಳು ಆಗುತ್ತಿದ್ದರೂ ಅದನ್ನು ಸರಳ್ ಆಪ್‌ನಲ್ಲಿ ಅಪ್‌ಲೋಡ್ ಮಾಡುವ ಕೆಲಸ ಪರಿಣಾಮಕಾರಿಯಾಗಿ ಆಗುತ್ತಿಲ್ಲ, ರಾಜ್ಯದಲ್ಲಿ ತುರ್ತುಪರಿಸ್ಥಿತಿಯ ಬಗ್ಗೆ ನಡೆದ ಕಾರ್ಯಕ್ರಮಗಳ ಬಗ್ಗೆ ಕೇಂದ್ರದಿಂದ ಪ್ರಶಂಸೆ ವ್ಯಕ್ತವಾಗಿದೆ, **ಯೋಗ ದಿವಸ, ಮನ್ ಕಿ ಬಾತ್, ಡಾ. ಶ್ಯಾಮಪ್ರಸಾದ್ ಮುಖರ್ಜಿ ಸ್ಮರಣೆ, 'ಏಕ್ ಪೇಡ್ ಮಾ ಕೆ ನಾಮ್',** 'ಮತದಾರ ಅಭಿನಂದನಾ ಅಭಿಯಾನ' ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿವೆ, ಬಿಜೆಪಿಯ ಹೋರಾಟದ ಫಲವಾಗಿ ಸಚಿವ ನಾಗೇಂದ್ರ ರಾಜೀನಾಮೆ ನೀಡಬೇಕಾಯಿತು ಎಂದು ಸಭೆಗೆ ಮಾಹಿತಿ ನೀಡಿದರು.

ಪ್ರಧಾನಕಾರ್ಯದರ್ಶಿ ಶ್ರೀ ನಂದೀಶ್ ರೆಡ್ಡಿ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯದರ್ಶಿ ಶ್ರೀಮತಿ ಅಂಬಿಕಾ ಹುಲಿನಾಯ್ಕರ್ ವಂದೇ ಮಾತರಂ ಗೀತೆ ಹಾಡಿದರು,ರಾಜ್ಯ ಕಾರ್ಯದರ್ಶಿ ಕು. ಲಲಿತಾ ಅನಅಪುರ ವಂದನಾರ್ಪಣೆ ಮಾಡಿದರು.



ಇತ್ತೀಚೆಗೆ ರಷ್ಯಾಗೆ ಭೇಟಿ ನೀಡಿದ ಸಂದರ್ಭದಲ್ಲಿ ರಷ್ಯಾ ಅಧ್ಯಕ್ಷರಿಂದ ಆ ದೇಶದ ಅತ್ಯುನ್ನತ ಪ್ರಶಸ್ತಿಯಾದ **'Order of St Andrew the Apostle'** ಪ್ರಶಸ್ತಿಗೆ ಭಾಜನರಾದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಅಭಿನಂದಿಸಲಾಯಿತು.






# 'ಮನ್ ಕಿ ಬಾತ್' –ನೇರ ಪ್ರಸಾರ ಎಸ್‌ಡಿಎಂ ಹೊನ್ನಾವರ

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಆಡಳಿತದ ಮೂರನೇ ಅವಧಿಯ ಮೊದಲ **'ಮನ್ ಕಿ ಬಾತ್'** ವೀಕ್ಷಣೆಯ ನೇರಪ್ರಸಾರ ಕಾರ್ಯಕ್ರಮವು ಹೊನ್ನಾವರದ ಎಂ.ಪಿ.ಇ ಸೊಸೈಟಿಯ ಎಸ್‌ಡಿಎಂ ಕಾಲೇಜಿನಲ್ಲಿ ಆಯೋಜಿಸಲ್ಪಟ್ಟಿತ್ತು. ಸನ್ಮಾನ್ಯ ಪ್ರಧಾನಿಗಳ ಅತ್ಯಂತ ಜನಪ್ರಿಯ ಕಾರ್ಯಕ್ರಮವಾದ 'ಮನ್ ಕಿ ಬಾತ್' ವೀಕ್ಷಣೆಯ ನೇರಪ್ರಸಾರದಲ್ಲಿ ಸಮಾಜದ ವಿವಿಧ ರಂಗಗಳ ಸಾಧಕರು, ಚಿಂತಕರು ಹಾಗೂ ಶಿಕ್ಷಕರು, ವೈದ್ಯರು, ಇಂಜೀನಿಯರ್‌ಗಳು, ವಕೀಲರು, ರೈತರು, ವ್ಯಾಪಾರಿಗಳು, ಪತ್ರಕರ್ತರು ಮೊದಲಾಗಿ ವಿವಿಧ ವೃತ್ತಿಪರರು ಭಾಗವಹಿಸಿದರು.

ಸುಮಾರು ಮುನ್ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದ ಉಪಸ್ಥಿತರಲ್ಲಿ ಕೆಲವು ಗಣ್ಯರು 'ಮನ್ ಕೀ ಬಾತ್' ವೀಕ್ಷಣೆಯ ನಂತರ ತಮ್ಮ ಅನುಭವ ಹಾಗೂ ಅನಿಸಿಕೆಯನ್ನು ದೂರದರ್ಶನ ಸೇರಿದಂತೆ ಮಾಧ್ಯಮಗಳೊಂದಿಗೆ ಹಂಚಿಕೊಂಡರು. ಬಿಜೆಪಿ ಉತ್ತರ ಕನ್ನಡ ಜಿಲ್ಲಾಧ್ಯಕ್ಷರಾದ ಶ್ರೀ ಎನ್.ಎಸ್. ಹೆಗಡೆ ಕರ್ಕಿ, ಮಾನ್ಯ ಶಾಸಕರಾದ ಶ್ರೀ ದಿನಕರ ಕೆ. ಶೆಟ್ಟಿ, 'ಮನ್ ಕೀ ಬಾತ್' ಕಾರ್ಯಕ್ರಮದ ರಾಜ್ಯ ಸಹ - ಪ್ರಮುಖರಾದ ಶ್ರೀ ಪ್ರಸನ್ನ ನಾಯ್ಕ, ನಿಕಟ ಪೂರ್ವ ಜಿಲ್ಲಾಧ್ಯಕ್ಷರಾದ ಶ್ರೀ ವೆಂಕಟೇಶ ನಾಯಕ, ಪಶ್ಚಿಮ ಘಟ್ಟಗಳ ಸಂರಕ್ಷಣಾ ಕಾರ್ಯಪಡೆ ನಿಗಮದ ಮಾಜಿ ಅಧ್ಯಕ್ಷರಾದ ಶ್ರೀ ಗೋವಿಂದ ನಾಯ್ಕ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಗುರುಪ್ರಸಾದ ಹೆಗಡೆ ಹರ್ತೆಬೈಲ್, ಶ್ರೀ ಪ್ರಶಾಂತ ನಾಯ್ಕ, ಹೊನ್ನಾವರ ಮಂಡಲ ಅಧ್ಯಕ್ಷರಾದ ಶ್ರೀ ಮಂಜುನಾಥ ನಾಯ್ಕ ಮತ್ತು ಹೊನ್ನಾವರ ಮಂಡಲ ಹಾಗೂ ಜಿಲ್ಲೆಯ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



# ಯೋಗ ಜಾಗತಿಕ ಕ್ಷೇಮದ ರಾಯಭಾರಿ: ಮೋದಿ

ಸ್ವಯಂ ಮತ್ತು ಸಮಾಜಕ್ಕಾಗಿ ಯೋಗ ಎಂಬ ಧ್ಯೇಯದಡಿ ನಡೆದ 10ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಶ್ರೀನಗರದ ದಾಲ್ ಸರೋವರದ ದಂಡೆಯ ಮೇಲೆ ಯೋಗಾಭ್ಯಾಸ ಮಾಡಿ ವಿಶ್ವಕ್ಕೆ ಯೋಗದ ಮಹತ್ವವನ್ನು ಸಾರಿದ್ದಾರೆ. 'ಭಾರತ ಈಗ ಯೋಗ ಪ್ರವಾಸಿ ಕೇಂದ್ರವಾಗಿದೆ, ಯೋಗ ಕಲಿಯಲು ಭಾರತಕ್ಕೆ ಜನ ಪ್ರವಾಸ ಕೈಗೊಳ್ಳುವಂತಾಗಿದೆ' ಎಂದು ಪ್ರಾಚೀನ ಯೋಗ ಕಲಿಕೆಯಲ್ಲಿ ಭಾರತದ ಮಹತ್ವವನ್ನು ಬಣ್ಣಿಸಿದರು.

ಶೇರ್-ಇ-ಕಾಶ್ಮೀರ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ಆಯೋಜಿಸಿದ್ದ ಯೋಗ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ ಶ್ರೀ ಮೋದಿ, ಹೃಷಿಕೇಶ ಮತ್ತು ಕಾಶಿಯಿಂದ ಕೇರಳವರೆಗೆ ಯೋಗ, ಪ್ರವಾಸೋದ್ಯಮದ ಅಲೆ ಆರಂಭವಾಗಿದೆ, 2014ರಲ್ಲಿ ವಿಶ್ವ ಸಂಸ್ಥೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಮುಂದಿಟ್ಟಾಗ 117 ದೇಶಗಳು ಬೆಂಬಲ ಸೂಚಿಸಿದ್ದು ಒಂದು ಇತಿಹಾಸ. ಆ ಬಳಿಕ ಪ್ರತಿವರ್ಷವೂ ಯೋಗ ದಿನದಂದು ಒಂದೊಂದು ದಾಖಲೆ ಸೃಷ್ಟಿಯಾಗಿದೆ, ಯೋಗದಿಂದ ಸಿಗುವ ಶಕ್ತಿ ಶ್ರೀನಗರದಲ್ಲಿ ಅನುಭವಕ್ಕೆ ಬಂದಿದೆ ಎಂದು ಅವರು ಹೆಮ್ಮೆ ವ್ಯಕ್ತಪಡಿಸಿದರು.

ಶ್ರೀನಗರದಲ್ಲಿ ಪ್ರಧಾನಿ ಶ್ರೀ ಮೋದಿ ರವರೊಂದಿಗೆ ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಶ್ರೀ ಮನೋಜ್ ಸಿನ್ಹಾ, ಕೇಂದ್ರ ಸಚಿವ ಶ್ರೀ ಪ್ರತಾಪ್‌ರಾವ್ ಗಣಪತ್‌ರಾವ್ ಜಾಧವ್ ಹಾಗೂ ಅನೇಕ ಮುಖಂಡರು ಯೋಗ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದರು. ದೇಶದ ಪ್ರತಿ ಜಿಲ್ಲೆಯಲ್ಲೂ ಯೋಗ ಕಾರ್ಯಕ್ರಮಗಳು ನಡೆದಿದ್ದು, ರಾಜಕೀಯ ಮುಖಂಡರೂ ಕೂಡ ಪಕ್ಷ ಬೇಧ ಮರೆತು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಾರೆ. ದೆಹಲಿಯ ಕರ್ತವ್ಯ ಪಥದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಯೋಗ ದಿನಾಚರಣೆಯಲ್ಲಿ ಭಾಗಿಯಾಗಿದ್ದರು.







ಪೂರ್ವ ಲಡಾಕ್, ಸಿಕ್ಕಿಂ ಉತ್ತರದ ಗಡಿ ಸೇರಿ 15 ಸಾವಿರ ಅಡಿ ಎತ್ತರದ ಸಿಯಾಚಿನ್ ಗ್ಲೇಸಿಯರ್‌ನಲ್ಲಿ ಕೊರೆವ ಚಳಿಯಲ್ಲೂ ಯೋಧರು ಪ್ರಾಣಾಯಾಮ, ಯೋಗಾಭ್ಯಾಸ ಮಾಡಿದರು. ಹಿಮಾವೃತ ಪ್ರದೇಶದಲ್ಲಿ ಸಶಸ್ತ್ರ ಪಡೆಗಳ ಯೋಗ ಮೆಚ್ಚುಗೆ ಗಳಿಸಿದೆ.

ಗಡಿ ಭದ್ರತಾ ಸಿಬ್ಬಂದಿಗಳು ಕೂಡ ಯೋಗ ದಿನಾಚರಣೆಯಲ್ಲಿ ಭಾಗವಹಿಸಿದ್ದು, ಜೈಸಲ್ಮೆರ್‌ನ ಥಾರ್ ಮರುಭೂಮಿಯಲ್ಲಿ ವಿವಿಧ ಆಸನಗಳನ್ನು ಮಾಡಿ ಯೋಗ ದಿನಾಚರಣೆಯಲ್ಲಿ ಭಾಗಿಯಾಗಿದ್ದಾರೆ. ಅಖ್ನೂರ್ ಸೆಕ್ಟರ್‌ನ ಲೈನ್ ಆಫ್ ಕಂಟ್ರೋಲ್ ಪ್ರದೇಶದಲ್ಲಿ ಯೋಧರ ಜೊತೆ ಶ್ವಾನ ದಳದ ನಾಯಿಗಳು ಕೂಡ ಯೋಗ ಆಸನ ಮಾಡಿದ್ದು ವಿಶೇಷವಾಗಿತ್ತು.

ಅಮೆರಿಕಾ, ಜಪಾನ್, ಇಸ್ರೇಲ್ ಸೇರಿ ಹಲವು ರಾಷ್ಟ್ರಗಳಲ್ಲಿ ಸಾಮೂಹಿಕ ಯೋಗಾಚರಣೆ ಮಾಡಲಾಯಿತು. ನ್ಯೂಯಾರ್ಕ್ ನಗರದ ಟೈಮ್ಸ್ ಸ್ಕ್ವೇರ್‌ನಲ್ಲಿ ಸಾವಿರಾರು ಮಂದಿ ಯೋಗಭ್ಯಾಸ ಮಾಡಿದ್ದು ಬಿನಾಯಾ ಪ್ರಧಾನ್ ಎಂಬುವವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ಇಸ್ರೇಲ್ ನಗರ ಟೆಲ್ ಅವೀವ್‌ನಲ್ಲಿ ಭಾರತದ ರಾಯಭಾರಿ ಕಚೇರಿ ಆಯೋಜಿಸಿದ್ದ ಯೋಗ ಕಾರ್ಯಕ್ರಮದಲ್ಲಿ ನೂರಾರು ಮಂದಿ ಭಾಗಿಯಾಗಿದ್ದು ವಿಶೇಷವಾಗಿತ್ತು. ಭಾರತ ಎಂದರೆ ಯೋಗ, ಯೋಗ ಎಂದರೆ ಭಾರತ. ಯೋಗವನ್ನು ಭಾರತದ ವಿಚಾರವೆಂದು ಶಾಶ್ವತವಾಗಿ ಬಣ್ಣಿಸಲಾಗುವುದು ಎಂದು ಇಸ್ರೇಲ್‌ನ ಕಾನ್ಸುಲ್ ಜನರಲ್ ಕೊಬ್ಬಿ ಶೋಶಣಿ ಹೇಳಿದ್ದಾರೆ.



# ರಾಹುಲ್ 'ಅಪ್ರಬುದ್ಧ' ಮಾತು... ಮೋದಿ 'ಪ್ರಬುದ್ಧ' ಉತ್ತರ..!!




**ಮಹೇಶ್ ಹೆಗಡೆ**
ಬಿಜೆಪಿ ಕಾರ್ಯಕರ್ತರು


ಒಬ್ಬ ರೋಗಿ ಐಸಿಯುನಲ್ಲಿರುತ್ತಾನೆ. ಒಂದು ದಿನ ಅಲ್ಪ ಚೇತರಿಕೆ ಕಾಣುತ್ತಾನೆ. ಆದರೆ ಸಂಪೂರ್ಣ ಗುಣವಾದ ಹಾಗೆ ಆರ್ಭಟಿಸುತ್ತಾನೆ. ಆತನಿಗೇ ಗೊತ್ತಿಲ್ಲಾ, ತಾನಿನ್ನು ಐಸಿಯುದಲ್ಲೆ ಇದ್ದೇನೆ ಎಂದು ಅಥವಾ ಗೊತ್ತಿದ್ದರೂ ಗೊತ್ತಿಲ್ಲದಂತೆ ನಾಟಕವಾಡಿ ಮಂಕು ಮಾಡುತ್ತಿದ್ದಾನೆ. ಒಟ್ಟಿನಲ್ಲಿ ಆತ ಇನ್ನೂ ಐಸಿಯುದಲ್ಲೆ ಇದ್ದಾನೆ ಎಂದು ಎಲ್ಲರಿಗೂ ತಿಳಿದಿದೆ. ಈ ಸಾಲು ಈಗ ಯಾಕಂದ್ರೆ ಲೋಕಸಭೆ ಚುನಾವಣೆಯಲ್ಲಿ 99 ಸೀಟ್ ಗೆದ್ದು ದೇಶವನ್ನೇ ಗೆದ್ದೆ ಎನ್ನುವ ರೀತಿ ಅಪ್ರಬುದ್ದವಾಗಿ ಹಾರಾಡುತ್ತಿರುವ ಕಾಂಗ್ರೆಸ್ ಮತ್ತು ಅದರ ನಾಯಕ ಶ್ರೀ ರಾಹುಲ್ ಗಾಂಧಿಯವರ ಸದ್ಯದ ಪರಿಸ್ಥಿತಿ. ಪ್ರತಿಪಕ್ಷದ ನಾಯಕನಾಗಿ ಆಯ್ಕೆಯಾದ ಮೇಲೆ ಮೊದಲ ಅಧಿವೇಶನದಲ್ಲಿ ಶ್ರೀ ರಾಹುಲ್ ಗಾಂಧಿ ರವರು ಒಂದಿಷ್ಟು ಮಾತನಾಡುವ ಪ್ರಯತ್ನವೇನೊ ಮಾಡಿದ್ದಾರೆ, ಆದರೆ ಯಾವುದೂ ಮೌಲ್ಯಯುತವಾದುದ್ದಲ್ಲಾ, ಬದಲಾಗಿ ಕಾಂಗ್ರೆಸ್ ಚಾಳಿಯಾದ ಸುಳ್ಳು ಮತ್ತು ಒಲೈಕೆಯ ಮಾತೇ ಹೆಚ್ಚಾಗಿತ್ತು.

### ರಾಹುಲ್ ಅಪ್ರಬುದ್ಧತೆ

ಆಡಳಿತ ಪಕ್ಷವನ್ನು ವಿರೋಧಿಸುವ ಭರದಲ್ಲಿ ಕೇಂದ್ರ ವಿಪಕ್ಷ ನಾಯಕ ಶ್ರೀ ರಾಹುಲ್ ಗಾಂಧಿ ಅವರು ಬಹುಸಂಖ್ಯಾತ ಹಿಂದುಗಳನ್ನು ಘಾಸಿಗೊಳಿಸಿದ್ದಾರೆ. ಹಿಂದುಗಳೆಂದು ತಮ್ಮನ್ನು ಕರೆದುಕೊಳ್ಳುವವರು ನಿರಂತರವಾಗಿ ಹಿಂಸಾಚಾರದಲ್ಲಿ ತೊಡಗಿದ್ದಾರೆ. ಇಂಥವರು ಹಿಂದೂಗಳೇ ಅಲ್ಲಾ, ಕೇವಲ ಹಿಂಸಾಚಾರ, ದ್ವೇಷ ಹಾಗೂ ಸುಳ್ಳಿನ ಬಗ್ಗೆ ಮಾತನಾಡುತ್ತಾರೆ ಎಂದು

ಕಿಡಿ ಕಾರಿದ್ದಾರೆ. ಅಷ್ಟೇ ಅಲ್ಲದೆ ಅಗ್ನಿವೀರ್ ಯೋಜನೆಯ ಬಗ್ಗೆ ಅಪಸ್ವರ ಎತ್ತಿರುವ ಶ್ರೀ ರಾಹುಲ್‌ಗಾಂಧಿ ಅಗ್ನಿ ವೀರರಾಗಿ ಹುತಾತ್ಮರಾದವರಿಗೆ ನೀಡುವ ಪರಿಹಾರದ ವಿಚಾರವಾಗಿ ಸದನದಲ್ಲಿ ಸುಳ್ಳನ್ನಾಡಿದರು. ಅಷ್ಟೇ ಅಲ್ಲದೆ ಪ್ರಧಾನಿ ಶ್ರೀ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬೆಂಬಲ ಬೆಲೆಯಲ್ಲಿ ತೀವ್ರ ಏರಿಕೆಯಾಗಿದ್ದರೂ, ಬೆಂಬಲ ಬೆಲೆಯ ವಿರುದ್ಧವೂ ಸಹ ಶ್ರೀ ರಾಹುಲ್ ಗಾಂಧಿ ರವರು ಆಧಾರ ರಹಿತ ಮಾತುಗಳನ್ನಾಡಿದರು. ಒಟ್ಟಾರೆ ತಮ್ಮ ಭಾಷಣದಲ್ಲಿ ಮೌಲ್ಯಯುತ ವಿಷಯಗಳನ್ನಾಡಿದ್ದಕ್ಕಿಂತ ದ್ವೇಷದ ಮತ್ತು ಸುಳ್ಳಿನ ಸರಮಾಲೆಯನ್ನೇ ಹರಿ ಬಿಟ್ಟಿದ್ದು ವಿಷಾದನೀಯ.

## ಪ್ರಬುದ್ಧ ಉತ್ತರ

ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮೂರನೇ ಬಾರಿಗೆ ಪ್ರಧಾನಿಯಾಗಿರುವ ಶ್ರೀ ನರೇಂದ್ರ ಮೋದಿ ರವರು ನೂತನ ಸರ್ಕಾರದ ಮೊದಲ ಅಧಿವೇಶನದಲ್ಲಿ ತಮ್ಮ ಪ್ರಬುದ್ಧ ಮಾತುಗಳ ಮೂಲಕ ವಿರೋಧ ಪಕ್ಷಗಳ ಆರೋಪಕ್ಕೆ ತಕ್ಕ ಉತ್ತರವನ್ನು ನೀಡಿದರು. 135 ನಿಮಿಷಗಳ ಕಾಲ ಮಾತನಾಡಿದ ಪ್ರಧಾನಿ ಶ್ರೀ ಮೋದಿ ರವರು ತೀಕ್ಷ್ಣ ಉತ್ತರ ನೀಡಿದರು.

ಈ ಬಾರಿಯ ಲೋಕಸಭೆಯ ಚುನಾವಣೆಯಲ್ಲಿ ಗೆದ್ದಂತೆ ಬೀಗುತ್ತಿರುವ ಕಾಂಗ್ರೆಸ್‌ಗೆ ವಾಸ್ತವತೆಯ ಅರಿವಿಲ್ಲ. ಅವರು ಗೆದ್ದಿರುವುದು 100 ಕ್ಕೆ 99 ಅಲ್ಲ, 543 ಕ್ಕೆ 99. ಆದರೂ ತಾನೇ ಗೆದ್ದಂತೆ ವರ್ತಿಸುತ್ತಿದ್ದಾರೆ ಎಂದು ಬಾಲಕ ಬುದ್ಧಿಯ ಕಥೆಯ ಮೂಲಕ ವಾಗ್ದಾಳಿ ನಡೆಸಿದರು. ವೈಫಲ್ಯದಲ್ಲೂ ವಿಶ್ವದಾಖಲೆ ಸ್ಥಾಪಿಸಿದ್ದಾರೆ, ನಿರಂತರ ಸುಳ್ಳು ಹೇಳಿದರೂ ಸೋಲಬೇಕಾಗಿ ಬಂದವರ ನೋವು ಅರ್ಥ ಮಾಡಿಕೊಳ್ಳಬಲ್ಲೆ ಎಂದು ಕೇಂದ್ರ ವಿಪಕ್ಷ ನಾಯಕ ಶ್ರೀ ರಾಹುಲ್ ಗಾಂಧಿ ವಿರುದ್ಧ ಮತ್ತು ಪ್ರತಿಪಕ್ಷಗಳ ಆರೋಪಕ್ಕೆ ವ್ಯಂಗ್ಯವಾಗಿ ಉತ್ತರ ನೀಡಿದರು.

ತಮ್ಮ ಭಾಷಣದ ಮಧ್ಯೆ ಕಥೆಯೊಂದನ್ನು ಹಂಚಿಕೊಂಡ ಅವರು, ಮಗುವೊಂದು ತನ್ನ ಬೈಸಿಕಲ್‌ನಿಂದ ಬಿದ್ದಾಗ, ಹಿರಿಯರು ಅದನ್ನು ಸಾಂತ್ವನಗೊಳಿಸಿ, ನೀನೊಬ್ಬ ಅದ್ಭುತ ಸೈಕ್ಲಿಸ್ಟ್, ಬೀಳುವುದು ದೊಡ್ಡ ವಿಷಯವಲ್ಲ, ಬೀಳುವಾಗ ಸಣ್ಣದೊಂದು ಇರುವೆ ಮಾತ್ರ ಸತ್ತಿದೆ ಎಂದು ಸಮಾಧಾನ ಮಾಡುತ್ತಾರೆ. ಕಾಂಗ್ರೆಸ್ ಮತ್ತು ಅದರ ಸುತ್ತಮುತ್ತಲಿರುವವರು ಈಗ ಇಂತಹ ಸಾಂತ್ವನಗೊಳಿಸುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ವ್ಯಂಗ್ಯವಾಡಿದರು. ಮುಂದುವರೆದು ಮಗುವೊಂದು ತಾನು ಪರೀಕ್ಷೆಯಲ್ಲಿ 99 ಅಂಕ ಗಳಿಸಿದ್ದೇನೆ ಎಂದು ಸಿಹಿ ಹಂಚುತ್ತಿತ್ತು. ಆದರೆ, ಆ ಮಗು ತಾನು 543ಕ್ಕೆ 99 ಅಂಕ ಪಡೆದಿದ್ದು ಎಂದು ಬಹಿರಂಗಪಡಿಸಲಿಲ್ಲ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು.

ಪ್ರಶ್ನೆ ಪತ್ರಿಕೆ ಸೋರಿಕೆ ಸಮಸ್ಯೆ ಪರಿಹರಿಸಲು ಕಾನೂನು ರಚಿಸಲಾಗಿದೆ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು. ನೀಟ್ ಅಕ್ರಮದಲ್ಲಿ ಭಾಗಿಯಾದವರನ್ನು ಸುಮ್ಮನೆ ಬಿಡುವುದಿಲ್ಲ, ಸರ್ಕಾರ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಹಿಂದುಗಳ ಬಗ್ಗೆ ಕೇಂದ್ರ ವಿಪಕ್ಷ ನಾಯಕರಾದ ಶ್ರೀ ರಾಹುಲ್‌ಗಾಂಧಿ ರವರು ಮಾತನಾಡಿರುವುದು ನೋವಾಗಿದೆ ನಮ್ಮ ದೇವರನ್ನು ಅವಮಾನಿಸಿದ್ದಾರೆ ಕಾಂಗ್ರೆಸ್ ಮತ್ತು ಶ್ರೀ ರಾಹುಲ್‌ಗಾಂಧಿಯ ಈ ನಡೆಯನ್ನು ಜನರು ಶತಮಾನಗಳುದ್ದಕ್ಕೂ ಕ್ಷಮಿಸುವುದಿಲ್ಲ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದರು. ಹಿಂದೂ ಸಹಿಷ್ಣು. ಹಿಂದೂಗಳ ಮೇಲೆ ಸುಳ್ಳು ಆರೋಪ ಹೊರಿಸಲು ಸಂಚು ರೂಪಿಸಲಾಗಿದೆ. ಹಿಂದೂಗಳು ಹಿಂಸೆಯನ್ನು ಬಯಸುತ್ತಾರೆ ಎಂದು ಹೇಳಲಾಗಿದೆ, ಇದು ನಿಮ್ಮ ಸ್ವಭಾವ, ಆಲೋಚನೆ ಮತ್ತು ದ್ವೇಷದ ಪ್ರತೀಕ, ಈ ಬಗ್ಗೆ ಹಿಂದುಗಳೇ ಯೋಚಿಸಬೇಕಾಗಿದೆ ಎಂದು ಅವರು ಎಚ್ಚರಿಕೆ ನೀಡಿದರು.

ಒಟ್ಟಾರೆ ಒಬ್ಬ ಸಮರ್ಥ ನಾಯಕ ಹೇಗೆ ಮೌಲ್ಯಯುತವಾಗಿ ಮಾತನಾಡಬೇಕೊ ಹಾಗೆ ದೇಶದ ಪ್ರಧಾನಿ ಶ್ರೀ ಮೋದಿಯವರು ಪ್ರಬುದ್ಧವಾಗಿ ಪ್ರತಿಪಕ್ಷಗಳ ಆರೋಪಕ್ಕೆ ಉತ್ತರ ನೀಡಿದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಮರ್ಥ ಪ್ರತಿಪಕ್ಷ ಹಾಗೂ ಅದರ ನಾಯಕನಿಗಿರುವ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೆ ಶ್ರೀ ರಾಹುಲ್‌ಗಾಂಧಿ ರವರು ತಮ್ಮ ಅಪ್ರಬುದ್ಧತೆಯನ್ನು ಮೆರೆದಿರುವುದು ವಿಪಕ್ಷ ನಾಯಕ ಸ್ಥಾನಕ್ಕೇ ರಾಹುಲ್‌ಗಾಂಧಿಯೇ ಅಪಮಾನ ಮಾಡಿದಂತಾಗಿದೆ. ಇನ್ನು ಮುಂದಾದರೂ ವಿರೋಧ ಪಕ್ಷದ ಜವಾಬ್ದಾರಿಯುತ ಸ್ಥಾನವನ್ನು ಜವಾಬ್ದಾರಿಯುತವಾಗಿ ನಿರ್ವಹಿಸಲಿ ಎಂಬುದು ಆಡಳಿತ ಪಕ್ಷ ಬಿಜೆಪಿಯ ಆಶಯ.

**ಚರ್ಚೆಗೊಂದು ಸಾಲು...**

**ತಾರ್ಕಿಕ ಅಂತ್ಯ ಕಾಣುವಂತಹ ರೀತಿಯಲ್ಲಿ ಹೋರಾಟಗಳನ್ನು ಯೋಜಿಸಬೇಕು.**

# ಡಾ. ಶ್ಯಾಮ ಪ್ರಸಾದ ಮುಖರ್ಜಿ ರವರ ಪುಣ್ಯ ತಿಥಿ ಹಾಗೂ ಜನ್ಮದಿನ ಅಂಗವಾಗಿ

# ವಿಶೇಷ ಕಾರ್ಯಕ್ರಮಗಳು





**ಡಾ.** ಶ್ಯಾಮ ಪ್ರಸಾದ ಮುಖರ್ಜಿ ರವರ ಪುಣ್ಯ ತಿಥಿ ಹಾಗೂ ಜಯಂತಿಯ ನಡುವಿನ 14 ದಿನಗಳಲ್ಲಿ, ಜೂನ್ 23 ರಿಂದ ಜುಲೈ6, 2024ರ ವರೆಗೆ ಕೇಂದ್ರ ಬಿಜೆಪಿ ಆದೇಶದ ಮೇರೆಗೆ ರಾಜ್ಯಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಬಿಜೆಪಿಯ ಸಂಸ್ಥಾಪಕ ಅಧ್ಯಕ್ಷರು, ನೆಹರೂ ಮಂತ್ರಿ ಮಂಡಲದಲ್ಲಿ ಸಚಿವರಾಗಿದ್ದು ಸಚಿವ ಸ್ಥಾನ ತೊರೆದು ಅಖಂಡ ಭಾರತವನ್ನು ಮರುಸ್ಥಾಪಿಸಲು ತಮ್ಮ ಇಡೀ ಜೀವನವನ್ನೇ ದೇಶಕ್ಕಾಗಿ ಸಮರ್ಪಿಸಿದ ಅಪ್ರತಿಮ ದೇಶಭಕ್ತರು, ಕಾಶ್ಮೀರವನ್ನು ಭಾರತದ ಅವಿಭಾಜ್ಯ ಅಂಗವೆಂದು ಹೋರಾಟ ನಡೆಸಿ, ಜೀವನ್ನು ಅದೇ ಉದ್ದೇಶಕ್ಕೆ ಸಮರ್ಪಿಸಿದ ಪೂಜ್ಯನೀಯ ಡಾ. ಶ್ಯಾಮ ಪ್ರಸಾದ ಮುಖರ್ಜಿ ರವರು ಎಲ್ಲರಿಗೂ ಆದರ್ಶಪ್ರಿಯರು. ಅಂತಹ ಮಹನೀಯರ ಪುಣ್ಯಸ್ಮರಣೆಯನ್ನು ಪಕ್ಷ ಪ್ರತಿವರ್ಷ ವಿಭಿನ್ನ ಚಟುವಟಿಕೆಗಳನ್ನು ಆಯೋಜಿಸುವುದರ ಮೂಲಕ ಅವರಿಗೆ ಗೌರವ ಸಮರ್ಪಣೆ ಮಾಡುತ್ತಲೇ ಬಂದಿದೆ.

ಈ ವರ್ಷ ರಾಜ್ಯಾದ್ಯಂತ ಜಿಲ್ಲಾ ಮಟ್ಟದ ವಿಚಾರ ಸಂಕಿರಣ, ಬೂತ್ ಮಟ್ಟದಲ್ಲಿ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ರವರ ಭಾವಚಿತ್ರಕ್ಕೆ ಪುಷ್ಪನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪಕ್ಷದ 39 ಸಂಘಟನಾತ್ಮಕ ಜಿಲ್ಲೆಗಳಲ್ಲಿಯೂ ಹಾಗೂ ರಾಜ್ಯದ 19,335 ಬೂತ್‌ಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು 'ಏಕ್ ಪೇಡ್ ಮಾ ಕೆ ನಾಮ್' – ತಾಯಿಯ ಹೆಸರಿನಲ್ಲಿ ಒಂದು ಸಸಿ ಎಂಬ ವಿನೂತನ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದರ ಭಾಗವಾಗಿ ಕರ್ನಾಟಕದಲ್ಲಿ ಒಟ್ಟಾರೆ 26,318 ಸಸಿಗಳನ್ನು ನೆಡಲಾಯಿತು. ಈ ಕಾರ್ಯಕ್ರಮದಲ್ಲಿ ರಾಜ್ಯ, ಜಿಲ್ಲಾ, ಮಂಡಲ, ಶಕ್ತಿಕೇಂದ್ರ, ಬೂತ್, ಮೋರ್ಚಾ, ಪ್ರಕೋಷ್ಠಗಳ ಎಲ್ಲ ಪದಾಧಿಕಾರಿಗಳು, ಸಂಸದರು, ಶಾಸಕರು, ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ಗ್ರಾಮ ಪಂಚಾಯ್ತಿ ಸದಸ್ಯರು, ಸಹಕಾರಿ ಸಂಘಗಳ ಸದಸ್ಯರು, ಪ್ರಶಸ್ತಿ ವಿಜೇತರು, ಸಮಾಜಿಕ – ಸಾಂಸ್ಕೃತಿಕ ಸಂಘಗಳ, ಪರಿಸರ ಸಂಸ್ಥೆಗಲ ಅನೇಕ ಸದಸ್ಯರು ಪಾಲ್ಗೊಂಡು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ‘ಏಕ್ ಪೇಡ್ ಮಾ ಕೆ ನಾಮ್’ - ತಾಯಿಯ ಹೆಸರಿನಲ್ಲಿ ಒಂದು ಸಸಿ ಅಭಿಯಾನ



ಶಿವಮೊಗ್ಗ - ಶಿಕಾರಿಪುರ



ಉಡುಪಿ



ಬೆಂಗಳೂರು ಗ್ರಾಮಾಂತರ



ಬೀದರ್



ಚಿಕ್ಕಮಗಳೂರು



ಹಾಸನ



ಹಾವೇರಿ



ಕಲಬುರ್ಗಿ ನಗರ



ಮೈಸೂರು



ಉತ್ತರ ಕನ್ನಡ



ಕೊಡಗು

## 'ಏಕ್ ಪೇಡ್ ಮಾ ಕೆ ನಾಮ್' - ತಾಯಿಯ ಹೆಸರಿನಲ್ಲಿ ಒಂದು ಸಸಿ ಅಭಿಯಾನ



ಬಳ್ಳಾರಿ



ಬೆಳಗಾವಿ



ಚಿಕ್ಕಬಳ್ಳಾಪುರ



ಹುಬ್ಬಳ್ಳಿ



ರಾಯಚೂರು



ವಿಜಯನಗರ



ಯಾದಗಿರಿ


## ಅಭಿನಂದನೆಗಳು



**ಶ್ರೀ ರಾಧಾ ಮೋಹನ್ ದಾಸ್ ಅಗರ್ವಾಲ್**
ರಾಜ್ಯ ಉಸ್ತುವಾರಿಗಳು
ಬಿಜೆಪಿ - ಕರ್ನಾಟಕ



**ಶ್ರೀ ಸುಧಾಕರ ರೆಡ್ಡಿ**
ರಾಜ್ಯ ಸಹ-ಉಸ್ತುವಾರಿಗಳು
ಬಿಜೆಪಿ - ಕರ್ನಾಟಕ



# ನೂತನ ಸಂಸದರಿಗೆ ಸನ್ಮಾನ

## ಮೈತ್ರಿ ಕೂಟಕ್ಕೆ ಜನಾಶೀರ್ವಾದ ಕರ್ನಾಟಕ ಬಿಜೆಪಿಯ ಭದ್ರಕೋಟೆ ಸಾಬೀತು

**– ಬಿ.ವೈ. ವಿಜಯೇಂದ್ರ, ರಾಜ್ಯಾಧ್ಯಕ್ಷರು, ಬಿಜೆಪಿ**

ದಕ್ಷಿಣ ಭಾರತದಲ್ಲಿ ಕರ್ನಾಟಕವು ಬಿಜೆಪಿಯ ಭದ್ರಕೋಟೆ ಎಂಬುದು ಮತ್ತೊಮ್ಮೆ ಲೋಕಸಭಾ ಚುನಾವಣೆಯಲ್ಲಿ ಸಾಬೀತಾಗಿದೆ. ಬಿಜೆಪಿ ಹಾಗೂ ಜೆಡಿಎಸ್ ಒಟ್ಟಾಗಿರುವುದಕ್ಕೆ ರಾಜ್ಯದ ಜನರ ಆಶೀರ್ವಾದ ಲಭಿಸಿದೆ. ರಾಜ್ಯದಲ್ಲಿ 19 ಎನ್‌ಡಿಎ ಒಕ್ಕೂಟದ ಸಂಸದರ ಆಯ್ಕೆಗೆ ಕಾರಣಕರ್ತರಾದ ಎಲ್ಲ ಕಾರ್ಯಕರ್ತರಿಗೆ ಅಭಿನಂದನೆಗಳು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ಬಿ.ವೈ. ವಿಜಯೇಂದ್ರ ಅವರು ತಿಳಿಸಿದರು. ಅರಮನೆ ಮೈದಾನದಲ್ಲಿ ರಾಜ್ಯದ 19 ಜನ ಎನ್‌ಡಿಎ ಸಂಸದರ ಸನ್ಮಾನ ಹಾಗೂ ರಾಜ್ಯದ ಕೇಂದ್ರ ಸಚಿವರ ಅಭಿನಂದನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಸಾಕಷ್ಟು ಅಪಪ್ರಚಾರ, ಆಮಿಷಗಳ ನಡುವೆಯೂ ರಾಜ್ಯದ ಜನತೆ ಬಿಜೆಪಿ ಹಾಗೂ ಜೆಡಿಎಸ್ ಮೈತ್ರಿಕೂಟಕ್ಕೆ ಆಶೀರ್ವಾದ ಮಾಡಿದ್ದಾರೆ. ರಾಜ್ಯದ ನೂತನ ಸಂಸದರಿಗೆ ಅಭಿನಂದನೆಗಳು ಎಂದು ಹೇಳಿದರು.

### ಕಾಂಗ್ರೆಸ್ ಎಂದರೆ ಅಭಿವೃದ್ಧಿ ಶೂನ್ಯತೆ

ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಮಾತನಾಡಿ, ಕಾಂಗ್ರೆಸ್ ಎಂದರೆ ಸುಳ್ಳು ಗ್ಯಾರಂಟಿ, ಭ್ರಷ್ಟಾಚಾರ, ದುರಾಡಳಿತ ಮತ್ತು ಅಭಿವೃದ್ಧಿ ಶೂನ್ಯತೆ ಎಂಬುದನ್ನು ಜನರಿಗೆ ಮನವರಿಕೆ ಮಾಡಲು ಮನವಿ ಮಾಡಿದರು. ಈ ಹಿಂದೆ ರಾಜ್ಯಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ಕರ್ನಾಟಕವು ಮುಂಚೂಣಿಯಲ್ಲಿತ್ತು. ಆದರೆ, ಕಳೆದ ಒಂದು ವರ್ಷದ ಕಾಂಗ್ರೆಸ್ ದುರಾಡಳಿತದಲ್ಲಿ ರಾಜ್ಯವು ಎಲ್ಲ ಕ್ಷೇತ್ರಗಳಲ್ಲೂ ಹಿನ್ನಡೆ ಸಾಧಿಸುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕೇಂದ್ರ ಸಚಿವ ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರು ಮಾತನಾಡಿ, ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಅತ್ಯಂತ ಸಹಜವಾದುದು. ರಾಜ್ಯದ ಜನತೆ ಬಿಜೆಪಿ ಹಾಗೂ ಜೆಡಿಎಸ್ ಹೊಂದಾಣಿಕೆಯನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಂಡು ಆಶೀರ್ವಾದ ಮಾಡಿದ್ದಾರೆ. ಪ್ರಧಾನಿ ಶ್ರೀ ಮೋದಿಯವರ ಬಗ್ಗೆ ವಿಶ್ವದಾದ್ಯಂತ ಅತ್ಯಂತ ಗೌರವ ಹಾಗೂ ವಿಶ್ವಾಸದ ಭಾವನೆ ಇದೆ. ಗ್ಯಾರಂಟಿಯೇ ಬೆಲೆ ಏರಿಕೆಗೆ ಮೂಲ ಎಂಬಂತೆ ಕಾಂಗ್ರೆಸ್ ಸರ್ಕಾರ ವರ್ತಿಸುತ್ತಿದೆ ಎಂದು ಅವರು ಟೀಕಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ಡಿ.ವಿ. ಸದಾನಂದಗೌಡ, ಸಂಸದರಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಗೋವಿಂದಕಾರಜೋಳ, ಕೋರ್ ಕಮಿಟಿ ಸದಸ್ಯರು, ನೂತನ ಸಂಸ ದರು, ಶಾಸಕರು, ವಿಧಾನಪರಿಷತ್ ಸದಸ್ಯರು, ಮಾಜಿ ಸಂಸದರು, ಮಾಜಿ ಶಾಸಕರು, ವಿಧಾನಪರಿಷತ್ ಮಾಜಿ ಸದಸ್ಯರು, ರಾಜ್ಯ ಪದಾಧಿಕಾರಿಗಳು, ಜಿಲ್ಲಾ ಪದಾಧಿಕಾರಿಗಳು, ಜೆಡಿಎಸ್ ಮುಖಂಡರು ಹಾಗೂ ಎರಡೂ ಪಕ್ಷಗಳ ಕಾರ್ಯಕರ್ತರು ಉಪಸ್ಥಿತರಿದ್ದರು.



ವಿಧಾನಸಭೆ ಚುನಾವಣೆ ನಡೆದು ಕೇವಲ ಒಂದು ವರ್ಷದೊಳಗೆ ಕಾಂಗ್ರೆಸ್ ಪಕ್ಷ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರ ಅಹಂಕಾರಕ್ಕೆ ಜನರು ಸ್ಪಷ್ಟವಾದ ಕಪಾಳಮೋಕ್ಷ ಮಾಡಿದ್ದಾರೆ. ವಾಲ್ಮೀಕಿ ನಿಗಮದ ಹಗರಣ ಸಂಬಂಧ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರು ರಾಜೀನಾಮೆ ಕೊಡಬೇಕಿತ್ತು. ಭ್ರಷ್ಟ ಹಿಂದೂ ವಿರೋಧಿ, ಬೆಲೆ ಏರಿಕೆಗಳ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ನಾವು ಶ್ರಮಿಸಬೇಕಿದೆ.

**– ಪ್ರಹ್ಲಾದ್ ಜೋಶಿ, ಕೇಂದ್ರ ಸಚಿವರು**

# ಮೂಡಾ  ಹಗರಣ

# 50:50

## ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಾರಣ





ಮಾಹಿತಿ:



**ಎಂ.ಜಿ. ಮಹೇಶ್**
ರಾಜ್ಯ ವಕ್ತಾರರು



**ಅಶೋಕ್ ಕೆ.ಎಂ.ಗೌಡ**
ವಕ್ತಾರರು

(ವರದಿ)
**ಬಿದರೆ ಪ್ರಕಾಶ್**
ರಾಜ್ಯ ಸಂಚಾಲಕರು
ಪ್ರಕಾಶನ ಪ್ರಕೋಷ್ಠ


**ಮೈಸೂರು ನಗರದ ಕೆಸರೆಯ ಸ ನಂ 464ರಲ್ಲಿ 3 ಎಕರೆ 14 ಗುಂಟೆ ಜಮೀನನ್ನು ಮೂಡಾ ವಶಪಡಿಸಿಕೊಂಡು ಪರಿಹಾರವನ್ನೂ ನೀಡಿತು ಮತ್ತು ನಿವೇಶನಗಳನ್ನಾಗಿ ಮಾಡಿ ಉದ್ಯಾನವನ ರಸ್ತೆ ಎಲ್ಲವನ್ನೂ ಮಾಡಿ ಅಭಿವೃದ್ಧಿಯನ್ನೂ ಮಾಡಿತು. ಆದರೆ ನಂತರ ಡಿ ನೋಟಿಫೈ ಮಾಡಿತು.ಇದನ್ನು ಮಲ್ಲಿಕಾರ್ಜುನ ಸ್ವಾಮಿ ಖರೀದಿಸಿದ ತಮ್ಮಸಹೋದರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರಿಗೆ ಅರಿಶಿನ ಕುಂಕುಮಕ್ಕೆಂದು ನೀಡಿದರು. ದೇವನೂರು ಬಡಾವಣೆಯಾಗಿ ಅಭಿವೃದ್ಧಿ ಪಡಿಸಲಾದ ಈ ಜಮೀನಿನ ಪರಿಹಾರವಾಗಿ ಶೇ 50:50 ಅನುಪಾತದಡಿ ನಿವೇಶನ ನೀಡಿದ್ದು ನಗರದ ಅತ್ಯಂತ ಬೆಲೆಬಾಳುವ ಪ್ರದೇಶವಾದ ವಿಜಯನಗರ ಬಡಾವಣೆಯಲ್ಲಿ. ಸಿದ್ದರಾಮಯ್ಯನವರ ಪ್ರಭಾವದಿಂದ ನಡೆದ ಕೋಟ್ಯಾಂತರ ರೂಗಳ ಭ್ರಷ್ಟಾಚಾರದ ಕರ್ಮಕಾಂಡವಿದು.**

**ಕ**ಳೆದ ಕೆಲವು ದಿನಗಳಿಂದ ಇಡೀ ರಾಜ್ಯದಲ್ಲಿ ಸದ್ದು ಮಾಡುತ್ತಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿದೆಯೆನ್ನಲಾದ ಕೋಟ್ಯಾಂತರ ರೂಗಳ ನಿವೇಶನ ವರ್ಗಾವಣೆಯ ವಿವಾದದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪಾತ್ರವಿರುವ ಶಂಕೆ ಲಭ್ಯವಾಗುತ್ತಿರುವ ಹಿನ್ನಲೆಯಲ್ಲಿಸಿದ್ದರಾಮಯ್ಯನವರು ತಮ್ಮ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಲೇ ಬೇಕಾದ ಸ್ಥಿತಿ ಬಂದಿದೆ.

## ಏನಿದು ಹಗರಣ?

- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ದೇವನೂರು 3ನೇ ಹಂತದ ಬಡಾವಣೆಗಾಗಿ ಕೆಸರೆ ಗ್ರಾಮದ ಸ.ನಂ.464 ರಲ್ಲಿ ಶ್ರೀ.ನಿಂಗ ಬಿನ್ ಜವರ ರವರ ಹೆಸರಿನಲ್ಲಿದ್ದ 3-16 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲು ಪ್ರಾಧಿಕಾರವು ಸಂಖ್ಯೆ: ಪ್ರಭೂಸ್ವಾ48/92-93 ರಂತೆ ದಿನಾಂಕ18.09.1992 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಹಾಗೂ ಸರ್ಕಾರದ ಪತ್ರ ಸಂಖ್ಯೆ: ನಅಇ 557 ಅಪ್ರಾವಿ 96 ರಂತೆ ದಿನಾಂಕ 20.08.1997 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಸಂಖ್ಯೆ: ಎಲ್‌ಎಕ್ಯೂ(3)ಸಿಆರ್‌8/92-93 ದಿನಾಂಕ:31.10.1997 ರಂದು ಸಾಮಾನ್ಯ ಅವಾರ್ಡ್ ನಿರ್ಣಯಿಸಲಾಗಿರುತ್ತದೆ. ಎಕರೆ ಒಂದಕ್ಕೆ ರೂ.50,000/-ಗಳಂತೆ ಸದರಿ ಜಮೀನಿಗೆ ರೂ.3,24,700/- ಗಳನ್ನು ಅವಾರ್ಡ್ ನಿರ್ಣಯಿಸಲಾಗಿರುತ್ತದೆ.

  ಸಂಖ್ಯೆ: ಎಲ್‌ಎಕ್ಯೂ(3)ಸಿಆ48/92-93 ರಂತೆ ಕಲಂ16(2)ರನ್ನುಹೊರಡಿಸಲಾಗಿದೆ.
- ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ.ನಅಇ 499 ಅಪ್ರಾವಿ 96, ದಿನಾಂಕ 18.05.1998 ರ ಪ್ರಕಟಣೆಯಂತೆ ಮೇಲ್ಕಂಡ 3-16 ಎಕರೆ ಜಮೀನನ್ನು ಸರ್ಕಾರವು ಭೂಸ್ವಾಧೀನ ನಡವಳಿಯಿಂದ ಕೈಬಿಟ್ಟು ಪ್ರಕಟಣೆ ಹೊರಡಿಸಿರುತ್ತದೆ.
- ಪ್ರಶ್ನಿತ ಭೂಮಿಯನ್ನು ಶ್ರೀ.ಬಿ.ಎಂ.ಮಲ್ಲಿಕಾರ್ಜುನ ಸ್ವಾಮಿ ಬಿನ್ ಮರಿಲಿಂಗಯ್ಯ ಇವರು ಖರೀದಿ ಮಾಡಿದ್ದು, ದಿನಾಂಕ:15.07.2005 ರ ಅಧಿಕೃತ ಜ್ಞಾಪನಾದನ್ವಯ, ಮಾನ್ಯ ಜಿಲ್ಲಾಧಿಕಾರಿಗಳಿಂದ ವಸತಿ ಉದ್ದೇಶಕ್ಕಾಗಿ ಜಮೀನು ಭೂಪರಿವರ್ತನೆಯಾಗಿರುತ್ತದೆ.
- ಪ್ರಸ್ತಾಪಿತ ಭೂಮಿಯನ್ನು ಅಧಿಸೂಚನೆಯಿಂದ ರದ್ದುಪಡಿಸುವ ಪೂರ್ವದಲ್ಲಿ, ಬಡಾವಣೆ ಅಭಿವೃದ್ಧಿ ಪಡಿಸಿರುವ ಸಮಯದಲ್ಲಿ ಮೇಲ್ಕಂಡ ಜಮೀನನ್ನು ಸಹ ಸೇರಿಸಿ ಅಭಿವೃದ್ಧಿ ಪಡಿಸಲಾಗಿದ್ದು, ಉದ್ಯಾನವನ, ರಸ್ತೆ ಹಾಗೂ ನಿವೇಶನಗಳನ್ನು ರಚಿಸಿ, ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.
- ಸದರಿ 3-16 ಎಕರೆ ಜಮೀನನ್ನು ಶ್ರೀ.ಬಿ.ಎಂ. ಮಲ್ಲಿಕಾರ್ಜುನಸ್ವಾಮಿ ರವರು ಶ್ರೀಮತಿ.ಪಾರ್ವತಿ ರವರಿಗೆ ಮಾರಾಟ ಮಾಡಿದ್ದು, ಪ್ರಸ್ತುತ ಶ್ರೀಮತಿ ಪಾರ್ವತಿ ರವರು ಅರ್ಜಿ ಸಲ್ಲಿಸಿ ಭೂಸ್ವಾಧೀನದಿಂದ ಹೊರತು ಪಡಿಸಿರುವ ಭೂಮಿಯನ್ನು ಪ್ರಾಧಿಕಾರವು ಉಪಯೋಗಿಸಿಕೊಂಡಿರುವುದರಿಂದ ತಮ್ಮ ಜಮೀನಿನ ಬದಲಿಗೆ ಅಷ್ಟೇ ವಿಸ್ತೀರ್ಣದ ಜಮೀನನ್ನು ಪ್ರಾಧಿಕಾರದ ಸಮನಾಂತರ ಬಡಾವಣೆಯಲ್ಲಿ ನೀಡುವಂತೆ ಕೋರಿದ್ದರ ಮೇರೆಗೆ, ದಿ:15.12.2017 ಮತ್ತು ದಿ:30.12.2017ರ ಪ್ರಾಧಿಕಾರದ ಸಭೆಯಲ್ಲಿ ಸದರಿ ಜಮೀನಿಗೆ ಬದಲಿಯಾಗಿ ಅಭಿವೃದ್ಧಿಪಡಿಸದೇ ಇರುವ ಜಮೀನನ್ನು ನೀಡುವುದೆಂದು ನಿರ್ಣಯಿಸಲಾಗಿರುತ್ತದೆ. ವಿಸ್ತೃತ ಚರ್ಚೆ ನಡೆದು ಭೂಸ್ವಾಧೀನದಿಂದ ಕೈಬಿಡಲಾಗಿದ್ದರೂ, ಪ್ರಾಧಿಕಾರದ ವತಿಯಿಂದ ಅಭಿವೃದ್ಧಿಪಡಿಸಿ ಉಪಯೋಗಿಸಿಕೊಂಡಿದ್ದು, ಪ್ರಾಧಿಕಾರದಿಂದ ತಪ್ಪಾಗಿರುವುದರಿಂದ ಕೆಸರೆ ಗ್ರಾಮದ ಸ.ನಂ.464 ರ 3-16 ಎಕರೆ ಜಮೀನು ಪ್ರಾಧಿಕಾರವು ಉಪಯೋಗಿಸಿ ಅಭಿವೃದ್ಧಿಪಡಿಸಿ ನಿವೇಶನ ಉದ್ಯಾನವನ್ನು ರಸ್ತೆಗಳು ಸಾರ್ವಜನಿಕ ಉಪಯೋಗಕ್ಕೆ ಮೇಲ್ಕಂಡಂತೆ ನೀಡಿರುವುದರಿಂದ ಪ್ರಾಧಿಕಾರದ ಸ್ವಾಧೀನದಲ್ಲಿದ್ದು ಅಭಿವೃದ್ಧಿ ಪಡಿಸದೇ ಇರುವ ಜಮೀನನ್ನು ಅರ್ಜಿದಾರರಿಗೆ ಬದಲಿ ನೀಡುವುದು ಎಂದು ತೀರ್ಮಾನಿಸಲಾಗಿರುತ್ತದೆ.
- ದಿನಾಂಕ:14.7.2021 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರಿಗೆ ಪತ್ರ ಬರೆದು ಪತ್ರದಲ್ಲಿ ಹಿಂದಿನ ಸಭೆಯ ನಿರ್ಣಯಗಳನ್ನು ವಿವರವಾಗಿ ವಿವರಿಸಿ ಪತ್ರವನ್ನು ಬರೆಯಲಾಗಿರುತ್ತದೆ.
- ದಿನಾಂಕ:25.10.2021 ರಂದು ಅರ್ಜಿದಾರರು ಪ್ರಾಧಿಕಾರವು ಉಪಯೋಗಿಸಿಕೊಂಡಿರುವ ಬಾಬು ಪರಿಹಾರವನ್ನು ನೀಡಿರುವುದಿಲ್ಲ. ಆದ್ದರಿಂದ ಶೇ.50:50 ರ ಅನುಪಾತದಲ್ಲಿ ಅಭಿವೃದ್ಧಿ ಪಡಿಸಿದ ಬಡಾವಣೆಯಲ್ಲಿ ವಸತಿ ನಿವೇಶನಗಳನ್ನು ನೀಡಬೇಕೆಂದು ಕೋರಿರುತ್ತಾರೆ. ಸಂಖ್ಯೆ:ಎಲ್‌ಸಿ40/97-98 8:23.11.2021 ರಲ್ಲಿ ಭೂಮಾಲೀಕರಿಗೆ ಮೂಲ ದಾಖಲಾತಿಗಳನ್ನು ಹಾಜರುಪಡಿಸಿ ಪರಿತ್ಯಜನ ಪತ್ರ ಮಾಡಿಕೊಡುವಂತೆ ತಿಳುವಳಿಕೆ ಪತ್ರ ನೀಡಲಾಗಿರುತ್ತದೆ.
- ದಿನಾಂಕ:25.11.2021 ರಂದು ಪ್ರಾಧಿಕಾರದ ಷರತ್ತಿಗೊಳಪಡಿಸಿ ಪರಿತ್ಯಜನ ಪತ್ರದ ಮೂಲಕ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಲಾಗಿರುತ್ತದೆ.
- ಮೇಲ್ಕಂಡ ಜಮೀನನ್ನು ಪ್ರಾಧಿಕಾರವು ಭೂಸ್ವಾಧೀನಪಡಿಸದೇ ಉಪಯೋಗಿಸಿಕೊಂಡುವ ಬಾಬು ಪರಿತ್ಯಾಜನ ಪತ್ರದ ಮೂಲಕ ಪ್ರಾಧಿಕಾರಕ್ಕೆ ನೊಂದವಣಿ ಮಾಡಿಕೊಡುವ ಷರತ್ತಿಗೊಳಪಡಿಸಿ ಸರ್ಕಾರದ ಆದೇಶ ಸಂಖ್ಯೆ : ಯುಡಿಡಿ 08 ಟಿಟಿಪಿ ದಿ.11.02.2015 ರನ್ವಯ ಶೇಕಡ 50: 50 ಅನುಪಾತದಲ್ಲಿ 38,284 ಚ.ಅಡಿ ಅಳತೆಗೆ ಸಮನಾದ ನಿವೇಶನವನ್ನು ಭೂಮಾಲೀಕರಿಗೆ 00:30.12.2021 ರಂದು ಮಂಜೂರು ಮಾಡಲಾಗಿರುತ್ತದೆ.
- ಅದರಂತೆ ವಿಜಯನಗರ 3ನೇ ಹಂತ ಮತ್ತು 4ನೇ ಹಂತ 2ನೇ ಘಟ್ಟ ಬಡಾವಣೆಯಲ್ಲಿ ನಿವೇಶನವನ್ನು ಮಂಜೂರಾಗಿರುತ್ತದೆ.
- ಕೆಸರೆ ಗ್ರಾಮದ ಪ್ರಾಥಮಿಕ ಅಧಿಸೂಚನೆಯನ್ನು ದಿ:18.09.1992 ರಂದು ಹೊರಡಿಸಲಾಗಿದೆ ಹಾಗೂ ಅಂತಿಮ ಅಧಿಸೂಚನೆ ದಿ:11.10.1997 ರಂದು ಹೊರಡಿಸಲಾಗಿರುತ್ತದೆ.

- ವಿಜಯ ನಗರ 3ನೇ ಹಂತದ ಬಡಾವಣೆಗಾಗಿ ಭೂಸ್ವಾಧೀನ ಪಡಿಸಿಕೊಳ್ಳಲು ದಿನಾಂಕ:01.04.1984 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಿ ನಂತರ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಯುಡಿ 82 ಎಂಐಬಿ 82 ದಿನಾಂಕ:29.03.1984 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.
- ವಿಜಯನಗರ 4ನೇ ಹಂತದ 2ನೇ ಘಟ್ಟ ಬಡಾವಣೆಗಾಗಿ ದಿ:23.12.1991 ರಂದು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ ಹಾಗೂ ಸಂಖ್ಯೆ ವ.ನ.ಇ 837 ಎಂಐಬಿ 92 ರಲ್ಲಿ ದಿನಾಂಕ:10.01.1992 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.
- ಪ್ರಸ್ತುತ ದೇವನೂರು 3ನೇ ಹಂತದ ಬಡಾವಣೆಯಲ್ಲಿ ಮಾರುಕಟ್ಟೆ ಬೆಲೆ ಚ.ಅಡಿಗೆ ರೂ.3000/- ರಿಂದ 3500/- ಇದ್ದು, ವಿಜಯ ನಗರ 3ನೇ ಹಂತ ಮತ್ತು 4ನೇ ಹಂತದಲ್ಲಿ ರೂ.6000/- ರಿಂದ 8000/-ಗಳವರೆಗೆ ಇರುತ್ತದೆ.

## ಕೆಲವು ಸಂದೇಹಗಳು

- ಕೆಸರೆ ಗದ್ದೆ ಗ್ರಾಮದ ಸ.ನಂ 464 ರ ಭೂಮಿಯನ್ನು ಕರ್ನಾಟಕ ರಾಜ್ಯ ಸರ್ಕಾರ 1991 ರಲ್ಲೇ MUDA ಭೂಸ್ವಾಧೀನ ಪಡಿಸಿಕೊಂಡಿರುತ್ತದೆ. 1997 ರಲ್ಲಿ ಭೂಸ್ವಾಧೀನ ಪಡಿಸಿಕೊಂಡಿರುವ ಈ ಜಮೀನನ್ನು ಸಿದ್ದರಾಮಯ್ಯನವರ ಬಾವ್ಮೈದ ಮಲ್ಲಿಕಾರ್ಜುನಸ್ವಾಮಿಯವರು ಖರೀದಿ ಮಾಡುತ್ತಾರೆ.
- ಈ ಜಮೀನನ್ನು ಮಲ್ಲಿಕಾರ್ಜುನಸ್ವಾಮಿಯವರು ತಮ್ಮ ಸಹೋದರಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಮ್ಮನಿಗೆ ಅರಿಶಿಣ ಕುಂಕುಮದಲ್ಲಿ ನೀಡುತ್ತಾರೆ. ನೋಟೀಫಿಕೇಷನ್ 6:1 ಆಗಿರುವ ಭೂಮಿಯನ್ನು ಖರೀದಿ ಮಾಡುವುದು ಮತ್ತು ವರ್ಗಾಯಿಸುವುದು ಎರಡೂ ಸಂಗತಿಗಳು ಕಾನೂನುಬಾಹಿರವಲ್ಲವೇ?, ಅದರಲ್ಲೂ ನ್ಯಾಯಾಲಯಕ್ಕೆ MUDA ದವರು ಈಗಾಗಲೇ ಪರಿಹಾರ ಧನವನ್ನು ಸಂದಾಯ ಮಾಡಿದ ನಂತರ ಅದೇ ಜಮೀನಿನ ಖರೀದಿ ಮತ್ತು ವರ್ಗಾವಣೆ ಕಾನೂನು ಬಾಹಿರವಲ್ಲವೇ?
- 1998 ರಲ್ಲಿ ಕೆಸರೆ ಗ್ರಾಮದ ಸ ನಂ 464ನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಡಲಾಗಿದೆ ಎಂದು ಹೇಳುತ್ತಾರೆ. MUDA ದಾಖಲೆಗಳ ಪ್ರಕಾರ ಸ.ನಂ. 464ನ್ನು ಭೂ ಸ್ವಾಧೀನ ಪ್ರಕ್ರಿಯೆಯಿಂದ ಕೈ ಬಿಟ್ಟಿರುವುದಿಲ್ಲ ಎನ್ನುವ ಬಗ್ಗೆ ಅನುಮಾನಗಳಿರುವುದು ನಿಜವೇ ?
- ಕೆಸರೆ ಸ.ನಂ. 464ರಲ್ಲಿ 3 ಎಕರೆ 16ಗುಂಟೆ ಜಮೀನಿನ ಭೂಸ್ವಾಧೀನ ನಡೆದಿದ್ದು 1991ರಲ್ಲಿ. ಬಡಾವಣೆ ಅಭಿವೃದ್ಧಿ ಮಾಡಿರುವುದು 2006-07ರಲ್ಲಿ. SC ತೀರ್ಪಿನ ಮೂಲಕ 2009 ನಂತರ ಭೂಸ್ವಾಧೀನ ಪಡಿಸಿಕೊಂಡಂತಹ ಬಡಾವಣೆಗಳಿಗೆ ಮಾತ್ರ 50:50 ಅನುಪಾತದ ಅಡಿಯಲ್ಲಿ, ಭೂ ಮಾಲೀಕರಿಗೆ ಪರಿಹಾರ ರೂಪದಲ್ಲಿ ನಿವೇಶನ ನೀಡಲು ಅವಕಾಶವಿರುತ್ತದೆ. ಆದರೂ 1991ರಲ್ಲಿ ಸ್ವಾಧೀನಗೊಂಡ ಕೆಸರೆ ಗ್ರಾಮದ ಸ ನಂ 464 ಇದೇ ಅನುಪಾತದಡಿ ನಿವೇಶನ ಪಡೆಯಲು ಸೇರಿದ್ದಾದರೂ ಹೇಗೆ?
- ತಾವು ಕಳೆದುಕೊಂಡಿರುವ ಭೂಮಿಗೆ ಪರಿಹಾರ ಕೊಡಬೇಕೆಂದು 2019ರಲ್ಲಿ ಪಾರ್ವತಿಯವರು ಮೂಡಾಗೆ ಅರ್ಜಿ ಸಲ್ಲಿಸುತ್ತಾರೆ. ಆಗ ವಿರೋಧಪಕ್ಷದ ನಾಯಕರಾಗಿದ್ದವರು ಶ್ರೀ ಸಿದ್ದರಾಮಯ್ಯನವರು ಮತ್ತು ಅಂದು ಮೂಡಾದ ಸಹ ಸದಸ್ಯರಾಗಿದ್ದದವರು ವರುಣಾ ಕ್ಷೇತ್ರದ ಶಾಸಕರಾಗಿದ್ದ ಸಿದ್ದರಾಮಯ್ಯನವರ ಪುತ್ರ ಯತೀಂದ್ರ ಸಿದ್ದರಾಮಯ್ಯನವರು. ಇನ್ನು ಶೇಕಡಾ 50:50 ಅನುಪಾತದಡಿ ಕಾನೂನುಗಳನ್ನು ಮೀರಿ ನಿವೇಶನ ಹಂಚಿಕೆ ಮಾಡುವಲ್ಲಿ ಇವರೆಲ್ಲರ ಪ್ರಭಾವ ಬಳಕೆಯಾಗಿದೆ ಎಂಬ ಆರೋಪದಲ್ಲಿ ಹುರುಳಿದೆಯಲ್ಲವೇ ?
- ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ವಿರುದ್ದ, 2017 ರಲ್ಲೇ MUDA ಅಧಿಕಾರಿಗಳು ಅಂದಿನ ಮುಖ್ಯಮಂತ್ರಿ ಅವರ ನಿರ್ದೇಶನದ ಮೂಲಕ, ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳಿಸಿ ಕೊಡುತ್ತಾರೆ, ಸರ್ಕಾರ ತನ್ನ ಒಪ್ಪಿಗೆಯನ್ನು ಸೂಚಿಸಿ 2017 ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸುತ್ತಾರೆ. ಕೇವಲ ಬೆಂಗಳೂರಿನ ಅರ್ಕಾವತಿ ಬಡಾವಣೆಗೆ ಮಾತ್ರ ಈ ವಿಶೇಷವಾದಂತಹ ಶೇಕಡಾ 50:50 ಸೌಲಭ್ಯ ಮೂಡಾಗೂ ಅನ್ವಯವಾಗಲು ಸಿದ್ದರಾಮಯ್ಯನವರ ನೇರ ಹಸ್ತಕ್ಷೇಪವೇ ಕಾರಣ ಎನ್ನುವುದನ್ನು ಒಪ್ಪದಿರಲು ಸಾಧ್ಯವೇ?



ಸಾವಿರಾರು ಕೋಟಿ ಬೆಲೆಯ ನಿವೇಶನಗಳ ಕಬಳಿಕೆಯ ಬ್ರಹ್ಮಾಂಡ ಭ್ರಷ್ಟಾಚಾರ ನಿವೇಶನಕ್ಕಾಗಿ ಅರ್ಜಿಹಾಕಿದ ಮೈಸೂರಿನ ಲಕ್ಷಕ್ಕೂ ಹೆಚ್ಚಿನ ಸೂರು ರಹಿತರನ್ನು ಕಂಗೆಡಿಸಿದೆ. ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು.

**– ಬಿ.ವೈ. ವಿಜಯೇಂದ್ರ,** ರಾಜ್ಯಾಧ್ಯಕ್ಷರು



ಮೂಡಾ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಿದರಷ್ಟೆ ಎಲ್ಲಾ ಸತ್ಯ ಹೊರಬರಲಿದೆ. ಹಾಗಾಗಿ ಸರ್ಕಾರ ಇಡೀ ಪ್ರಕರಣವನ್ನು ಸಿಬಿಐಗೆ ವಹಿಸಬೇಕು.

**– ಆರ್. ಅಶೋಕ,** ವಿರೋಧ ಪಕ್ಷದ ನಾಯಕರು



ಸ್ವಂತಕ್ಕೆ ಲಾಭದ ದೊಡ್ಡ ಪ್ರಮಾಣದ ಭ್ರಷ್ಟಾಚಾರ ಇದು. ನಾನೊಬ್ಬ ಸಮಾಜವಾದಿ, ಲೋಹಿಯಾವಾದಿ ಎನ್ನುವ ಅರ್ಹತೆ ಸಿಎಂ ಸಿದ್ದರಾಮಯ್ಯನವರಿಗೆ ಇಲ್ಲ. ಮೂಡಾ ಮತ್ತು ವಾಲ್ಮೀಕಿ ನಿಗಮದ ಹಗರಣಗಳಲ್ಲಿ ಸಿದ್ದರಾಮಯ್ಯ ನೇರವಾಗಿ ಭಾಗಿಯಾಗಿದ್ದಾರೆ.

**– ಪ್ರಹ್ಲಾದ್ ಜೋಶಿ,** ಕೇಂದ್ರ ಸಚಿವರು

## ಹಗರಣದ ರೂವಾರಿ ಸಿದ್ದರಾಮಯ್ಯನವರೇ ಎನ್ನಲು ಸಾಕ್ಷಿಗಳಿವು

**ಬೆಲೆ ಬಾಳುವ ಜಾಗದಲ್ಲಿಯೇ ನಿವೇಶನ :** ದೇವನೂರು ಬಡಾವಣೆಯ ನಿರ್ಮಾಣಕ್ಕೆ ಕೆಸರೆ ಗ್ರಾಮದ ಸ ನಂ 464ರಲ್ಲಿ 3 ಎಕರೆ 16 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಇದಕ್ಕೆ ಪರಿಹಾರವಾಗಿ ಶೇ 50:50 ರಲ್ಲಿ ಅದೇ ಜಾಗದಲ್ಲಿ ಬದಲಿ ನಿವೇಶನವನ್ನು ಕೊಡಬೇಕಿತ್ತು ಎಂದಾದರೂ, ಮೂಡಾ ಪಾರ್ವತಿಯವರಿಗೆ ಮಂಜೂರು ಮಾಡಿರುವುದು ವಿಜಯನಗರ ಬಡಾವಣೆಯ ಮೂರು ಮತ್ತು ನಾಲ್ಕನೇ ಹಂತದಲ್ಲಿ, ದೇವನೂರು ಬಡಾವಣೆಯಲ್ಲಿನ ಮಾರುಕಟ್ಟೆ ಬೆಲೆಗಿಂತ ವಿಜಯನಗರ ಬಡಾವಣೆಯಲ್ಲಿ ಚದರ ಅಡಿಗೆ 5,000 ರೂಗಳಷ್ಟು ಜಾಸ್ತಿಯಿರುವುದೂ ಹಾಗೂ ಇದನ್ನು ಸಿದ್ದರಾಮಯ್ಯನವರು ಮರೆ ಮಾಚುತ್ತಿರುವುದು ಅವರ ಸಮಾಜವಾದಿ ನೀತಿಗೆ ವಿರುದ್ಧವಾದ ನಿಲುವು.

**ಸುಳ್ಳು ಅಫಿಡವಿಟ್ :** ಸಿದ್ದರಾಮಯ್ಯನವರು 2018ರಲ್ಲಿ ಚಾಮುಂಡೇಶ್ವರಿ ಮತ್ತು ಬಾದಾಮಿ ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣಾ ಅಭ್ಯರ್ಥಿಯಾಗಿ ಸ್ಪರ್ಧಿಸುವ ಸಂದರ್ಭದಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಅಫಡವಿಟ್‌ನಲ್ಲಿ ಪತ್ನಿ ಹೆಸರಿನ ಈ ಜಾಗವನ್ನು ಉಲ್ಲೇಖಿಸಿ ಅದರ ಮೌಲ್ಯವನ್ನು 25 ಲಕ್ಷ ಎಂದಿದ್ದಾರೆ. ಆದರೆ ಈಗ ಮೂಡಾ ಹಗರಣ ಹೊರಬುರುತ್ತಿದ್ದಂತೆ ಈ ಜಮೀನಿನ ಮೌಲ್ಯ 62 ಕೋಟಿ ಬೆಲೆ ಬಾಳುತ್ತದೆ. ಇಷ್ಟನ್ನು ಪರಿಹಾರವಾಗಿ ಕೊಡಲಿ ಎಂದು ಹೇಳುತ್ತಾರೆ. ಹಾಗಾದರೆ ಅವರೇ ಉಲ್ಲಖಿಸಿರುವಂತೆ ಜಮೀನಿನ ಬೆಲೆ 62 ಕೋಟಿ ಇದ್ದರೂ ಅಫಿಡವಿಟ್‌ನಲ್ಲಿ ಮೌಲ್ಯವನ್ನು ಕೇವಲ 25 ಲಕ್ಷ ರೂ ಸುಳ್ಳು ಅಫಿಡವಿಟ್ ಸಲ್ಲಿಸಿರುವುದನ್ನು ಅವರೇ ಒಪ್ಪಿಕೊಂಡಿದ್ದಾರೆ.

**ಹಗರಣ ಮುಚ್ಚಿಹಾಕುವ ಹುನ್ನಾರ:** ಮೂಡಾದಲ್ಲಿನ ಭ್ರಷ್ಟಾಚಾರಗಳು ಎಳೆಎಳೆಯಾಗಿ ಹೊರಬರುತ್ತಲೇ ಮೂಡಾದಲ್ಲಿ ನಡೆಯುತ್ತಿದ್ದ ನಿಯಮಬಾಹಿರ ಅಕ್ರಮಗಳ ಬಗ್ಗೆ, ಆದೇಶದ ಉಲ್ಲಂಘನೆಗಳ ಬಗ್ಗೆ 8 ತಿಂಗಳ ಹಿಂದೆಯೇ ತಾಂತ್ರಿಕ ಸಮಿತಿ ವರದಿ ಸಲ್ಲಿಸಿತ್ತೆಂಬುದು ಬೆಳಕಿಗೆ ಬಂದಿದೆ. ಮೂಡಾ ರಚಿಸಿರುವ ಬಡಾವಣೆಗಳಲ್ಲಿ ಸಾರ್ವಜನಿಕ ಉದ್ಯಾನವನ, ನಾಗರೀಕ ಸೌಲಭ್ಯಗಳನ್ನು ಕಾಯ್ದರಿಸದಿರುವ ಬಗ್ಗೆ ಹಾಗೂ ಇನ್ನಿತರ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ತಾಂತ್ರಿಕ ಸಮಿತಿ ಸರಕಾರಕ್ಕೆ 2023ರ ನವಂಬರ್‌ನಲ್ಲಿಯೇ ವರದಿಯನ್ನು ಸಲ್ಲಿಸಿತ್ತು. ಆದರೆ ಈ ಸಮಿತಿಯ ವರದಿಯ ಬಗ್ಗೆ ಚಕಾರವೆತ್ತದ ಮುಖ್ಯಮಂತ್ರಿ ಸಿದ್ದರಾಮಯ್ಯ ಈಗ ತನಿಖೆಗೆ ಮತ್ತೊಂದು ಸಮಿತಿಯನ್ನು ರಚಿಸಿರುವುದು ಮೂಡಾ ಹಗರಣಗಳನ್ನು ಮುಚ್ಚಿಹಾಕುವ ಹುನ್ನಾರವೆಂದೇ ಹೇಳಬಹುದಾಗಿದೆ.

**ಮುಚ್ಚಿ ಹಾಕಲು ಮತ್ತೊಂದು ಹೆಜ್ಜೆ :** ಮೂಡಾದ ಹಗರಣ ಬೆಳಕಿಗೆ ಬರುತ್ತಲೇ ಜಿಲ್ಲಾಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಮೂಡಾಗೆ ಅಧ್ಯಕ್ಷರ ನೇಮಕವಾಗುವ ಮುನ್ನ ಜಿಲ್ಲಾಧಿಕಾರಿಗಳೇ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ಮೂಡಾದಲ್ಲಿ ನಡೆದ ಹಗರಣಗಳ ಬಗ್ಗೆ ಸರಕಾರಕ್ಕೆ ಪತ್ರ ಬರೆದಿದ್ದರು. ಆಯುಕ್ತ ಜಿ.ಟಿ.ದಿನೇಶ್‌ಕುಮಾರ್‌ರವರಿಗೆ ಕಾರಣ ಕೇಳಿ ನೋಟೀಸ್ ಸಹ ನೀಡಿದ್ದರು. ಬದಲಿ ನಿವೇಶನಗಳ ಹಂಚಿಕೆಯಲ್ಲಿ ಆಗಿರುವ ಲೋಪಗಳನ್ನು ಗುರುತಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು. ಹಗರಣಗಳ ತನಿಖೆ ನಡೆಯುತ್ತಿರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ವರ್ಗಾವಣೆ ಮಾಡಿರುವುದು ಹಗರಣವನ್ನು ಮುಚ್ಚಿ ಹಾಕಲು ಸಿದ್ದರಾಮಯ್ಯ ಸರಕಾರ ಇಟ್ಟಿರುವ ಮತ್ತೊಂದು ಹೆಜ್ಜೆಯಾಗಿದೆ.

**ಮುಡಾ ನಮಗೆ 3.16 ಎಕರೆಗೆ ಪರಿಹಾರ ರೂಪದಲ್ಲಿ 62 ಕೋಟಿ**



**ರೂ. ನೀಡಲಿ. ನಮಗೆ ಪರಿಹಾರ ರೂಪದಲ್ಲಿ ದೊರೆತಿರುವ 14 ನಿವೇಶನಗಳ ಬೆಲೆ ಇದಕ್ಕಿಂತ ಕಡಿಮೆ ಇದೆ. ಒಂದು ಎಕರೆಗೆ 44 ಸಾವಿರ ಚದರ ಅಡಿಯಾದರೆ ನಮಗೆ ದೊರೆತಿರುವುದು 37,190.09 ಚದರ ಅಡಿ ಮಾತ್ರ. ನಾವು ಇಂಥದ್ದೇ ಜಾಗದಲ್ಲಿ ನಿವೇಶನ ಬೇಕೆಂದು ಮುಡಾಗೆ ಕೇಳಿಕೊಂಡಿರಲಿಲ್ಲ.**

**| ಸಿದ್ದರಾಮಯ್ಯ**, ಮುಖ್ಯಮಂತ್ರಿ



ನಿವೇಶನ ಹಂಚಿಕೆ ಹಗರಣ ಈಗ ದಿಢೀರನೆ ಪ್ರಚಾರ ಪಡೆದಿರುವುದೇಕೆ. ಇದರ ಹಿಂದೆ ಸಿಎಂ ಖುರ್ಚಿಗೆ ಟವಲ್ ಹಾಕಿದವರ ಪಾತ್ರ ಇದೆಯಾ. ಸಿ.ಎಂ ಪತ್ನಿಗೆ 14 ನಿವೇಶನಗಳ ಹಂಚಿಕೆ ಬಗ್ಗೆ ಅವರ ಶಾಸಕ ಪೊನ್ನಣ್ಣ ಸಮರ್ಥಿಸಿಕೊಂಡಿದ್ದಾರೆ.

**– ಹೆಚ್.ಡಿ. ಕುಮಾರಸ್ವಾಮಿ,** ಕೇಂದ್ರ ಸಚಿವರು



ದೇವನೂರು ಬಡಾವಣೆ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರಿಗೆ ಸೇರಿದ 3 ಎಕರೆ 16 ಗುಂಟೆ ಜಾಗಕ್ಕೆ ಪರಿಹಾರವಾಗಿ 62 ಕೋಟಿ ರೂ ಪರಿಹಾರ ಕೊಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳುತ್ತಾರೆ. ಇವರ ಭೂಮಿಯ ಪಕ್ಕದಲ್ಲೇ 7 ಎಕರೆ ಭೂಮಿ ಕಳೆದುಕೊಂಡವರಿದ್ದಾರೆ ಇವರಿಗೆ 150 ಕೋಟಿ ರೂ ಪರಿಹಾರ ಕೊಡಲು ಸಾಧ್ಯವೇ? ದೇವನೂರು ಬಡಾವಣೆಯಲ್ಲಿ ಪಾರ್ವತಿಯವರ ಜಮೀನು ಎಕರೆಗೆ 20 ಕೋಟಿ ಬೆಲೆ ಬಾಳುತ್ತದೆಯೇ ?

**– ಶ್ರೀವತ್ಸ,** ಶಾಸಕರು




# ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋ.ರೂ.ಹಣ ಲೂಟಿ

## ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ ಪ್ರತಿಭಟನೆ

### ಜಿಲ್ಲಾಧಿಕಾರಿ ಕಚೇರಿಗಳಿಗೆ ಮುತ್ತಿಗೆ




ಶ್ರೀಮತಿ ಅಶ್ವಿನಿ ಶಂಕರ್
ರಾಜ್ಯ ಉಪಾಧ್ಯಕ್ಷರು
ಬಿಜೆಪಿ – ಒಬಿಸಿ ಮೋರ್ಚಾ


ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟ ಮುಂದುವರೆಯಲಿದ್ದು, ಅಧಿಕಾರಿ ಮೇಲೆ ಆರೋಪ ಹಾಕಿ ತೇಪೆ ಹಾಕಲು ಮುಖ್ಯಮಂತ್ರಿ ಅವರು ಹೊರಟಿದ್ದು, ನಾಗೇಂದ್ರ ರಾಜೀನಾಮೆ ನೀಡಿದ ಮಾತ್ರಕ್ಕೆ ಪ್ರಕರಣ ಮುಗಿದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಶ್ರೀ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬೆಲೆ ಏರಿಕೆಯಿಂದ ಜನರ ಸಂಕಷ್ಟ ಹೆಚ್ಚಿದ್ದು, ಪೆಟ್ರೋಲ್, ಡೀಸೆಲ್, ಹಾಲಿನ ಬೆಲೆ ಸೇರಿದಂತೆ ಎಲ್ಲಾ ಬೆಲೆಗಳು ಹೆಚ್ಚಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ನಾಗೇಂದ್ರ ಆಪ್ತರ ಬೆದರಿಕೆ ಬಗ್ಗೆ ಆರೋಪಿ ಸತ್ಯನಾರಾಯಣ ವರ್ಮಾ ಕೋರ್ಟ್‌ನಲ್ಲಿ ಹೇಳಿಕೆ ಕೊಟ್ಟ ವಿಚಾರದ ಬಗ್ಗೆ ಉತ್ತರಿಸಿದ ಅವರು, ಸತ್ಯನಾರಾಯಣ ವರ್ಮಾ ಅವರು ಬಹಳ ಗಂಭೀರವಾದ ಆರೋಪ ಮಾಡಿದ್ದಾರೆ. ಆದರೆ ಇವತ್ತಿನವರೆಗೂ ನಾಗೇಂದ್ರರನ್ನು ಕರೆದು ಎಸ್‌ಐಟಿ ವಿಚಾರಣೆ ಮಾಡುವ ಧೈರ್ಯ ತೋರಿಸಿಲ್ಲ. ಹೋರಾಟದ ದಿನಗಳು ಮುಂದಿವೆ, ಹಾಲಿನ ದರ ಏರಿಕೆ ಬಗ್ಗೆ ರೈತ ಮೋರ್ಚಾ ಹೋರಾಟ ಒಳಗೊಂಡಂತೆ ಸರ್ಕಾರಕ್ಕೆ ಬಿಸಿ ಮುಟ್ಟಿಸುವ ಕೆಲಸ ಮಾಡುತ್ತಿದ್ದೇವೆ. ಪ್ರಸಕ್ತ ಸರ್ಕಾರ ಒಂದೇ ವರ್ಷದಲ್ಲಿ ಜನರ ವಿಶ್ವಾಸ ಕಳೆದುಕೊಂಡಿದೆ ಎಂದರು.

## ಸಿಬಿಐಗೆ ವಹಿಸಿ

ವಾಲ್ಮೀಕಿ ನಿಗಮದ ಹಗರಣದ ತನಿಖೆಯನ್ನು ಸಿಬಿಐಗೆ ವಹಿಸಿ ಈ ಸಂಬಂಧ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿಗಳು ರಾಜೀನಾಮೆ ನೀಡುವಂತೆ ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿ ಆಗ್ರಹಿಸಿದರು. ರಾಜ್ಯ ಕಾರ್ಯಾಲಯದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಇಲಾಖೆ ವ್ಯಾಪ್ತಿಯಲ್ಲಿ ನಡೆದ ಬಹುದೊಡ್ಡ ಹಗರಣ ಇದಾಗಿದ್ದು, 100ಕ್ಕೆ ನೂರರಷ್ಟು ಹಣ ವರ್ಗಾಯಿಸಿ ಲೂಟಿ ಮಾಡಲಾಗಿದೆ. ಹಗರಣದಲ್ಲಿ ಮುಖ್ಯಮಂತ್ರಿರವರ ನೈತಿಕತೆ ಪ್ರಶ್ನೆ ಉದ್ಭವಿಸಿದ್ದು, ಜವಾಬ್ದಾರಿ ಹೊತ್ತು ರಾಜೀನಾಮೆಗೆ ಪ್ರಸ್ತಾಪಿಸಿದರೆ ವಿಷಯಾಂತರ ಮಾಡುತ್ತಾರೆ ಹೀಗಾಗಿ ಪ್ರತಿಭಟನೆ ನಡೆಸಿ ಮುಖ್ಯಮಂತ್ರಿ ರಾಜೀನಾಮೆಗೆ ಆಗ್ರಹಿಸಿದ್ದೇವೆ ಎಂದು ಹೇಳಿದರು.

ಸರಕಾರದ ತನಿಖೆಯ ಬಗ್ಗೆ ಸಂಶಯವಿದ್ದು, ಬಹುರಾಜ್ಯಗಳಿಗೆ ಸಂಬಂಧಿಸಿದ ಹಗರಣ ಇದಾಗಿದ್ದು, ಆಪಾದಿತರು ಆಂಧ್ರ, ತೆಲಂಗಾಣಕ್ಕೂ ಸೇರಿದ್ದಾರೆ. ಯೂನಿಯನ್ ಬ್ಯಾಂಕ್ ಆಫ್ ಇಂಡಿಯವು ಸಿಬಿಐ ತನಿಖೆ ಕೋರಿ ಪತ್ರ ಬರೆದಿದೆ. ಆದರೂ, ಕರ್ನಾಟಕ ಸರಕಾರ ಯಾಕೆ ಸಿಬಿಐ ತನಿಖೆಗೆ ಇದನ್ನು ಅಧಿಕೃತವಾಗಿ ವಹಿಸಿಲ್ಲ ಎಂದು ಪ್ರಶ್ನಿಸಿದರು. ನಾಗೇಂದ್ರರ ಸಂಬಂಧಿ, ಸಿರಗುಪ್ಪದ ಅಭ್ಯರ್ಥಿಯಾಗಿದ್ದ ಮುರಳಿರವರ ಪಾತ್ರವೇನು?, ನಿಗಮಗಳ ಕಾಮಗಾರಿಯಲ್ಲೂ ನೆಕ್ಕುಂಟಿ ನಾಗರಾಜ್ ಪಾತ್ರವಿದೆ. ನೆಕ್ಕುಂಟಿ ನಾಗರಾಜ್‌ಗೆ ಯಾವ ಅರ್ಹತೆ ಇಲ್ಲದಿದ್ದರೂ ಹಾಸ್ಟೆಲ್ ಆಹಾರ ಸರಬರಾಜಿಗೆ ಗುತ್ತಿಗೆ ಪಡೆದಿದ್ದಾರೆ ಎಂದು ಆರೋಪಿಸಿದರು.

ನಾಗೇಂದ್ರ ಅವರನ್ನು ರಕ್ಷಿಸಲು ಸರ್ಕಾರ ಪ್ರಯತ್ನಿಸುತ್ತಿದ್ದು, ನಾಗೇಂದ್ರ ಅವರನ್ನು ಮುಟ್ಟಿದರೆ ಅವರು ಯಾರಿಗೆ ಹಣ ಕೊಟ್ಟಿದ್ದಾಗಿ ಬಾಯಿ ಬಿಡುವ ಭಯದಿಂದ ಅವರ ರಕ್ಷಣೆಗೆ ಸರ್ಕಾರ ಹೊರಟಿದೆ. ಈಗಾಗಲೇ 11 ಜನರ ಬಂಧನವಾಗಿದ್ದು, ಕೇವಲ 14.07 ಕೋ.ರೂ. ಮಾತ್ರ ವಶಪಡಿಸಿಕೊಳ್ಳಲಾಗಿದೆ. ಬಾಕಿ ಹಣ ಎಲ್ಲಿ ಹೋಗಿದೆ? ಇತರ ಯಾರ ಖಾತೆಗೆ ಹಣ ಹೋಗಿದೆ? ಅವರ ಮೇಲೆ ಯಾಕೆ ಕ್ರಮ ಕೈಗೊಂಡಿಲ್ಲ? ಉಳಿಕೆ ಹಣ ಯಾಕೆ ಜಪ್ತಿ ಮಾಡಿಲ್ಲ ಎಂದು ಪ್ರಶ್ನಿಸಿದರು.

**ಶಿವಮೊಗ್ಗ :** ಶಿವಮೊಗ್ಗ ಜಿಲ್ಲಾ ಬಿಜೆಪಿ ಎಸ್.ಟಿ ಮೋರ್ಚಾ ವತಿಯಿಂದ ಮೋರ್ಚಾದ ಜಿಲ್ಲಾ ಅಧ್ಯಕ್ಷರಾದ ಶ್ರೀ ಹರೀಶ್ ನಾಯಕ್ ಅವರ ನೇತೃತ್ವದಲ್ಲಿ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ಹಣವನ್ನು ಲೂಟಿ ಹೊಡೆದ ಭ್ರಷ್ಟ ರಾಜ್ಯ ಕಾಂಗ್ರೇಸ್ ಸರಕಾರದ ವಿರುದ್ಧ ಶಿವಮೊಗ್ಗ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ ಕಚೇರಿಗೆ ಮುತ್ತಿಗೆ ಹಾಕಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಜಿಲ್ಲಾ ಅಧ್ಯಕ್ಷರಾದ ಶ್ರೀ ಟಿ.ಡಿ. ಮೇಘರಾಜ್, ಜಿಲ್ಲಾ ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರ, ಶಿವಮೊಗ್ಗ ನಗರದ ಶಾಸಕರಾದ ಶ್ರೀ ಎಸ್.ಎನ್. ಚನ್ನಬಸಪ್ಪನವರು, ವಾಲ್ಮೀಕಿ ಸಮಾಜದ ಪ್ರಮುಖರಾದ ಶ್ರೀ ಬಳಿಗಾರ್ ರವರು ಮಾತನಾಡಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಶಾಸಕರಾದ



ಡಾ. ಧನಂಜಯ್ ಸರ್ಜಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವರಾಜ್, ಶ್ರೀ ಸಿ.ಹೆಚ್. ಮಾಲತೇಶ್, ಎಸ್.ಸಿ. ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ರಾಮು ಕೋಹಳ್ಳಿ, ಪ್ರಮುಖರಾದ ಶ್ರೀ ಜಯರಾಮ್, ಶ್ರೀ ಮೋಹನ್ ರೆಡ್ಡಿ, ಶ್ರೀಮತಿ ಗಾಯತ್ರಿ ಮಲ್ಲಪ್ಪ, ಹಾಗೂ ಎಸ್.ಟಿ ಮೋರ್ಚಾ ಹಾಗೂ ಎಸ್.ಸಿ. ಮೋರ್ಚಾದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ದಕ್ಷಿಣ ಕನ್ನಡ :** ಮಂಗಳೂರಿನ ಹಂಪನಕಟ್ಟೆಯಲ್ಲಿರುವ ಮಿನಿ ವಿಧಾನಸೌಧದ ಎದುರು ವಾಲ್ಮೀಕಿ ನಿಗಮದಲ್ಲಿ ಸರಕಾರಿ ಹಣದ ವರ್ಗಾವಣೆ, ಪರಿಶಿಷ್ಟ ಪಂಗಡದ ಅನುದಾನದ 187 ಕೋಟಿ ರೂ. ಸಂಶಯಾತ್ಮಕ ಖಾತೆಗಳಿಗೆ ವರ್ಗಾವಣೆ ಮಾಡಿರುವ ಬಗ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೈತಿಕ ಹೊಣೆ ಹೊತ್ತು ರಾಜೀನಾಮೆಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಲಾಯಿತು.



ಈ ಪ್ರತಿಭಟನೆಯಲ್ಲಿ ಬಿಜೆಪಿಯ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷರಾದ ಶ್ರೀ ಸತೀಶ್ ಕುಂಪಲ, ಶಾಸಕರಾದ ಶ್ರೀ ಡಿ. ವೇದವ್ಯಾಸ ಕಾಮತ್, ಕು. ಭಾಗೀರಥಿ ಮುರುಳ್ಯ, ವಿಧಾನಪರಿಷತ್ ಸದಸ್ಯರಾದ ಶ್ರೀ ಪ್ರತಾಪಸಿಂಹ ನಾಯಕ್. ಮಾಜಿ ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್ ರವರು ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಪ್ರೇಮಾನಂದ ಶೆಟ್ಟಿ, ಶ್ರೀಯತೀಶ್ ಆರ್ವಾರ್, ಜಿಲ್ಲಾ ಪದಾಧಿಕಾರಿಗಳು, ಉಪ ಮೇಯರ್ ಶ್ರೀಮತಿ ಸುನೀತಾ, ಎಲ್ಲಾ ಮಂಡಲಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು, ವಿವಿಧ ಮೋರ್ಚಾಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಪದಾಧಿಕಾರಿಗಳು, ವಿವಿಧ ಪ್ರಕೋಷ್ಠಗಳ ಸಂಚಾಲಕರು, ಸಹ ಸಂಚಾಲಕರು, ಸದಸ್ಯರು, ಮಹಾನಗರ ಪಾಲಿಕೆ

ಸದಸ್ಯರು, ಹಿರಿಯ ಕಾರ್ಯಕರ್ತರು, ಪ್ರಮುಖರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಹಾವೇರಿ :** ಭಾರತೀಯ ಜನತಾ ಪಾರ್ಟಿ ಹಾವೇರಿ ಜಿಲ್ಲಾ ಘಟಕದ ವತಿಯಿಂದ ಜಿಲ್ಲಾಡಳಿತ ಕಛೇರಿಯ ಮುಂದೆ ಪ್ರತಿಭಟನೆ ನಡೆಸಿ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಲಾಯಿತು. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಶ್ರೀ ಶಿವರಾಜ ಸಜ್ಜನರ ಮಾತನಾಡಿ ಕಾಂಗ್ರೇಸ್ ಸರ್ಕಾರ ಅಧಿಕಾರಕ್ಕೆ ಬಂದ ಒಂದು ವರ್ಷದ ಅವಧಿಯಲ್ಲಿ ಪರಮ ಭ್ರಷ್ಟತೆಯಿಂದ ಕೆಲಸ ಮಾಡುತ್ತಿದೆ. ಇತ್ತಿಚಿಗೆ ಮಹರ್ಷಿ ವಾಲ್ಮಿಕಿ ನಿಗಮದ 187 ಕೋ.ರೂ. ಹಣವನ್ನು ಅಕ್ರಮವಾಗಿ ಬೇರೆ ಬೇರೆ ವ್ಯಕ್ತಿಗಳಿಗೆ ಹಾಗೂ ಹೊರ ರಾಜ್ಯದ ಖಾತೆಗಳಿಗೆ ವರ್ಗಾವಣೆ ಮಾಡಿ ನಿಗಮದ ಹಣವನ್ನು ಲೂಟಿ ಮಾಡಿದೆ ನಿಗಮದ ಅಧ್ಯಕ್ಷರಾದ ಚಂದ್ರಶೇಖರ್ ರವರು ಡೇತ್ ನೋಟ್‌ನಲ್ಲಿ ಸಚಿವರ ಮೌಕಿಕ ಆದೇಶದ ಮೇರಿಗೆ ವ್ಯವಹಾರ ನಡೆದಿದೆ ಎಂದು ಬರೆದು ಆತ್ಮಹತ್ಯ ಮಾಡಿಕೊಂಡಿದ್ದಾರೆ. ಆದರೆ ರಾಜ್ಯ ಸರ್ಕಾರ ನಾಮಕವಾಸ್ತೆಯಾಗಿ ಸಚಿವ ನಾಗೇಂದ್ರ ರವರಿಂದ ರಾಜೀನಾಮೆ ಪಡೆದು ಸಮಗ್ರ ತನಿಖೆ ಮಾಡದೆ ಈ ಹಗರಣದಲ್ಲಿ ಭಾಗಿಯಾದ ಇನ್ನುಳಿದ ವ್ಯಕ್ತಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳದೆ ಪ್ರಕರಣಗಳನ್ನು ಮುಚ್ಚಿಹಾಕ್ಕುತ್ತಿದೆ ಎಂದು ಆರೋಪಿಸಿದರು.



ರಾಜ್ಯ ಉಪಾಧ್ಯಕ್ಷರಾದ ಡಾ. ಬಸವರಾಜ ಕೇಲಗಾರ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯರು ಹಾಗೂ ರಾಜ್ಯ ಎಸ್.ಟಿ. ಮೋರ್ಚಾ ಸದಸ್ಯರಾದ ಶ್ರೀ ಎನ್.ಎಂ. ಇಟೇರ, ನಿಕಟಪೂರ್ವ ಜಿಲ್ಲಾಧ್ಯಕ್ಷರಾದ ಶ್ರೀ ಸಿದ್ದರಾಜ ಕಲಕೋಟಿ, ಹಾವೇರಿ ವಿಧಾನಸಭಾ ಕ್ಷೇತ್ರದ ಮುಖಂಡರಾದ ಶ್ರೀ ಗವಿಸಿದ್ದಪ್ಪ ದ್ಯಾಮಣ್ಣನವರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ. ಸಂತೋಷ ಆಲದಕಟ್ಟಿ ರವರು ಈ ಸಂದರ್ಭದಲ್ಲಿ ಮಾತನಾಡಿದರು. ನಂತರ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಲಾಯಿತು. ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಂಜುಂಡೇಶ ಕಳ್ಳೇರ, ಶ್ರೀ ಮಂಜುನಾಥ ಗಾಣಿಗೇರ, ಎಸ್.ಟಿ. ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಬಸವರಾಜ ಚಳಗೇರಿ, ಎಸ್.ಟಿ. ಮೋರ್ಚಾ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಶ್ರೀ ಹನುಮಂತಪ್ಪ ಮೀನಕಟ್ಟಿ, ಎಸ್.ಟಿ. ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿದ್ದಾಡಪ್ಪ ಮತ್ತೂರ, ಶ್ರೀ ಉಮೇಶ ಮಾಗಳ, ಎಸ್.ಸಿ. ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಚಂದ್ರಣ್ಣ ಹರಿಜನ, ಯುವ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಅಭಿಷೇಕ ಗುಡಗೂರ, ಜಿಲ್ಲಾ ಪದಾಧಿಕಾರಿಗಳು, ಜಿಲ್ಲಾ ಮೋರ್ಚಾ ಪದಾಧಿಕಾರಿಗಳು, ಮಂಡಲ ಅಧ್ಯಕ್ಷರು, ಪದಾಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಚಿಕ್ಕೋಡಿ :** ಎಸ್.ಟಿ. ಸಮುದಾಯಕ್ಕೆ ಮೀಸಲಿಟ್ಟಿದ್ದ ಅನುದಾನವನ್ನು ನುಂಗಿ ದಲಿತರಿಗೆ ದ್ರೋಹ ಬಗೆದ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಸರದಾರ್ ವೈದಾನದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಪ್ರತಿಭಟನೆ ನೆಡೆಸಲಾಯಿತು.




ಈ ಸಂದರ್ಭದಲ್ಲಿ ಮಹಾನಗರ ಜಿಲ್ಲಾಧ್ಯಕ್ಷರಾದ ಶ್ರೀಮತಿ ಗೀತಾ ಸುತಾರ, ಚಿಕ್ಕೋಡಿ ಜಿಲ್ಲಾಧ್ಯಕ್ಷರಾದ ಶ್ರೀ ಸತೀಶ್ ಅಪ್ಪಾಜಿಗೊಳ ಶಾಸಕರಾದ ಶ್ರೀ ವಿಟ್ಟಲ್ ಹಲಗೆಕರ ರಾಜ್ಯ ಉಪಾಧ್ಯಕ್ಷರಾದ ಶ್ರೀ ಅನಿಲ್ ಬೆನಕೆ ರವರು ಉಪಸ್ಥಿತರಿದ್ದರು.

**ಹುಬ್ಬಳ್ಳಿ ಧಾರವಾಡ ಮಹಾನಗರ :** ರಾಜ್ಯ ಕಾಂಗ್ರೆಸ್ ಸರ್ಕಾರ ಮಹರ್ಷಿ ವಾಲ್ಮಿಕ್ಕಿ ನಿಗಮದ 187 ಕೋ.ರೂ. ಲೂಟಿ ಮಾಡಿರುವುದನ್ನು ಖಂಡಿಸಿ ಜಿಲ್ಲಾಧಿಕಾರಿಗಳ ಕಚೇರಿಗೆ ಬಿಜೆಪಿಯ ಎಸ್.ಟಿ. ಮೋರ್ಚಾ ವತಿಯಿಂದ ಮುತ್ತಿಗೆ ಹಾಕಲಾಯಿತು. ರಾಜ್ಯ ಕಾಂಗ್ರೆಸ್ ನೇತೃತ್ವದ ಸರ್ಕಾರ ಸಮೂದಾಯಗಳಿಗೆ ಮೀಸಲಿಟ್ಟ ಹಣವನ್ನು ಅದರಲ್ಲಿಯೂ ಎಸ್.ಟಿ. ಸಮೂದಾಯಕ್ಕೆ ಮೀಸಲಿಟ್ಟಿದ್ದ 187 ಕೋ.ರೂ. ಗಳನ್ನು ಲೋಕಸಭಾ ಚುನಾವಣೆ ಹಾಗೆ ತನ್ನ ಗ್ಯಾರಂಟಿಗಳಿಗಾಗಿ ಲುಟಿ ಮಾಡಿದನ್ನು ಖಂಡಿಸಿ ನಗರದ ಕೋರ್ಟ್ ವೃತದಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕುವ ಮೂಲಕ ಪ್ರತಿಭಟಣೆ ಮಾಡಲಾಯಿತು.



ಈ ಸಂಧರ್ಭದಲ್ಲಿ ಶ್ರೀ ಸಂಜಯ ಕಪಟಕರ, ಶ್ರೀ ಕುಲ್ಕರ್ಣಿ, ಶ್ರೀ ಪುನಂಡಲಿಕ ತಳವಾರ, ಶ್ರೀ ಬಸವರಾಜ ಮುತ್ತಳ್ಳಿ,

ಶ್ರೀ ಬಸವರಾಜ, ಶ್ರೀ ಗರಗ, ಶ್ರೀ ಸುನೀಲ ಮೋರೆ, ಶ್ರೀ ಮೋಹನ ರಾಮದುರ್ಗ, ಶ್ರೀ ಪ್ರಭು ನವಲಗುಂಮಠ, ಶ್ರೀ ಶೇಕಣಾಣಾ ನವಲೊರ, ಶ್ರೀ ಶ್ರೀನಿವಾಸ ಕೊಟ್ಯಾನ, ಶ್ರೀ ಶಪಿ ಬಿಜಾಪುರಿ, ಶ್ರೀ ರಾಜೇಶ ಚಾಂದಗುಡೆ, ಶ್ರೀ ಮಂಜುನಾಥ ನೀರಲಕಟ್ಟಿ, ಶ್ರೀ ಸಿದ್ದು ಜೋತಿ, ಶ್ರೀ ಅರುಣ ಅರಕೇಲಿ, ಶ್ರೀ ಮನಿಕಂಟ ಶಾಗುಟಿ, ಶ್ರೀ ಭರತ ಮಗದುರ, ಶ್ರೀ ಸಿದ್ದಪ್ಪ ವಾಲಿಕಲ, ಶ್ರೀ ಆಶೋಕ, ಶ್ರೀ ಸುರಾಳಿಕೊಪ್ಪ, ಶ್ರೀ ಅರುಣ ಹುದ್ಲಿ, ಶ್ರೀ ಗುರು ಬನ್ನಿಕೊಪ್ಪ, ಶ್ರೀ ಪವನ ತಿಟೆ, ಶ್ರೀಮತಿ ಮಂಜುಳಾ ಅಕ್ಕೂರ, ಶ್ರೀಮತಿ ಸುಮೀತ್ರಾ ಬಡಿಗೇರ, ಶ್ರೀಮತಿ ಕವಿತಾ ನಾಯ್ಕರ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ವಿಜಯನಗರ :** ರಾಜ್ಯ ಕಾಂಗ್ರೆಸ್ ಸರ್ಕಾರ ಮಹರ್ಷಿ ವಾಲ್ಮಿಕ್ಕಿ ನಿಗಮದ 187 ಕೋ.ರೂ. ಲೂಟಿ ಮಾಡಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ದ ಜಿಲ್ಲಾ ಕೇಂದ್ರ ಹೊಸಪೇಟೆಯಲ್ಲಿ ಪ್ರತಿಭಟನೆ ಹಾಗೂ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಲಾಯಿತು.



ಜಿಲ್ಲಾಧ್ಯಕ್ಷರಾದ ಶ್ರೀ ಚನ್ನಬಸವನ ಗೌಡ ಪಾಟೀಲ್, ಹಡಗಲಿ ಶಾಸಕರಾದ ಶ್ರೀ ಕೃಷ್ಣನಾಯ್ಕ್, ಎಸ್.ಸಿ. ಮೋರ್ಚಾ ಜಿಲ್ಲಾ ಹಾಗೂ ಮಂಡಲ ಪದಾಧಿಕಾರಿಗಳು, ಜಿಲ್ಲೆ ಹಾಗೂ ಮಂಡಲದ ಎಲ್ಲ ಸ್ತರದ ಪದಾಧಿಕಾರಿಗಳು ಭಾಗವಹಿಸಿದ್ದರು.

**ಉತ್ತರ ಕನ್ನಡ :** ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಆದ 187 ಕೋ.ರೂ. ಹಗರಣವನ್ನು ಖಂಡಿಸಿ ಉತ್ತರ ಕನ್ನಡ ಜಿಲ್ಲಾಧಿಕಾರಿ ಕಚೇರಿ ಎದುರು ಬಿಜೆಪಿ ಕಾರ್ಯಕರ್ತರಿಂದ ಬೃಹತ್ ಪ್ರತಿಭಟನೆ ನಡೆಸಲಾಯಿತು. ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಎನ್.ಎಸ್. ಹೆಗಡೆ ಕರ್ಕಿ ರವರು ಹಾಗೂ ಕಾರ್ಯಕರ್ತರು ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.




ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಗಣಪತಿ ಉಳ್ವೇಕರ, ನ್ಯಾಯವಾದಿ ಶ್ರೀ ನಾಗರಾಜ ನಾಯ್ಕ, ಎಸ್.ಸಿ. ಮೋರ್ಚಾ ಅಧ್ಯಕ್ಷರಾದ ಶ್ರೀ ನಂದನ ಬೋರ್ಕರ್, ಎಸ್.ಟಿ. ಮೋರ್ಚಾ ಅಧ್ಯಕ್ಷರಾದ ಶ್ರೀ ಶ್ರೀಕಾಂತ ಬಳ್ಳಾರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಗುರುಪ್ರಸಾದ ಹೆಗಡೆ ಹರ್ತೆಬೈಲ್, ಶ್ರೀ ಪ್ರಶಾಂತ ನಾಯ್ಕ ಹಾಗೂ ಶ್ರೀ ಶಿವಾಜಿ ನರಸಾನಿ, ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷರಾದ ಶ್ರೀ ಈಶ್ವರ ನಾಯ್ಕ, ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ರಾಜೇಂದ್ರ ನಾಯ್ಕ, ಯುವಮೋರ್ಚಾ ಜಿಲ್ಲಾಧ್ಯಕ್ಷರಾದ ಶ್ರೀ ಪ್ರೇಮಕುಮಾರ ನಾಯ್ಕ, ಜಿಲ್ಲಾ ಉಪಾಧ್ಯಕ್ಷರು, ಮತ್ತು ಪದಾಧಿಕಾರಿಗಳು, ಹಾಗೂ ಉಪಸ್ಥಿತರಿದ್ದರು.

**ಮಂಡ್ಯ :** ರಾಜ್ಯ ಕಾಂಗ್ರೆಸ್ ಸರ್ಕಾರವು ಎಸ್ ಟಿ ನಿಗಮದ 187 ಕೋ.ರೂ. ದುರ್ಬಳಕೆ ಮಾಡಿರುವುದನ್ನು ವಿರೋಧಿಸಿ ಮಂಡ್ಯದ ಸಂಜಯ ವೃತ್ತದ ಬಳಿಯಿಂದ ಪ್ರತಿಭಟನೆ ಆರಂಭಿಸಿ ಮಂಡ್ಯದ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲಾಯಿತು.




ಮಂಡ್ಯದ ಜಿಲ್ಲಾಧ್ಯಕ್ಷರಾದ ಶ್ರೀ ಇಂದ್ರೇಶ್, ಜಿಲ್ಲಾ ಪದಾಧಿಕಾರಿಗಳು, ಮಂಡಲದ ಅಧ್ಯಕ್ಷರು, ಜಿಲ್ಲಾ ಮೋರ್ಚಾ ಅಧ್ಯಕ್ಷರು ಮತ್ತು ಹಾಗೂ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಚಿತ್ರದುರ್ಗ :** ಎಸ್.ಟಿ ಸಮುದಾಯದ ಶ್ರೇಯೋಭಿವೃದ್ಧಿಗೆ ಮೀಸಲಿದ್ದ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋ.ರೂ.ಗಳ ಭ್ರಷ್ಟಾಚಾರ ಹಾಗೂ ರಾಜ್ಯ ಬೊಕ್ಕಸ ಬರಿದು ಮಾಡಿಕೊಂಡು ಜನಸಾಮಾನ್ಯರ ಮೇಲೆ ದಿನಕ್ಕೊಂದು ಬೆಲೆ ಏರಿಕೆಯ ಬರೆ ಎಳೆಯುತ್ತಿರುವ ಜನ ವಿರೋಧಿ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರ ಅಧ್ಯಕ್ಷತೆಯಲ್ಲಿ ಚಿತ್ರದುರ್ಗದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಲಾಯಿತು.



ಈ ಸಂದರ್ಭದಲ್ಲಿ ಎಸ್.ಟಿ. ಮೋರ್ಚಾ ರಾಜ್ಯಾಧ್ಯಕ್ಷರಾದ ಶ್ರೀ ಬಂಗಾರು ಹನುಮಂತು, ಶಾಸಕರಾದ ಶ್ರೀ ಎಂ.ಸಿ. ಚಂದ್ರಪ್ಪ,

ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಎಸ್. ನವೀನ್, ಮಾಜಿ ಶಾಸಕರಾದ ಶ್ರೀ ತಿಪ್ಪಾರೆಡ್ಡಿ, ಶ್ರೀ ತಿಪ್ಪೇಸ್ವಾಮಿ, ಮುಖಂಡರಾದ ಶ್ರೀ ಎಸ್. ಲಿಂಗಮೂರ್ತಿ, ರಾಜ್ಯ ಕಾರ್ಯದರ್ಶಿ ಶ್ರೀ ಶರಣು ತಳ್ಳೀಕೇರಿ, ಜಿಲ್ಲಾಧ್ಯಕ್ಷರಾದ ಶ್ರೀ ಮುರಳಿ, ಶ್ರೀ ಹನುಮಂತೇಗೌಡ, ಮುಖಂಡರಾದ ಶ್ರೀ ಉಮೇಶ್ ಕಾರಜೋಳ, ಪಕ್ಷದ ಪದಾಧಿಕಾರಿಗಳು, ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಕೋಲಾರ :** ಜನ ವಿರೋಧಿ ಭ್ರಷ್ಟ ರಾಜ್ಯ ಕಾಂಗ್ರೆಸ್ ಸರ್ಕಾರದಿಂದ ವಾಲ್ಮೀಕಿ ಅಭಿವೃದ್ಧಿ ನಿಗಮ ಹಗರಣ, ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಸ್ಥಗಿತ ಮತ್ತು ಅಗತ್ಯ ವಸ್ತುಗಳ ಬೆಲೆಯೇರಿಕೆ ಖಂಡಿಸಿ, ಬಿಜೆಪಿ ಹಾಗೂ ಜನತಾದಳದ ವತಿಯಿಂದ ಕೋಲಾರ ಜಿಲ್ಲಾಧಿಕಾರಿ ಕಚೇರಿ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.



ಈ ಸಂದರ್ಭದಲ್ಲಿ ವಿಪಕ್ಷ ನಾಯಕರಾದ ಶ್ರೀ ಆರ್. ಅಶೋಕ, ಉಭಯ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಬೆಂಗಳೂರು ಗ್ರಾಮಾಂತರ :** ಕರ್ನಾಟಕ ರಾಜ್ಯದ ವಾಲ್ಮೀಕಿ ನಿಗಮದ 187 ಕೋ.ರೂ. ದುರ್ಬಳಕೆ ಮಾಡಿರುವ ಕಾಂಗ್ರೆಸ್ ಸರ್ಕಾರ ವಿರುದ್ಧ ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಸ್.ಟಿ. ಮೂರ್ಚಾ ವತಿಯಿಂದ ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲಾಯಿತು.



ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ರಾಮಕೃಷ್ಣಪ್ಪ, ದೊಡ್ಡಬಳ್ಳಾಪುರ ಶಾಸಕರಾದ ಶ್ರೀ ಧೀರಾಜ್ ಮುನಿರಾಜ್, ಮಾಜಿ ಶಾಸಕರುಗಳಾದ ಶ್ರೀ ಪಿಳ್ಳ ಮುನಿಶಾಮಪ್ಪ, ಶ್ರೀ ಜಿ. ಚಂದ್ರಣ್ಣ, ಜಿಲ್ಲಾ ಎಸ್ ಟಿ ಮೋರ್ಚಾ ಅಧ್ಯಕ್ಷರಾದ ಶ್ರೀ ನಾಗೇಶ್ ಹಾಗೂ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಚಾಮರಾಜನಗರ:** ರಾಜ್ಯ ಕಾಂಗ್ರೇಸ್ ಸರ್ಕಾರ ವಾಲ್ಮೀಕಿ ನಿಗಮದ 187 ಕೋ.ರೂ. ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ಹಾಗೂ ಡೀಸಲ್, ಪೆಟ್ರೋಲ್, ಹಾಲು, ಜನಸಾಮಾನ್ಯರ ದಿನ ನಿತ್ಯ ಅಗತ್ಯ ವಸ್ತುಗಳ ಬೆಲೆ ಗಗನಕ್ಕೆ ಏರಿಕೆ ಮಾಡಿರುವುದರ ವಿರುದ್ಧ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕುವುದರ ಮೂಲಕ ಪ್ರತಿಭಟನೆ ನಡೆಸಲಾಯಿತು.



ಈ ಸಂದರ್ಭದಲ್ಲಿ ಮಾಜಿ ಸಚಿವರು ಹಾಗೂ ರಾಜ್ಯ ಉಪಾಧ್ಯಕ್ಷರಾದ ಶ್ರೀ ಎನ್. ಮಹೇಶ್, ಬಿಜೆಪಿ ಜಿಲ್ಲಾ ಅಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್ ಕುಮಾರ್, ಮಾಜಿ ಶಾಸಕರಾದ ಶ್ರೀ ಎಸ್. ಬಾಲರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಮಹಾದೇವಸ್ವಾಮಿ ಎಂ. ಹೊನ್ನೂರು, ಶ್ರೀ ಮೂಡ್ನ ಕೊಡು ಪ್ರಕಾಶ್, ಶ್ರೀ ಪಿ. ವೃಷ್ಯವೇಂದ್ರಪ್ಪ, ಎಸ್.ಟಿ. ಮೋರ್ಚಾ ರಾಜ್ಯ ಕಾರ್ಯದರ್ಶಿಗಳಾದ ಶ್ರೀ ಜಯಸುಂದರ್, ಎಸ್.ಟಿ. ಮೋರ್ಚಾ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್, ಶ್ರೀ ವೆಂಕಟೇಶ್, ಶ್ರೀ ನಿಶಾಂತ್, ಮಹಿಳಾ ಘಟಕದ ಅಧ್ಯಕ್ಷರು, ಮಂಡಲ ಅಧ್ಯಕ್ಷರು, ಪದಾಧಿಕಾರಿಗಳು, ವಿವಿಧ ಮೋರ್ಚಾದ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ದಾವಣಗೆರೆ :** ಕರ್ನಾಟಕ ರಾಜ್ಯದ ವಾಲ್ಮೀಕಿ ನಿಗಮದ 187 ಕೋ.ರೂ. ಗಳನ್ನು ರಾಜ್ಯ ಕಾಂಗ್ರೆಸ್ ಸರ್ಕಾರವು ತನ್ನ ಚುನಾವಣೆ ವೆಚ್ಚಕ್ಕಾಗಿ ದುರ್ಬಳಕೆ ಮಾಡಿರುವುದರ ವಿರುದ್ಧ ಎಸ್.ಟಿ. ಮೋರ್ಚಾ ನೇತೃತ್ವದಲ್ಲಿ ದಾವಣಗೆರೆ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಲಾಯಿತು.



ಈ ಸಂದರ್ಭದಲ್ಲಿ ಶಾಸಕರು, ಪಕ್ಷದ ಹಿರಿಯ ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.





# ಹಾಲಿನ ಪ್ರೋತ್ಸಾಹ ಧನ ಬಿಡುಗಡೆಯಲ್ಲಿ ವಿಳಂಬ

## ರೈತ ಮೋರ್ಚಾದಿಂದ ರಾಜ್ಯಾದ್ಯಂತ ಪ್ರತಿಭಟನೆ

**ದೇಶದ ಆರ್ಥಿಕತೆಗೆ ಕೃಷಿ ಮತ್ತು ಕೃಷಿ ಉಪವಲಯಗಳು ಸಾಕಷ್ಟು ಕೊಡುಗೆಯನ್ನು ನೀಡಿದೆ ಮತ್ತು ನೀಡುತ್ತಿದೆ**

**ರೈತರ ಆಧಾಯವನ್ನು ದ್ವಿಗುಣಗೊಳಿಸುವ ಮುಖಾಂತರ ರೈತರನ್ನು ಸುಸ್ಥಿರ ಅಭಿವೃದ್ಧಿಗೊಳುವ ಪ್ರಯತ್ನವಾಗಿದೆ**



**ಡಾ. ನವೀನ್ ಬಿ.ಸಿ.**
ರಾಜ್ಯ ಪ್ರಧಾನ ಕಾರ್ಯದರ್ಶಿಗಳು,
ಬಿಜೆಪಿ - ರೈತಮೋರ್ಚಾ

**ನೂ**ರಾರು ವರ್ಷಗಳಿಂದ ಹೈನುಗಾರಿಕೆ ರಾಜ್ಯದಲ್ಲಿದ್ದು, ರಾಜ್ಯದ ನೈಸರ್ಗಿಕ ಸಂಪನ್ಮೂಲವನ್ನು ಮತ್ತು ವಿಶೇಷವಾಗಿ ಮಣ್ಣಿನ ಆರೋಗ್ಯವನ್ನು ಕಾಪಾಡುವಲ್ಲಿ ಹೈನುಗಾರಿಕೆ ತನ್ನದೆ ಆದ ಕೊಡುಗೆಯನ್ನು ನೀಡಿದೆ.

ರಾಜ್ಯದಲ್ಲಿ 16ಲಕ್ಷ ಹಾಲು ಉತ್ಪಾದಕರಿದ್ದು, 15,700 ಹಾಲು ಉತ್ಪಾದಕರ ಸಂಘಗಳಿವೆ. ಒಂದು ಕೋಟಿಯಷ್ಟು ಹಾಲು ಉತ್ಪಾದನೆ ರಾಜ್ಯದಲ್ಲಾಗುತ್ತಿದೆ. ಹಾಲು ಉತ್ಪಾದಕರು ಮತ್ತು ಗ್ರಾಹಕರ ಮಧ್ಯೆ ಸೇತುವೆಯಾಗಿ ಕೆಲಸ ನಿರ್ವಹಿಸಲು ರಾಜ್ಯದಲ್ಲಿ 15 ಹಾಲು ಒಕ್ಕೂಟಗಳಿವೆ. ಆದರೆ, ಹೈನುಗಾರರ ಹಿತ ಕಾಪಾಡಬೇಕಾಗಿದ್ದ ಒಕ್ಕೂಟಗಳು ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದ ಮನೆಗಳಾಗಿವೆ.

ಕರ್ನಾಟಕ ರಾಜ್ಯ ಕಾಂಗ್ರೆಸ್ ಸರ್ಕಾರ ಹೈನುಗಾರರಿಗೆ ಸಹಾಯಮಾಡಲೆಂದು ಹೇಳಿ ಹಾಲಿನ ದರವನ್ನು ಏರಿಕೆ ಮಾಡಿ ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ಮುಟ್ಟಿಸಿದೆ. 2023 ಆಗಸ್ಟ್ ನಿಂದ 2024 ಮೇ ತಿಂಗಳವರೆಗೆ ಹಾಲಿನ ಪ್ರೋತ್ಸಾಹಧನವನ್ನು ಬಿಡುಗಡೆಮಾಡಿಲ್ಲ. ರಾಜ್ಯದ ಹಾಲು ಉತ್ಪಾದಕರು ಪಶುಸಂಗೋಪನೆ ಇಲಾಖೆಯನ್ನು ಪ್ರಶ್ನೆ ಮಾಡಿದರೆ, ಸಹಕಾರ ಇಲಾಖೆಯವರು ಆರ್ಥಿಕ ಇಲಾಖೆಯ ಮೇಲೆ ಬೆರಳು ತೋರಿಸುತ್ತಿದ್ದಾರೆ. ಸರ್ಕಾರ ಸರಿಯಾದ ರೀತಿಯ ತೀರ್ಮಾನ ತೆಗೆದುಕೊಳ್ಳದೆ ಹಾಲು ಉತ್ಪದಕರನ್ನು ಗೊಂದಲಕ್ಕೀಡುಮಾಡಿದೆ.


ಒಂದೆಡೆ ಬರ ನಿರ್ವಹಣೆಯಲ್ಲಿ ವಿಫಲತೆ, ಬರದ ಹೆಸರಿನಲ್ಲಿ ರಾಜಕೀಯ, ಅಸಮರ್ಪಕ ಮೇವಿನ ಕಿಟ್ ವಿತರಣೆ, ಬಿತ್ತನೆ ಬೀಜದ ದರ ಏರಿಕೆ ಪ್ರೋತ್ಸಾಹ ಧನ ನೀಡುವಲ್ಲಿ ವಿಳಂಬ, ಕಳೆದ ಬಜೆಟ್‌ನಲ್ಲಿ ಪ್ರೋತ್ಸಾಹ ಧನಕ್ಕೆ ಬಿಡುಗಡೆಯಾಗಿದ್ದ ಹಣವನ್ನು ಪಶು ಸಂಗೋಪನೆ ಇಲಾಖೆ ಇತರೆ ಖರ್ಚು ವೆಚ್ಚಗಳಿಗೆ ಬಳಕೆ ಮಾಡಿಕೊಂಡಿದೆ ಎಂಬ ಆರೋಪವೂ ಕೇಳಿಬರುತ್ತಿದೆ ಹಾಗೂ ಮೇವಿನ ದರ ಏರಿಕೆ ಹೀಗೆ ಹತ್ತು ಹಲವು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ರೈತ ಮೋರ್ಚಾದ ನೇತೃತ್ವದಲ್ಲಿ ರಾಜ್ಯದ ಎಲ್ಲಾ ಸಂಘಟನಾತ್ಮಕ ಜಿಲ್ಲೆಯಲ್ಲಿ ಪ್ರತಿಭಟನೆಯನ್ನು ಏರ್ಪಡಿಸಲಾಗಿತ್ತು.

ಈ ಪ್ರತಿಭಟನೆಯಲ್ಲಿ ರಾಜ್ಯ, ಜಿಲ್ಲೆ ಮತ್ತು ಮಂಡಲ ರೈತ ಮೋರ್ಚಾದ ಪದಾಧಿಕಾರಿಗಳು, ಹಾಲಿ ಮತ್ತು ಮಾಜಿ ಜನಪ್ರತಿನಿಧಿಗಳು ಭಾಗವಹಿಸಿದ್ದರು.

22

ಹಿರಿಯ ಕಾರ್ಯಕರ್ತರ

# ಪರಿಚಯಮಾಲೆ



## ಸ್ವಂತಕ್ಕೆ ಸ್ವಲ್ಪ, ಸಮಾಜಕ್ಕೆ ಸರ್ವಸ್ವವೆಂದು ಬದುಕಿದ

# ಶ್ರೀ ಬೋಳ ರಘುರಾಮ ಶೆಟ್ಟಿ



ಶ್ರೀಮತಿ ರೇಷ್ಮಾ ಶೆಟ್ಟಿ
ಜಿಲ್ಲಾ ಪ್ರಧಾನಕಾರ್ಯದರ್ಶಿ
ಬಿಜೆಪಿ - ಉಡುಪಿ

ಸ್ವಾಮಿ ವಿವೇಕಾನಂದರ ವಿಚಾರಗಳು ಎಲ್ಲಾ ವರ್ಗದ ಜನರಿಗೂ ಸದಾ ಪ್ರೇರಣಾದಾಯಕ. ಜಗತ್ತಿನೆಲ್ಲೆಡೆ ಅನುಯಾಯಿಗಳನ್ನು ಹೊಂದಿರುವ ಈ ಸಂತನಿಂದ ಕರಾವಳಿಯ ಬೋಳ ಎಂಬ ಅಂದಿನ ಕುಗ್ರಾಮದಲ್ಲಿ ರಘುರಾಮನೆಂಬ ಅನುಯಾಯಿಯೊಬ್ಬರು ಸದ್ದಿಲ್ಲದೆ ವಿವೇಕಾನಂದರ ವಿಚಾರಗಳ ಅನುಪಾಲನೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದರು.

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಬೋಳ ಗ್ರಾಮದ ಬಂಟ ಮನೆತನದ ಮರಿಮಾರು ಗುತ್ತುವಿನಲ್ಲಿ 1927ರಲ್ಲಿ ನರ್ಸಿಶೆಡ್ತಿ ಮತ್ತು ನಾಗಣ್ಣ ಶೆಟ್ಟಿ ದಂಪತಿಗಳ ಮಗನಾಗಿ ಜನಿಸಿದ ಶ್ರೀ ಬೋಳ ರಘುರಾಮ ಶೆಟ್ಟಿಯವರು ಹುಟ್ಟು ಶ್ರೀಮಂತರಾಗಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದು, ಸ್ವಾಮಿ ವಿವೇಕಾನಂದರ ಚಿಂತನೆಗಳಿಂದ ಪ್ರೇರಣೆಗೊಂಡು ಜನಸೇವೆಯಲ್ಲಿ ತೊಡಗಿಕೊಂಡಿದ್ದರು. ಕಾರ್ಕಳ ಜನಸಂಘದ ಅದ್ಯಕ್ಷರಾಗಿ ಸಂಘದ ಕಾರ್ಯಕರ್ತರೊಡನೆ ಒಡನಾಟವಿತ್ತು. ಅಂದು ಜನಸಂಘದ Land to the Tillar, ಗೋ ಹತ್ಯಾ ನಿಷೇಧ, ಮೊದಲಾದ ಚಳುವಳಿಗಳು ಅವರ ಆಸಕ್ತಿಯ ವಿಚಾರಗಳಾಗಿದ್ದವು. ಬಹುಶಃ ಕೃಷಿ ಕುಟುಂಬದಿಂದ ಬಂದಿರುವ ಕಾರಣಕ್ಕೆ ಇರಬಹುದೇನೋ ರೈತರ ಬಗ್ಗೆ ವಿಶೇಷ ಕಾಳಜಿ ಅವರಿಗಿತ್ತು. ರೈತರು ಎದುರಿಸುತ್ತಿದ್ದ ಸಮಸ್ಯೆಗಳನ್ನು ಅಭ್ಯಸಿಸುತ್ತಾ, ಚರ್ಚಿಸುತ್ತಾ ಪರಿಹಾರ ಕಂಡುಕೊಳ್ಳಬೇಕೆಂಬ ತುಡಿತ ಸದಾ ಅವರಲ್ಲಿ ಜಾಗೃತವಾಗಿತ್ತು. ಕಾರ್ಕಳ ಪೇಟೆಯಲ್ಲಿ ತಮ್ಮದೇ ಆದ ಪರ್ವ ಪ್ರೆಸ್ ಎನ್ನುವ ಮುದ್ರಣಾಲಯವನ್ನು ಹೊಂದಿದ್ದ ರಘುರಾಮ ಶೆಟ್ಟಿಯವರು ಪ್ರತಿನಿತ್ಯ ತಮ್ಮ ವಕೀಲಿ ಕೆಲಸ ಮುಗಿದ ಬಳಿಕ ತಮ್ಮ ಓರಗೆಯ ಸಮಾನ ಮನಸ್ಕರೊಂದಿಗೆ ತಮ್ಮ ರಾಜ್ ದೂತ್ ಬೈಕಿನಲ್ಲಿ ಊರೂರು ಸುತ್ತುತ್ತಾ, ಸಂವಹಿಸುತ್ತಾ ಕೃಷಿ ಮತ್ತು ಕೃಷಿಕರ ಜೀವನದ ಬಗ್ಗೆ ತಿಳಿದುಕೊಳ್ಳುತ್ತಿದ್ದರು. ತಮ್ಮದೇ ಆದ ಕೃಷಿಕರ ಸಂಘಟನೆ ಎಂಬ ವಾರಪತ್ರಿಕೆಯ ಮೂಲಕ ರೈತರ ಸಮಸ್ಯೆಗಳಿಗೆ ಧ್ವನಿಯಾಗಿದ್ದರು. ಪರ್ವ ಪ್ರೆಸ್‌ನ ಒಂದು ಕೋಣೆಯೇ ಅವರ ಮನೆಯಾಗಿತ್ತು. ಸ್ವತಃ ಜಮೀನ್ದಾರರಾಗಿದ್ದರೂ ಗೇಣಿದಾರರು ಎದುರಿಸುತ್ತಿದ್ದ ತೊಂದರೆಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನದಲ್ಲಿ ಸದಾ ಮುಂಚೂಣಿಯಲ್ಲಿರುತ್ತಿದ್ದರು.

ಇಂತಹ ಜನ ಸೇವಕನನ್ನು ಗುರುತಿಸಿದ ಜನಸಂಘ 1967ರಲ್ಲಿ ಚುನಾವಣೆಗೆ ಸ್ಪರ್ಧಿಸಲು ಅವಕಾಶ ನೀಡಿತು. 1967ರ ಲೋಕಸಭೆ ಮತ್ತು ವಿಧಾನಸಭೆಯ ಚುನಾವಣೆಯು ಸ್ವಾತಂತ್ರ್ಯ ನಂತರದ ಕಾಂಗ್ರೆಸ್‌ನ ನಾಗಾಲೋಟಕ್ಕೆ ಕಡಿವಾಣ ಹಾಕಿ ಕಾಂಗ್ರೆಸ್‌ಗೆ ಸೋಲಿನ ರುಚಿ ತೋರಿಸಿತ್ತು. ಈ ಚುನಾವಣೆಯಲ್ಲಿ ಜನಸಂಘವು ಲೋಕಸಭೆಯಲ್ಲಿ 38 ಸ್ಥಾನಗಳನ್ನೂ, ಮೈಸೂರು ರಾಜ್ಯ ( ಕರ್ನಾಟಕ) ವಿಧಾನಸಭೆಯ ಒಟ್ಟು 216 ಸ್ಥಾನಗಳಲ್ಲಿ 4 ಸ್ಥಾನಗಳನ್ನು ಗೆದ್ದುಬಿಟ್ಟಿತ್ತು. ಹುಬ್ಬಳ್ಳಿಯಿಂದ ಎಸ್.ಎಸ್. ಶೆಟ್ಟರ್, ಬೀದರ್‌ನಿಂದ ಗುರುಪಾದಪ್ಪ, ವಿರಾಜಪೇಟೆಯಿಂದ ಎನ್.ಎಲ್. ನಾಯಕ್ ಮತ್ತು ಕಾರ್ಕಳದಿಂದ ಬೋಳ ರಘುರಾಮ ಶೆಟ್ಟಿ ಯವರು ವಿಧಾನಸಭೆಯನ್ನು ಪ್ರವೇಶಿಸಿದರು

ಕಾರ್ಕಳದಲ್ಲಿ ಆಗ ಜನಸಂಘದ ಯುವ ಕಾರ್ಯಕರ್ತರಾಗಿದ್ದ ಬೋಳ ಪ್ರಭಾಕರ ಕಾಮತ್, ಮಾಧವ ನಾಯಕ್, ಪಾಂಡುರಂಗ ಪ್ರಭು ಮೊದಲಾದವರು ಅತ್ಯುತ್ಸಾಹದಿಂದ ಜನಸಂಘದ ಪರವಾಗಿ ಚುನಾವಣೆಯಲ್ಲಿ ಓಡಾಟ ನಡೆಸಿ ಕೆಲಸ ಮಾಡಿದ ಪರಿಣಾಮ ಕಾಂಗ್ರೆಸ್‌ನ ಪ್ರಬಲ ಸ್ಪರ್ಧಿ ಅಲಂಗಾರು ನಾರಾಯಣ ಹೆಗ್ಡೆಯವರನ್ನು ಸೋಲಿಸಿ ಜನಸಂಘ ಗೆಲುವು ಪಡೆಯಿತು. ಆ ದಿನಗಳಲ್ಲಿ ಭಾರತೀಯ ಮಜ್ದೂರ್ ಸಂಘದ ಪ್ರಭಾಕರ ಘಾಟೆಯವರು ಕಾರ್ಕಳ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆಯನ್ನು ಎದುರಿಸುವಲ್ಲಿ ಬೂತ್ ಕಾರ್ಯದ ಬಗ್ಗೆ ಕಾರ್ಕಳಾದ್ಯಂತ ಸುಮಾರು 2,000 ಜನಸಂಘ ಮತ್ತು ಸಂಘದ ಕಾರ್ಯಕರ್ತರನ್ನು ಸಿದ್ದಗೊಳಿಸಿದ್ದನ್ನು, ಕಾರ್ಯಕರ್ತರು ಹಿತೈಷಿಗಳು ಕೊಡುವ ಅವಲಕ್ಕಿ ಮತ್ತು ಬಾಳೆಹಣ್ಣು ತಿಂದು ಕ್ಷೇತ್ರದ ಮೂಲೆ ಮೂಲೆಗೆ ತಿರುಗಿ ಜನಸಂಪರ್ಕ ಮಾಡಿದ್ದನ್ನು ಬೋಳ ಪ್ರಭಾಕರ ಕಾಮತರು ಈಗ ನೆನಪಿಸಿಕೊಳ್ಳುತ್ತಾರೆ.

ಶಾಸಕರಾದ ಬಳಿಕ ರಘುರಾಮ ಶೆಟ್ಟಿಯವರ ರೈತರ ಪರವಾದ ಹೋರಾಟಕ್ಕೆ ಹೆಚ್ಚಿನ ಶಕ್ತಿ ಬಂದಿತು. ತನ್ನ ಶಾಸಕತ್ವದ ಅವಧಿಯುದ್ದಕ್ಕೂ ಪ್ರಾಮಾಣಿಕರಾಗಿ ರಾಜ್ಯಮಟ್ಟದಲ್ಲಿ ರೈತರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದ ಕಾರಣ ಅವರ ಕಾರ್ಯ ಕ್ಷೇತ್ರವು ಕಾರ್ಕಳಕ್ಕೆ ಸೀಮಿತವಾಗಿರದೆ ರಾಜ್ಯಕ್ಕೆ ವಿಸ್ತಾರವಾಯಿತು. ಈ ಮಧ್ಯೆ ಸಹಕಾರಿ ಕ್ಷೇತ್ರದಲ್ಲೂ ಅವರಿಗೆ ಸೇವೆ ಮಾಡಲು ಅವಕಾಶವಾಯಿತು.

ರೈತರು ಎದುರಿಸುತ್ತಿದ್ದ ಸಮಸ್ಯೆಗಳನ್ನು ಸರಕಾರದ ಹಂತಕ್ಕೆ ತಲುಪಿಸುವ ಸಲುವಾಗಿ ಶಿವಮೊಗ್ಗದಲ್ಲಿ ಕೃಷಿಕರ ಬೃಹತ್ ಸಮಾವೇಶವನ್ನು ನಡೆಸಿ ಸರಕಾರದ ಗಮನ ಸೆಳೆದಿದ್ದರು. ಮುಂದೆ ದೇವರಾಜ ಅರಸು ಮುಖ್ಯಮಂತ್ರಿಯಾಗಿ ತಂದ ಭೂ ಮಸೂದೆ ಶಾಸನದ ಹಿಂದೆ ಬೋಳ ರಘುರಾಮ ಶೆಟ್ಟಿಯವರ ಹೋರಾಟದ ಪರಿಶ್ರಮವಿತ್ತು ಎನ್ನುವುದು ಉಲ್ಲೇಖನೀಯ. ಬ್ರಹ್ಮಚಾರಿಯಾಗಿದ್ದ ರಘುರಾಮ ಶೆಟ್ಟಿಯವರು ತನ್ನ ಜೀವನದಲ್ಲಿ ಸ್ವಂತಕ್ಕೆ ಸ್ವಲ್ಪ ಸಮಾಜಕ್ಕೆ ಸರ್ವಸ್ವ ಎಂಬಂತೆ ಬದುಕಿದರು. ಕೊನೆಯವರೆಗೂ ಅವಿವಾಹಿತರಾಗಿ ಉಳಿದು 2001 ರಲ್ಲಿ ಮರಣ ಹೊಂದಿದರು. ಇಂತಹ ವ್ಯಕ್ತಿಯ ಆದರ್ಶದ ಬಗ್ಗೆ ಇಂದಿನ ಕಾರ್ಯಕರ್ತರು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ.

**ಮಾಹಿತಿ ಮೂಲ**

**ಮಣಿರಾಜ ಶೆಟ್ಟಿ ,** ವಕೀಲರು, ಕಾರ್ಕಳ ಹಾಗೂ ಬಿಜೆಪಿ ಮುಖಂಡರು
**ಅವಿನಾಶ್ ಮಲ್ಲಿ ಬೋಳ,** ಬೋಳರಘುರಾಮ ಶೆಟ್ಟಿಯವರ ಮೊಮ್ಮಗ

# ಭಾರತೀಯ ಜನತಾ ಪಾರ್ಟಿ - ಕರ್ನಾಟಕ

## ಮುಂದಿನ ಸಂಘಟನಾತ್ಮಕ ಚಟುವಟಿಕೆಗಳು ಹಾಗೂ ಹೋರಾಟಗಳು

**ಸಂಘಟನಾತ್ಮಕ ಚಟುವಟಿಕೆಗಳು :**

- ಜುಲೈ 20 ರ ಒಳಗೆ ಜಿಲ್ಲಾ ಕಾರ್ಯಕಾರಿಣಿಗಳು.
- ಜುಲೈ 20 ರಿಂದ 30 ರ ಒಳಗೆ ಮಂಡಲ ಕಾರ್ಯಕಾರಿಣಿಗಳು.
- ಆಗಸ್ಟ್ 1 ರಿಂದ 5 ರವರೆಗೆ ಮೋರ್ಚಾಗಳ ರಾಜ್ಯ ಕಾರ್ಯಕಾರಿಣಿ.
- ಆಗಸ್ಟ್ 15 ರಿಂದ ಆಗಸ್ಟ್ 30 ರವರೆಗೆ ಬೂತ್ ಚಲೋ ಅಭಿಯಾನ.

**ಮುಂದಿನ ಹೋರಾಟಗಳು:**

- ಜುಲೈ 12 ನೇ ತಾ ಮೂಡಾ ಭ್ರಷ್ಟಾಚಾರದ ವಿರುದ್ಧ ಮೈಸೂರು ಚಲೋ.
- ಜುಲೈ 15 ನೇ ತಾ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಎಸ್‌ಸಿ ಎಸ್‌ಟಿ ಹಣ ಅವ್ಯವಹಾರದ ಬಗ್ಗೆ ಪ್ರತಿಭಟನೆ.
- ಆಗಸ್ಟ್ 1 ರಿಂ 5 ರವರೆಗೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಹೋರಾಟ.

# ಮಾಸದ ಮಾಧುರ್ಯ 87ನೇ ಕಾರ್ಯಕ್ರಮ

## ಕು. ಚಂದನಾ ಎನ್. ರಾಜು ರವರಿಂದ 'ಮಾರ್ಗಂ ಭರತನಾಟ್ಯ'



**ಬೆಂ**ಗಳೂರಿನ ನಾದಂ ನರ್ತನ ಅಕಾಡೆಮಿ ಆಫ್ ಡ್ಯಾನ್ಸ್ ಅಂಡ್ ಮ್ಯೂಸಿಕ್ ಶಾಲೆಯ ವಿದ್ಯಾರ್ಥಿನಿ ಕು. ಚಂದನಾ ಎನ್. ರಾಜು ಅವರಿಂದ 'ಭರತ ನಾಟ್ಯ' ಕಾರ್ಯಕ್ರಮವನ್ನು ಜಗನ್ನಾಥ ಬಳಗದ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು.

ಹಸಿದವನು ಊಟಕ್ಕೆ ಕೊಡುವ ಪ್ರಾಮುಖ್ಯತೆ, ಗೌರವ, ಭಕ್ತಿ ಇವುಗಳು ಶ್ರೀಮಂತರಿಗೆ ಮೊದಲ ಆದ್ಯತೆ ಅಲ್ಲಾ, ಹಣದ ಮೇಲೆ ಎಲ್ಲವೂ ನಿಂತಿದೆ ಎನ್ನುವ ಮನೋಭಾವದವರೇ ಹೆಚ್ಚು, 'ಕಾಸಿದ್ದರೆ ಮಾತ್ರ ಕೈಲಾಸ' ಎಂಬ ಮನಸ್ಥಿತಿ.

ಕು. ಚಂದನಾ ರವರು ಚಿಕ್ಕ ವಯಸ್ಸಿನಲ್ಲಿಯೇ ನಾಟ್ಯ ಕಲೆಯ ಬಗ್ಗೆ ವಿಶೇಷ ಆಸಕ್ತಿ ತೋರಿಸಿದ ಪರಿಣಾಮ ಅವಳ ತಂದೆ ತಾಯಿ ಮತ್ತು ಅಜ್ಜಿ ಅವಳ ಆಸೆಯನ್ನು ಈಡೇರಿಸಲು ತಮ್ಮ ತನು, ಮನ, ಧನವನ್ನು ಇಂದಿನ ದಿನದವರೆಗೂ ಮುಡಿಪಿಟ್ಟು ದುಡಿಯುತ್ತಿದ್ದಾರೆ.

ತಮ್ಮ ಮಗಳ, ಅವಳ ಕಲೆಯ ಆರಾಧನೆಯಲ್ಲಿ ಎಲ್ಲಿಯೂ ಹಣದ, ಮಾನಸಿಕ ನೆಮ್ಮದಿಯ ಕೊರತೆ ಬಾರದಂತೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಒಂದು ಪುಟ್ಟ ಜಾಗದಲ್ಲಿ ಬಡವರ ಕೈಗೆಟಕುವ ದರದಲ್ಲಿ ಊಟವನ್ನು ಕೊಟ್ಟು ಅದರಲ್ಲಿ ಉಳಿದ ಹಣದಲ್ಲಿ ಮನೆಯ ಸಂಸಾರ, ಮಗಳ ವಿದ್ಯಾಭ್ಯಾಸ ನಿಭಾಯಿಸುತ್ತಿದ್ದಾರೆ. ಅವರ ಶ್ರಮಕ್ಕೆ ಪ್ರತಿಫಲ ಬರುವ ಎಲ್ಲಾ ಲಕ್ಷಣಗಳು ಕು. ಚಂದನಾ ಎನ್. ರಾಜು ಭರವಸೆಯ ಪ್ರಗತಿ ಹೆಜ್ಜೆಗಳಲ್ಲಿ ಕಾಣುತ್ತಿದೆ.

ಶ್ರೀಮತಿ ನಂದಿನಿ ಕೆ. ಮೆಹ್ತಾ ರವರು ಕು. ಚಂದನಾ ಅವರ ಗುರುಗಳು ಹಾಗೂ ಮುಖ್ಯ ನಿರ್ದೇಶಕರು. ತನ್ನ ಭವಿಷ್ಯದ ಹಾದಿಗೆ ಗುರುಗಳ ಪ್ರೀತಿ, ತಂದೆ, ತಾಯಿ, ಅಜ್ಜಿಯ ಪ್ರೀತಿ ನನ್ನ ಜೀವನದಲ್ಲಿ ಮರೆಯಲಾಗದ, ಅನುದಿನವೂ ಸ್ಮರಿಸುವ ಕ್ಷಣಗಳು, ಮುಂದೆಯೂ ನನ್ನ ಮನಸ್ಸಿನಿಂದ ಈ ಕ್ಷಣಗಳು ದೂರವಾಗಬಾರದು ಎಂಬುದು ತಾನು ದೇವರಲ್ಲಿ ನಿತ್ಯವೂ ಪ್ರಾರ್ಥಿಸುತ್ತೇನೆ ಎಂದು ಕು. ಚಂದನಾ ಹೇಳಿದಳು.

ರಂಗದ ಮೇಲಿದ್ದಷ್ಟು ಹೊತ್ತು ಕಣ್ಣು, ಕೈ, ಕಾಲು, ಲಯಬದ್ಧವಾಗಿ ನಾಟ್ಯವಾಡುವ ಪರಿ ಕು. ಚಂದನಾ ಅವರ ಪರಿಶ್ರಮದ ಫಲಿತಾಂಶ ಎನಿಸುತ್ತದೆ.

ಕು. ಚಂದನಾ ಅವರು ವಿದೇಶದಲ್ಲೂ ಹಲವು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ, ಹಾಗೆಯೇ ಹಲವು ಪ್ರಶಸ್ತಿ – ಪುರಸ್ಕಾರವನ್ನು ಪಡೆದಿದ್ದಾರೆ. ಒಂದೂ ಮುಕ್ಕಾಲು ಗಂಟೆ ನಡೆದ ಕಾರ್ಯಕ್ರಮದ ನಾಟ್ಯ ಸೌರಭವನ್ನು ಸವಿಯಲು ಆಗಮಿಸಿದ್ದ ಎಲ್ಲಾ ಕಲಾಭಿಮಾನಿಗಳು ಆರಂಭದಿಂದ ಕೊನೆಯವರೆಗೂ ಕುಳಿತು ಕಲೆಗೆ, ಕಲಾವಿದೆಗೆ ಪ್ರೋತ್ಸಾಹ ಕೊಟ್ಟಿದ್ದಾರೆ. ಕಲಾವಿದೆ ಕು. ಚಂದನಾ ಹಾಗೂ ಉತ್ತಮ ನಿರೂಪಣೆ ಮಾಡಿದ ಶ್ರೀಮತಿ ನಮ್ರತಾ ಎಸ್. ಪ್ರಭು ಅವರಿಗೆ ಜಗನ್ನಾಥ ಬಳಗದ ವತಿಯಿಂದ ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ ಅಂಬೆಕಲ್ಲು ಹಾಗೂ ಕಾರ್ಯಕ್ರಮದ ಸಂಚಾಲಕರಾದ ಶ್ರೀ ದತ್ತಗುರು ಹೆಗಡೆ ರವರು ಅಭಿನಂದನಾ ಪತ್ರವನ್ನು ಕೊಟ್ಟು ಸನ್ಮಾನಿಸಿದರು.



# ಮನ್ ಕಿ ಬಾತ್

## ಭಾರತೀಯ ಸಂಸ್ಕೃತಿ ವಿಶ್ವವ್ಯಾಪಿ

### ಪ್ರಧಾನಿ ಮೋದಿ ಮೆಚ್ಚುಗೆ

**ಭಾ**ರತೀಯ ಸಂಪ್ರದಾಯಗಳು ಮತ್ತು ದೇಶೀ ಉತ್ಪನ್ನಗಳಿಗೆ ವಿದೇಶಗಳಲ್ಲಿ ಸ್ವೀಕಾರಾರ್ಹತೆ ದಿನೇ ದಿನೇ ಹೆಚ್ಚುತ್ತಿದೆ. ಜಗತ್ತಿನಾದ್ಯಂತ ಭಾರತೀಯ ಸಂಸ್ಕೃತಿ ಅಪಾರ ಮನ್ನಣೆ ಪಡೆಯುತ್ತಿದೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಮನ್ ಕಿ ಬಾತ್'ನಲ್ಲಿ ಈ ಮಾಹಿತಿ ನೀಡಿದ ಪ್ರಧಾನಿ, 'ಕುವೈತ್ ರೇಡಿಯೋ'ದಲ್ಲಿ ಪ್ರಸಾರವಾದ ಹಿಂದಿ ಕಾರ್ಯಕ್ರಮವೊಂದರ ತುಣುಕನ್ನು ಕೇಳಿಸಿದರು. ಕುವೈತ್‌ಸರ್ಕಾರ ತನ್ನ ರಾಷ್ಟ್ರೀಯ ಬಾನುಲಿಯಲ್ಲಿ ವಿಶೇಷವಾದ ಹಿಂದಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು, ಪ್ರತೀ ಭಾನುವಾರ ಅರ್ಧ ತಾಸು ಈ ಕಾರ್ಯಕ್ರಮ ಪ್ರಸಾರವಾಗುತ್ತಿದೆ ಎಂದು ಹೇಳಿದರು.

**ಭಾರತಕ್ಕೆ ತುಂಬು ಗೌರವ:** ನಮ್ಮ ಸಂಸ್ಕೃತಿಗೆ ಜಗತ್ತಿನಾದ್ಯಂತ ತುಂಬು ಮನ್ನಣೆ ದೊರೆಯುವಾಗ ಯಾವ ಭಾರತೀಯನಿಗೆ ತಾನೆ ಖುಷಿಯಾಗುವುದಿಲ್ಲ. ತುರ್ಕ್‌ಮೆನಿಸ್ತಾನ್ ತನ್ನ ರಾಷ್ಟ್ರಕವಿಯ 300ನೇ ಜನ್ಮ ಮಹೋತ್ಸವವನ್ನು ಈ ವರ್ಷ ಮೇ ತಿಂಗಳಲ್ಲಿ ಆಚರಿಸಿತ್ತು. ತುರ್ಕ್‌ಮೆನಿಸ್ತಾನ್ ಅಧ್ಯಕ್ಷರು ಅನಾವರಣಗೊಳಿಸಿದ್ದ ಜಗತ್ತಿನ 24 ಪ್ರಸಿದ್ಧ ಕವಿಗಳ ವಿಗ್ರಹಗಳಲ್ಲಿ, ಭಾರತದ ಹಿರಿಯ ಕವಿ ಗುರುದೇವ ರವೀಂದ್ರನಾಥ ಠಾಗೋರ್ ವಿಗ್ರಹ ಕೂಡ ಒಳಗೊಂಡಿದ್ದು ಗೌರವದ ಪ್ರತೀಕ ಎಂದು ಪ್ರಧಾನಿ ಶ್ರೀ ಮೋದಿ ಹರ್ಷ ವ್ಯಕ್ತಪಡಿಸಿದ್ದಾರೆ.

**ಭಾರತೀಯ ಉತ್ಪನ್ನಗಳು ಜನಪ್ರಿಯ:** ಭಾರತದ ಬಹುತೇಕ ಉತ್ಪನ್ನಗಳು ಜಗತ್ತಿನಾದ್ಯಂತ ಜನಪ್ರಿಯವಾಗಿದ್ದು ವಿದೇಶದಲ್ಲಿ ಬೇಡಿಕೆ ಪಡೆಯುತ್ತಿರುವುದು ಹೆಮ್ಮೆ ವಿಚಾರ. ಅರಕು ಕಾಫಿ. ಆಂಧ್ರದ ಅಲ್ಲೂರಿ ಸೀತಾರಾಮ ರಾಜು ಜಿಲ್ಲೆಯಲ್ಲಿ ಹೇರಳವಾಗಿ ಬೆಳವ ಅರಕು ಕಾಫಿ ಸುವಾಸನೆಗೆ ಹೆಸರುವಾಸಿಯಾಗಿದೆ ಎಂದು ಪ್ರಧಾನಿ



**ಸಂಸ್ಕೃತ ವಾರಾಂತ್ಯ:** ಬೆಂಗಳೂರಿನ **'ಸಮಷ್ಟಿ ಗುಬ್ಬಿ'** ಬಗ್ಗೆ ಪ್ರಶಂಸೆ ಸಂಸ್ಕೃತವನ್ನು ಜನಪ್ರಿಯಗೊಳಿಸಲು ಅವಿರತ ಶ್ರಮಿಸುತ್ತಿರುವ ಬೆಂಗಳೂರಿನ ಸಮಷ್ಟಿ ಗುಬ್ಬಿಯನ್ನು 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ಪ್ರಶಂಸಿಸಿದ್ದಾರೆ. ಬೆಂಗಳೂರಿನಲ್ಲಿ ಕಬ್ಬನ್ ಪಾರ್ಕ್ ಉದ್ಯಾನವಿದೆ. ಇಲ್ಲಿನ ಜನ ಈ ಪಾರ್ಕ್‌ನಲ್ಲಿ ಹೊಸ ಸಂಪ್ರದಾಯ ಆರಂಭಿಸಿದ್ದಾರೆ. ಇಲ್ಲಿ ಪ್ರತಿ ಭಾನುವಾರ ಮಕ್ಕಳು, ಯುವಕರು ಮತ್ತು ಹಿರಿಯರು ಪರಸ್ಪರ ಸಂಸ್ಕೃತದಲ್ಲಿ ಮಾತನಾಡುತ್ತಾರೆ. ಇಷ್ಟೇ ಅಲ್ಲ, ಸಂಸ್ಕೃತದಲ್ಲಿ ಅನೇಕ ಚರ್ಚಾ ಅಧಿವೇಶನಗಳನ್ನೂ ಆಯೋಜಿಸಲಾಗಿದೆ. ಈ ಉಪಕ್ರಮದ ಹೆಸರು 'ಸಂಸ್ಕೃತ ವಾರಾಂತ್ಯ'. ಈ ಕಾರ್ಯಕ್ರಮವನ್ನು ಸಮಷ್ಟಿಗುಬ್ಬಿ ಅವರು ವೆಬ್‌ಸೈಟ್ ಮೂಲಕ ಪ್ರಾರಂಭಿಸಿದರು. ಕೆಲವು ದಿನಗಳ ಹಿಂದೆ ಪ್ರಾರಂಭವಾದ ಈ ಕಾರ್ಯಕ್ರಮವು ಬೆಂಗಳೂರಿನ ಜನರಲ್ಲಿ ಜನಪ್ರಿಯತೆಯನ್ನು ಗಳಿಸಿದೆ. ನಾವೆಲ್ಲರೂ ಈ ರೀತಿಯ ಉಪಕ್ರಮಗಳೊಂದಿಗೆ ಸಂಪರ್ಕ ಸಾಧಿಸಿದರೆ ಪ್ರಪಂಚದ ಪ್ರಾಚೀನ ಮತ್ತು ವೈಜ್ಞಾನಿಕ ಜ್ಞಾನದಿಂದ ಬಹಳಷ್ಟು ಕಲಿಯಬಹುದು ಎಂದು ಪ್ರಧಾನಿ ಶ್ರೀ ಮೋದಿ ತಿಳಿಸಿದ್ದಾರೆ.

ವಿವರಿಸಿದರು. ದಿಲ್ಲಿಯಲ್ಲಿ ಜಿ20 ಶೃಂಗಸಭೆಯಲ್ಲೂ ಮೆಚ್ಚುಗೆಗೆ ಪಾತ್ರವಾಗಿದ್ದ ಅರಕು ಕಾಫಿಗೆ ಹಲವು ಜಾಗತಿಕ ಪ್ರಶಸ್ತಿಗಳು ಲಭಿಸಿವೆ, ಅರಕು ಕಾಫಿ ಸವಿದು ನೋಡಿ ಎಂದು ಅವರು ಸಲಹೆ ನೀಡಿದರು.

**ಸಂಸ್ಕೃತ ವಾರ್ತೆಗೆ 50 ವರ್ಷ:** ಆಖಿಲ ಭಾರತ ಬಾನುಲಿ ಕೇಂದ್ರದ ಸಂಸ್ಕೃತ ವಾರ್ತೆಗೆ 50 ವರ್ಷದ ಹಿನ್ನೆಲೆಯಲ್ಲಿ ಬಾನುಲಿ ಕೇಂದ್ರವನ್ನು ಅಭಿನಂದಿಸಿದ ಪ್ರಧಾನಿ, ಭಾರತೀಯ ಜ್ಞಾನ ಮತ್ತು ವಿಜ್ಞಾನಗಳ ಪ್ರಗತಿಯಲ್ಲಿ ಪ್ರಾಚೀನ ಸಂಸ್ಕೃತ ಭಾಷೆ ಮಹತ್ವದ ಪಾತ್ರವಹಿಸಿದೆ, ಸಂಸ್ಕೃತ ಭಾಷೆಯನ್ನು ಗೌರವಿಸಬೇಕು ಮತ್ತು ಅದನ್ನು ನಮ್ಮ ನಿತ್ಯ ಬದುಕಿನ ಭಾಗವಾಗಿಸಬೇಕೆಂದು ಸಲಹೆ ಮಾಡಿದರು.

**ಭಾರತೀಯ ಪರಂಪರೆಗೆ ಗೌರವ:** ಸುರಿನಾಮ್ ಮತ್ತು ಸೈಂಟ್ ವಿನ್ಸೆಂಟ್ ಸಹಿತ 2 ಕೆರಿಬಿಯನ್ ರಾಷ್ಟ್ರಗಳು ಜೂ.5ನ್ನು '**ಭಾರತೀಯ ಪರಂಪರೆ ದಿನ**'ವಾಗಿ ಆಚರಿಸುತ್ತವೆ. ಜೂ.1ರಂದು ಸುರಿನಾಮ್ ಭಾರತೀಯರು ಪ್ರವೇಶಿಸಿದ ದಿನ ಮತ್ತು ಪ್ರವಾಸಿ ದಿನವೆಂದು ಅಲ್ಲಿನ ಭಾರತೀಯ ಸಮುದಾಯ ಸಂಭ್ರಮಿಸುತ್ತದೆ. ಕೆರಿಬಿಯನ್ ರಾಷ್ಟ್ರಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಭಾಷೆ ಭೋಜ್‌ಪುರಿ ಎಂದು ಪ್ರಧಾನಿ ಶ್ರೀ ಮೋದಿ ಮಾಹಿತಿ ನೀಡಿದ್ದಾರೆ.

**ಜಗತ್ತಿನಾದ್ಯಂತ ಹೊಸ ಸಾಧನೆ:** ಈ ಬಾರಿ 10ನೇ ಅಂತಾರಾಷ್ಟ್ರೀಯ ಯೋಗ ದಿನವನ್ನು ಬಲು ಶ್ರದ್ಧೆಯಿಂದ ಇಡೀ ವಿಶ್ವವೇ, ಆಚರಿಸಿದೆ. ಶ್ರೀನಗರದಲ್ಲಿ ಮಹಿಳೆಯರ ಸಹಿತ ಸ್ಥಳೀಯರು ತಮ್ಮೊಂದಿಗೆ ಯೋಗ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸೌದಿ ಅರೇಬಿಯಾದಲ್ಲಿ ಪ್ರಥಮ ಬಾರಿ ಅಲ್ ಹನೌಫ್ ಸಾದ್‌ಜಿ ಎಂಬ ಮಹಿಳೆ ಪ್ರಧಾನ ಯೋಗ ಕಾರ್ಯಕ್ರಮದಲ್ಲಿ ಶಿಕ್ಷಕಿಯಾಗಿ ತರಬೇತಿ ನೀಡಿದ್ದರು. ಈಜಿಪ್ಟ್‌ನಲ್ಲಿ ಆಯೋಜಿಸಿದ್ದ ಫೋಟೋ ಸ್ಪರ್ಧೆಯಲ್ಲಿ ಲಕ್ಷಾಂತರ ಜನರು ನೈಲ್ ನದಿ, ಕೆಂಪು ಸಮುದ್ರ ತೀರದಲ್ಲಿ ಮತ್ತು ಪಿರಮಿಡ್ ಎದುರು ಯೋಗ ನಡೆಸುತ್ತಿರುವ ಫೋಟೋಗಳು ಜನಪ್ರಿಯತೆ ಗಳಿಸಿದೆ. ಮ್ಯಾನ್ಮಾರ್‌ನ ಮಾರವಿಜಯ ಪಗೋಡ ಸಂಕೀರ್ಣದಲ್ಲಿ ಅಂಗವಿಕಲ ಮಕ್ಕಳಿಗಾಗಿ ಬಹರೈನ್‌ನಲ್ಲಿ ಶ್ರೀಲಂಕಾದ ಗಲೆಫೋರ್ಟ್, ನ್ಯೂಯಾರ್ಕ್‌ನ ಆಬ್ಸರ್ವೇಶನ್ ಡೆಕ್‌ನಲ್ಲಿ ಯೋಗ ಕಾರ್ಯಕ್ರಮ ಆಯೋಜಿಸಲಾಗಿತ್ತು.

**ಮಾದರಿಯಾದ ಕಾಶ್ಮೀರ:** ಕಳೆದ ತಿಂಗಳು ಪುಲ್ವಾಮಾದಿಂದ ಲಂಡನ್‌ಗೆ ಬಟಾಣಿಯ ಪ್ರಥಮ ಸರಕನ್ನು ರಫ್ತು ಮಾಡುವ ಸಾಧನೆ ಮೂಲಕ, ಜಮ್ಮು ಕಾಶ್ಮೀರ ದೇಶಾದ್ಯಂತದ ಜನರಿಗೆ ಮಾದರಿಯಾಗಿದ್ದು ಜನತೆಯ ಸಂಪನ್ನತೆಗೆ ಹೊಸ ಹಾದಿಗಳನ್ನು ತೆರೆದಿದೆ ಎಂದು ಪ್ರಧಾನಿ ಶ್ರೀ ಮೋದಿ ಹರ್ಷ ವ್ಯಕ್ತಪಡಿಸಿದ್ದಾರೆ.

**ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆಗೆ ಧನ್ಯವಾದ :** ಸುಮಾರು 5 ಕೋಟಿ ಜನರು ಮತದಾನ ಮಾಡಿದ ಜಗತ್ತಿನ ಅತ್ಯಂತ ಬೃಹತ್ ಚುನಾವಣೆಯಲ್ಲಿ, ದೇಶದ ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆ ಬಗ್ಗೆ ಅಚಲ ವಿಶ್ವಾಸವನ್ನು ವ್ಯಕ್ತಪಡಿಸಿದ ದೇಶದ ಜನತೆಗೆ ಪ್ರಧಾನಿ ಶ್ರೀ ಮೋದಿ ಅಭಿನಂದನೆ ತಿಳಿಸಿದ್ದಾರೆ.

**ಚಿಯರ್ 4 ಭಾರತ್:** ಮುಂದಿನ ತಿಂಗಳು ಪ್ಯಾರಿಸ್ ಒಲಿಂಪಿಕ್‌ನಲ್ಲಿ ಭಾಗವಹಿಸಲಿರುವ ಮತ್ತು ಅದಕ್ಕಾಗಿ ಪೂರ್ವ ಸಿದ್ಧತೆಯಲ್ಲಿ ಮುಳುಗಿರುವ ಭಾರತೀಯ ಕ್ರೀಡಾಳುಗಳಿಗೆ ಪ್ರಧಾನಿ ಶ್ರೀ ಮೋದಿ ಶುಭ ಕೋರಿದ್ದಾರೆ. ಕ್ರೀಡಾಳುಗಳನ್ನು ಉತ್ತೇಜಿಸಲು '**ಚಿಯರ್ ಭಾರತ್**' ಹ್ಯಾಷ್‌ಟ್ಯಾಗ್ ಬಳಸುವಂತೆ ಜನರಿಗೆ ಸಲಹೆ ನೀಡಿದರು. ಕಳೆದ ಬಾರಿ ಟೋಕಿಯೋದಲ್ಲಿ, ಭಾರತೀಯ ಕ್ರೀಡಾಳುಗಳ ಸಾಧನೆ ಪ್ರತಿಯೋರ್ವರ ಹೃದಯ ಗೆದ್ದಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

**ರೆಸ್ಲಿಂಗ್, ಕುದುರೆ ಸವಾರಿಗೂ ಸೈ:** ಶೂಟಿಂಗ್‌ನಲ್ಲಿ ನಮ್ಮ ಕ್ರೀಡಾಳುಗಳು ಮುಂಚೂಣಿ ಸಾಧನೆ ಗೈದಿದ್ದಾರೆ. ಟೇಬಲ್‌ಟೆನ್ನಿಸ್‌ನಲ್ಲಿ ಪುರುಷ-ಮಹಿಳಾ ತಂಡಗಳು ಹೆಚ್ಚು ಸಮರ್ಥವಾಗಿವೆ. ಈ ಬಾರಿ ನಮ್ಮ ತಂಡ ರೆಸ್ಲಿಂಗ್ ಕುದುರೆ ಸವಾರಿ ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

**ಏಕ್ ಪೇಡ್ ಮಾ ಕ ನಾಮ್ :** ವಿಶ್ವ ಪರಿಸರ ದಿನದ ಅಂಗವಾಗಿ ಸರ್ಕಾರ '**ಏಕ್ ಪೇಡ್ ಮಾ ಕೆ ನಾಮ್**' ಅಭಿಯಾನದ ಅರಣ್ಯೀಕರಣ ಉಪಕ್ರಮ ಕೈಗೊಂಡಿದೆ ಮತ್ತು ಇದಕ್ಕೆ ತುಂಬು ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಹೇಳಿದರು. ಜನರು ತಮ್ಮ ತಾಯಿಯ ಜತೆ ಅಥವಾ ತಾಯಿಯ ಭಾವಚಿತ್ರ ಹಿಡಿದುಕೊಂಡು ಗಿಡ ನೆಡುತ್ತಿರುವ ಅಭಿಯಾನಕ್ಕೆ ಪ್ರಧಾನಿ ಶ್ರೀ ಮೋದಿ ಹರ್ಷ ವ್ಯಕ್ತಪಡಿಸಿ ಭೂಮಾತೆಯ ರಕ್ಷಣೆಗೆ ಇದು ಪೂರಕವಾಗಲಿದೆ ಎಂದು ಹೇಳಿದ್ದಾರೆ.

**ಬುಡಕಟ್ಟು ಸ್ವಾತಂತ್ರ್ಯ ಹೋರಾಟಗಾರರಿಗೆ ನಮನ:** ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಾದ 1857ಕ್ಕೂ ಮುನ್ನ 1855ರಲ್ಲಿ ಬ್ರಿಟಿಷ್ ಆಳ್ವಿಕೆ ವಿರುದ್ಧ ಹೋರಾಟದ ನೇತೃತ್ವ ವಹಿಸಿದ್ದ, ಬುಡಕಟ್ಟು ಜನಾಂಗದ ಸ್ವಾತಂತ್ರ್ಯ ಹೋರಾಟಗಾರರಾದ ವೀರ್ ಸಿಧು ಮತ್ತು ಕನ್ಹು ಅವರಿಗೆ ಪ್ರಧಾನಿ ಶ್ರೀ ಮೋದಿ ಭಾಷ್ಪಾಂಜಲಿ ಸಮರ್ಪಿಸಿದರು. ಈ ವೀರ ಹೋರಾಟಗಾರರ ಸ್ಮರಣಾರ್ಥ ಜೂ.30ರಂದು ಬುಡಕಟ್ಟು ಸಮುದಾಯದವರು '**ಹಲ್ ದಿವಸ್**' ಆಚರಿಸುತ್ತಾರೆ.

### ವಿಶ್ವ ಪರಿಚಿತ ಕರ್ಥುಂಬಿ ಕೊಡೆ



ಕೇರಳದ ಸಣ್ಣ ಗ್ರಾಮ ಅಟ್ಟಪ್ಪಾಡಿಯಲ್ಲಿ ಬಡ ಬುಡಕಟ್ಟು ಮಹಿಳೆ ತಯಾರಿಸುತ್ತಿದ್ದ ಕರ್ಥುಂಬಿ ಕೊಡೆಯೀಗ ಬಹುರಾಷ್ಟ್ರೀಯ ಕಂಪೆನಿಗಳ ಬಹುಬೇಡಿಕೆಯ ವಸ್ತುವಾಗಿದೆ. '**ವೋಕಲ್ ಫಾರ್ ಲೋಕಲ್**' ಯಶಸ್ಸಿಗೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ ಎಂದು ಪ್ರಧಾನಿ ಶ್ರೀ ಮೋದಿ ರವರು ಪ್ರಶ್ನಿಸಿದ್ದಾರೆ.






ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಲೋಕಸಭಾ ಚುನಾವಣೆಯ ಫಲಿತಾಂಶದ ಅವಲೋಕನಾ ಸಭೆ



ನೂತನ ಸಂಸದರಾದ ಡಾ. ಸಿ.ಎನ್. ಮಂಜುನಾಥ್ ರವರ ಅಭಿನಂದನಾ ಸಮಾರಂಭದಲ್ಲಿ ರಾಜ್ಯಾಧ್ಯಕ್ಷ ಶ್ರೀ ಬಿ.ವೈ. ವಿಜಯೇಂದ್ರ



ಶಿವಮೊಗ್ಗದಲ್ಲಿ ಆಯೋಜಿಸಿದ್ದ ಬಿಜೆಪಿಯ ಹಿರಿಯ ಮುಖಂಡರು ಹಾಗೂ ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ.ಬಿ. ಭಾನುಪ್ರಕಾಶ್ ಅವರ ಶ್ರದ್ಧಾಂಜಲಿ ಸಭೆಯಲ್ಲಿ ರಾಜ್ಯಾಧ್ಯಕ್ಷರು ಹಾಗೂ ಗಣ್ಯರಿಂದ ಪುಷ್ಪನಮನ



ಕೇಂದ್ರ ವಿಪಕ್ಷ ನಾಯಕ ಶ್ರೀ ರಾಹುಲ್ ಗಾಂಧಿಯವರ ದ್ವೇಷದ ಭಾಷಣ ಖಂಡಿಸಿ ಸಂಸದ ಶ್ರೀ ತೇಜಸ್ವಿ ಸೂರ್ಯ ನೇತೃತ್ವದಲ್ಲಿ ನವ ದೆಹಲಿಯ ಕಾಂಗ್ರೆಸ್ ಪ್ರಧಾನ ಕಚೇರಿ ಎದುರು ಪ್ರತಿಭಟನೆ



ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಯೋಗ ದಿನಾಚರಣೆ



ದಿ. ಜಗನ್ನಾಥ ರಾವ್ ಜೋಷಿ ರವರ ಜನ್ಮದಿನ ಹಾಗೂ ಡಾ. ಶ್ಯಾಮ ಪ್ರಸಾದ ಮುಖರ್ಜಿರವರ ಬಲಿದಾನ ದಿನದಂದು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಗಣ್ಯರಿಂದ ಪುಷ್ಪನಮನ



ಡಾ. ಶ್ಯಾಮ ಪ್ರಸಾದ ಮುಖರ್ಜಿ ರವರ ಜನ್ಮ ದಿನದಂದು ಅವರ ಭಾವಚಿತ್ರಕ್ಕೆ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಗಣ್ಯರಿಂದ ಪುಷ್ಪನಮನ

ಸೃಷ್ಟಿ



ಕಾಲೇ ವರ್ಷತು ಪರ್ಜನ್ಯಃ

# ಗೆದ್ದಿದ್ದು ವಿಶ್ವಕಪ್‌ಗಿಂತ ಮಿಗಿಲಾದ ಹೃದಯವನ್ನು...

**ಭಾ**ರತೀಯ ತಂಡ ವಿಶ್ವಕಪ್ ಮಾತ್ರ ಗೆಲ್ಲಲಿಲ್ಲ. ಕೋಚ್, ನಾಯಕ, ಆಟಗಾರರು ಎಲ್ಲರೂ ವಿಶ್ವಕಪ್ ಜೊತೆಗೆ ದೇಶದ ಜನತೆಯ ಹೃದಯವನ್ನೂ ಗೆದ್ದು ಬಿಟ್ಟರು. ಗೆಲುವಿನ ಕಿರೀಟವನ್ನು ತನ್ನ ಸಹೋದ್ಯೋಗಿಗಳಿಗೆ ಹೊರಿಸುವ, ಸೋಲಿನ ಜವಾಬ್ದಾರಿಯನ್ನು ತಾನೇ ಹೊರುವ ನಾಯಕ ಜನತೆಯ ಹೃದಯವನ್ನೂ ಗೆದ್ದು ಬಿಡುತ್ತಾನೆ. ದೇಶದ ನಾಯಕ ಮೋದಿ ಹಾಗೂ ಕ್ರಿಕೆಟ್ ತಂಡದ ನಾಯಕ ರೋಹಿತ್ ಇಬ್ಬರೂ ನಡೆದುಕೊಂಡಿದ್ದೂ ಹೀಗೆಯೇ. ಅದಕ್ಕೇ ಅವರಿಬ್ಬರೂ ತಮ್ಮದೇ ಸ್ಪರ್ಧೆಗಳನ್ನು ಗೆಲ್ಲುವುದರ ಜೊತೆಗೆ ಜನತೆಯ ಹೃದಯವನ್ನೂ ಗೆದ್ದು ಬಿಟ್ಟರು.

ಒಂದೇ ಒಂದು ಸೋಲನ್ನು ಕಾಣದೆ ಭಾರತ ತಂಡ 20-20 ವಿಶ್ವಕಪ್ ಫೈನಲ್ ತಲುಪಿತ್ತು. ಫೈನಲ್ ಪಂದ್ಯದ ಮುನ್ನಾದಿನ, ನಾಯಕ ರೋಹಿತ್ ಶರ್ಮಾ ಭಾರತ ಈ ವಿಶ್ವಕಪ್‌ನ್ನು ಗೆದ್ದರೆ, ಆ ಗೆಲುವನ್ನು ತಂಡದ ಸಹ ಆಟಗಾರನೊಬ್ಬನಾದ ವಿರಾಟ್‌ಕೊಹ್ಲಿಗೆ ಸಮರ್ಪಿಸುತ್ತೇನೆ ಎಂದು ಬಿಟ್ಟರು. ಹಿಂದಿನ ಬಹುತೇಕ ಪಂದ್ಯಗಳಲ್ಲಿ ವೈಫಲ್ಯವನ್ನು ಕಂಡಿದ್ದು ಕೊಹ್ಲಿ. ಬಹುತೇಕ ಎಲ್ಲಾ ಪಂದ್ಯಗಳಲ್ಲೂ ಅತ್ಯಧಿಕ ರನ್ ಗಳಿಸಿದ್ದು ಸ್ವತಃ ರೋಹಿತ್ ಶರ್ಮಾ. ಆದರೆ ಫೈನಲ್‌ಗೆ ಮೊದಲೇ ರೋಹಿತ್ ವಿಶ್ವಕಪ್ಪ ಗೆದ್ದರೆ ಅದನ್ನು ಅರ್ಪಿಸುವುದು ಕೊಹ್ಲಿಗೇ ಎಂದರು. ಸಮರ್ಥ ಸಹವರ್ತಿ ಸಾಧಕನೊಬ್ಬನನ್ನು ತಂಡದ ನಾಯಕ ಗುರುತಿಸಿ ಗೌರವಾರ್ಥವಾಗಿ ಸಮರ್ಪಣೆ ಮಾಡುವುದಿದೆಯಲ್ಲಾ ಅದು ಸಂವೇದನಾಶೀಲ ನಾಯಕನಿಂದ ಮಾತ್ರ ಸಾಧ್ಯ. ಈ ಸಂವೇದನಾ ಶೀಲತೆಯ ಪ್ರತಿರೂಪವಾಗಿ ನಿಂತವನು ರೋಹಿತ್ ಶರ್ಮಾ.

ಫೈನಲ್ಸ್‌ನಲ್ಲಿ ಭಾರತ ತಂಡ ಜಯಭೇರಿ ಬಾರಿಸಿ, ಆಟಗಾರರೆಲ್ಲರೂ ಎದೆಯುಬ್ಬಿಸಿ ಗೆಲುವಿನ ಹೆಜ್ಜೆ ಹಾಕುತ್ತಿದ್ದರೆ, ತಂಡದ ನಾಯಕ ರೋಹಿತ್ ಶರ್ಮಾ ಮೈದಾನದ ಪಿಚ್‌ನಲ್ಲಿರುವ ಮಣ್ಣಿನ ಕಣವನ್ನು ಬಾಯಲ್ಲಿರಿಸಿ ಕೃತಜ್ಞನಾಗುತ್ತಾನೆ. ಗೆಲುವಿಗೆ ತಮ್ಮೆಲ್ಲಾ ಪ್ರಯತ್ನದ ಜೊತೆಗೆ ಪಕೃತಿ ಸಹ ಕಾರಣ ಎನ್ನುವ ಗೌರವದ ಜೊತೆಗೆ, ತನಗೆ ಗುರುತು ಕೊಟ್ಟ ಮಣ್ಣಿಗೆ ಋಣವನ್ನು ತೀರಿಸುವ ಕೃತಜ್ಞತಾ ಭಾವ ಆ ಕಣ್ಣಲ್ಲಿತ್ತು. ಇದು ನಾಯಕನಲ್ಲಿರಬೇಕಾದ ಸೂಕ್ಷ್ಮ ಸ್ವಭಾವ.

ಐಪಿಎಲ್‌ನಲ್ಲಿ ವಿಫಲವಾಗಿ ಸಾಕಷ್ಟು ಟ್ರೋಲ್‌ಗೂ ಒಳಗಾಗಿದ್ದ ಹಾರ್ದಿಕ್ ಪಾಂಡ್ಯಾ ಕ್ರಿಕೆಟ್ ಜೀವನದ ಅತ್ಯಂತ ಸಂಕಷ್ಟದ ದಿನಗಳನ್ನು ಎದುರಿಸುತ್ತಿರುತ್ತಾನೆ. ಆದರೆ ಸೌತ್ ಆಫ್ರಿಕಾ ಮತ್ತು ಭಾರತ ನಡುವಿನ ಫೈನಲ್ಸ್‌ನ ರೋಚಕ ಪಂದ್ಯದಲ್ಲಿ ರೋಹಿತ್ ಶರ್ಮಾ, ಹಾರ್ದಿಕ್ ಪಾಂಡ್ಯಾ ಮೇಲಿನ ಭರವಸೆ, ನಂಬಿಕೆಯಿಂದ ಕೊನೆಯ ಓವರ್ ಎಸೆಯಲು ಅವಕಾಶ ನೀಡುತ್ತಾನೆ. ನಾಯಕನ ನಂಬಿಕೆಯನ್ನು ಹಾರ್ದಿಕ್ ಪಾಂಡ್ಯಾ ಉಳಿಸಿ ಪಂದ್ಯ ಗೆಲ್ಲಿಸಿ ಕೊಡುತ್ತಾನೆ. ಆಗ ರೋಹಿತ್ ಹಾರ್ದಿಕ್ ಪಾಂಡ್ಯಾರನ್ನು ಶುದ್ಧ ಭಾವದಲ್ಲಿ ಅಪ್ಪಿ ಒಂದು ಮುತ್ತನ್ನು ನೀಡುತ್ತಾನೆ. ಇದು ನಾಯಕನಲ್ಲಿರಬೇಕಾದ ಕೃತಜ್ಞತಾ ಭಾವ.

ಇನ್ನೊಂದೆಡೆ 50 ಓವರ್ ವಿಶ್ವಕಪ್‌ನಲ್ಲಿ ಸಹ ಭಾರತ ಒಂದೇ ಒಂದು ಪಂದ್ಯವನ್ನು ಸೋಲದೆ ಫೈನಲ್ ತಲುಪಿತ್ತು, ಆದರೆ ಫೈನಲ್‌ನಲ್ಲಿ ಸೋತು ವಿಶ್ವಕಪ್‌ನ್ನು ಕೈಚೆಲ್ಲಿತ್ತು. ಮಾಧ್ಯಮದವರನ್ನು ಎದುರಿಸುವ ಕ್ಲಿಷ್ಟ ಪರಿಸ್ಥಿತಿಯನ್ನು ನಾಯಕನಾಗಿದ್ದ ರಾಹುಲ್‌ದ್ರಾವಿಡ್ ಸ್ವತಃ ತಾವೇ ಹೊರುತ್ತಾರೆ. ಆದರೆ ಅದೇ ರಾಹುಲ್ ದ್ರಾವಿಡ್ ವಿಶ್ವಕಪ್ ಗೆದ್ದ ನಂತರ ಸಂತಸದ ಘಳಿಗೆಯನ್ನು ಮಾಧ್ಯಮದವರೊಂದಿಗೆ ಹಂಚಿಕೊಳ್ಳಲು ನಾಯಕನಾದ ರೋಹಿತ್ ಅವರನ್ನು ಕಳಿಸುತ್ತಾರೆ, ಸೋಲಿನ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹಾಕಿಕೊಳ್ಳುವುದು, ಗೆಲುವಿನ ಶ್ರೇಯಸ್ಸನ್ನೆಲ್ಲಾ ಸಹವರ್ತಿಗಳಿಗೆ ಅರ್ಪಿಸುವುದು ಒಬ್ಬ ಸಮರ್ಥ ಮುಂದಾಳತ್ವದಿಂದ ಮಾತ್ರ ಸಾಧ್ಯ.

ಇನ್ನು ದೇಶದ ನಾಯಕ ಶ್ರೀ ನರೇಂದ್ರ ಮೋದಿಯವರು ನಡೆದುಕೊಂಡ ರೀತಿಯೂ ನಾಯಕನೊಬ್ಬ ನಡೆದುಕೊಳ್ಳಬೇಕಾದುದಕ್ಕೆ ಉದಾಹರಣೆ. 50 ಓವರ್‌ನ ಕ್ರಿಕೆಟ್ ವಿಶ್ವಕಪ್‌ನಲ್ಲಿ ಭಾರತ ಸೋತಾಗ ಮಂಕಾಗಿದ್ದ ಆಟಗಾರರಿಗೆ ವೈಯಕ್ತಿಕವಾಗಿ ಮಾತಾಡಿಸಿ, ಬೆನ್ನುತಟ್ಟಿ ಉತ್ಸಾಹ ತುಂಬಿದ್ದರು. ಅದೇ 20-20 ವಿಶ್ವಕಪ್ ಗೆದ್ದಾಗ ಅದೇ ತಂಡವನ್ನು ಮೋದಿ ಕರೆಸಿ ಸಂಭ್ರಮಿಸಿದ್ದಲ್ಲದೆ, ಗೆದ್ದ ಕಪ್‌ನ್ನು ಆಟಗಾರರ ಕೈಯಲ್ಲಿರಿಸಿ ಗೆಲುವನ್ನು ಸಂಪೂರ್ಣವಾಗಿ ಕೋಚ್ ಮತ್ತು ಆಟಗಾರರಿಗೆ ಅರ್ಪಿಸಿದರು. ಅಂದರೆ ಗೆಲುವು ನನ್ನದಲ್ಲ, ನಿಮ್ಮೆಲ್ಲರ ಪ್ರಯತ್ನದಿಂದ ನಮ್ಮೆಲ್ಲರದ್ದು ಎನ್ನುವ ಒಂದು ಸಂದೇಶವನ್ನು ಸಾರಿದರು. ಇದು ನಾಯಕನಿಗಿರಬೇಕಾದ ಸಮರ್ಪಣಾ ಭಾವ.

ಸಂಘಟನೆಯನ್ನಾಗಲೀ, ದೇಶವನ್ನಾಗಲೀ, ಮುನ್ನಡೆಸುವ ನಾಯಕನಿಗಿರಬೇಕಾದುದ್ದು ಇದೇ. ಸೋತಾಗ ಬೆನ್ನು ತಟ್ಟುವ, ಗೆದ್ದಾಗ ನಮ್ಮೆಲ್ಲರ ಗೆಲುವು ಎಂದು ಸಂಭ್ರಮಿಸುವ, ಜೊತೆಗೆ ತನ್ನ ಜೊತೆಗಾರರ ಮೇಲೆ ವಿಶ್ವಾಸ, ನಂಬಿಕೆ ಇಡುವ ದೊಡ್ಡಗುಣ ನಾಯಕನಿಗಿದ್ದಾಗ ಆತ ಸಮರ್ಥ ಮತ್ತು ವಿಶ್ವಾಸನೀಯ, ನಾಯಕನಾಗಬಲ್ಲ. ಅದಕ್ಕೆ ಉತ್ತಮ ವ್ಯಕ್ತಿ ಎಲ್ಲರೂ ಆಗಬಹುದು, ಆದರೆ ಉತ್ತಮ ನಾಯಕನಾಗುವುದು ಕಷ್ಟ. ಆದರೆ ಇಂದು ದೇಶಕ್ಕೊಂದು ಸಮರ್ಥ ನೇತೃತ್ವ ಹಾಗೂ ಕ್ರಿಕೆಟ್‌ಗೂಬ್ಬ ಸಮರ್ಥ ನಾಯಕ ಸಿಕ್ಕಿರುವುದು ದೇಶದ ಜನರ ಪುಣ್ಯವೇ ಸರಿ.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**